# ಕರ್ನಾಟಕ ವಿಧಾನ ಪರಿಷತ್ತು

**ಬುಧುವಾರ, 8ನೇ ಫೆಬ್ರವರಿ 2012 ಸದನವು**

**ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಮಧ್ಯಾಹ್ನ 11 ಗಂಟೆ 40 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಹೆಚ್. ಶಂಕರಮೂರ್ತಿ)**

**ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

**ಸಭಾಪತಿಯವರು:–** ಈಗ ಪ್ರಶ್ನೋತ್ತರ.

**1. ಸಚಿವರುಗಳಾದ ಶ್ರೀ ಲಕ್ಷ್ಮಣ ಸವದಿ, ಶ್ರೀ ಸಿ.ಸಿ. ಪಾಟೀಲ್ ಹಾಗೂ ಕೃಷ್ಣಪಾಲೇಮರ್ ರವರ ರಾಜೀನಾಮೆ ಕುರಿತು.**

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ದಯಮಾಡಿ ನನಗೆ ಎರಡು ನಿಮಿಷ ಮಾತನಾಡಲಿಕ್ಕೆ ಅವಕಾಶವನ್ನು ಕೊಡಿ.

**ಸಭಾಪತಿಯವರು:–** ಪ್ರಶ್ನೋತ್ತರವಾದ ಮೇಲೆ ತಮಗೆ ಮಾತನಾಡಲು ಅವಕಾಶವನ್ನು ಕೊಡುತ್ತೇನೆ. ಏನು ವಿಷಯ ಎಂದು ನೀವು ನನಗೆ ಮೊದಲು ತಿಳಿಸಬೇಕು.

**ಶ್ರೀಮತಿ ಮೋಟಮ್ಮ:–** ಇಲ್ಲ ಈಗಲೇ ಸಮಯಾವಕಾಶವನ್ನು ನೀಡಬೇಕು.

**ಸಭಾಪತಿಯವರು:–** ಹಾಗಾಗುವುದಿಲ್ಲ. ದಯಮಾಡಿ ನೀವು ನನ್ನ ಮಾತನ್ನು ಕೇಳಿ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ನಿನ್ನೆ ಏನು ಘಟನೆ ನಡೆದಿದೆ, ಅದಕ್ಕಿಂತ ಮಿಗಿಲಾಗಿ ನಿನ್ನೆ ನಾವು ಇಲ್ಲಿ ಕೆಲವೊಂದು ವಿಚಾರಗಳ ಬಗ್ಗೆ ಮಾತನಾಡಿದ್ದೇವೆ. St.Mary's island ನಲ್ಲಿ ನಡೆದಂಥ ಘಟನೆಯ ಬಗ್ಗೆ ಮಾತನಾಡಿದ್ದೇವೆ.

(ಗೊಂದಲ)

**ಸಭಾಪತಿಯವರು:–** ತಮಗೆ ಸದನ ನಡೆಸುವುದಕ್ಕೆ ಇಷ್ಟ ಇಲ್ಲ ಅಂದರೆ ನನ್ನ ಅಭ್ಯಂತರವೇನೂ ಇಲ್ಲ.

(ಗೊಂದಲ)

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ನಾವು ನಿಮಗೆ ಗೌರವ ಕೊಡುತ್ತೇವೆ. ಆದರೆ ಸರ್ಕಾರಕ್ಕೆ ಏನು ನೈತಿಕತೆ ಇದೆ ಎಂದು ಸರ್ಕಾರ ಹೇಳಬೇಕಲ್ಲ.

**ಸಭಾಪತಿಯವರು:-** ಯಾವುದು ಕಡತಕ್ಕೆ ಹೋಗತಕ್ಕದ್ದಲ್ಲ. ಒಬ್ಬರಿಗಿಂತ ಜಾಸ್ತಿ ಮಾತನಾಡಿರುವುದು ಕಡತಕ್ಕೆ ಹೋಗತಕ್ಕದ್ದಲ್ಲ.

(ಗೊಂದಲ)

(ಸದರಿ ಸಂದರ್ಭದಲ್ಲಿ ವಿರೋಧ ಪಕ್ಷದ ಸದಸ್ಯರು ಹಾಗೂ ಆಡಳಿತ ಪಕ್ಷದ ಸದಸ್ಯರು ಒಟ್ಟಿಗೆ ಮಾತನಾಡುತ್ತಿದ್ದರು ಹಾಗೂ ಗೊಂದಲದ ವಾತಾವರಣ ನಿರ್ಮಾಣವಾಗಿದ್ದು **ಶೇಮ್, ಶೇಮ್** ಎನ್ನುವ ಪದ ಬಿಟ್ಟು ಯಾವುದೇ ಮಾತುಗಳು ಕೇಳಿಸುತ್ತಿರಲಿಲ್ಲ.)

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಸದನದ ನಡವಳಿಕೆಗಳನ್ನು ದಾಖಲು ಮಾಡಿರುವುದಿಲ್ಲ.)**

**ಸಭಾಪತಿಯವರು:-** ಸಾಕು ದಯಮಾಡಿ ಎಲ್ಲರು ಕುಳಿತುಕೊಳ್ಳಿ. ಎಲ್ಲರೂ ಮಾತನಾಡುತ್ತಿದ್ದೀರಿ, ಇಲ್ಲಿ ಏನು ನಡೆಸುತ್ತಿದ್ದೀರಿ? ದಯಮಾಡಿ ಕುಳಿತುಕೊಳ್ಳಿ. ನಾನು ಯಾರ ಮಾತನ್ನು ಒಪ್ಪುವುದಿಲ್ಲ. ನಾನು ಎದ್ದು ನಿಂತಿದ್ದೇನೆ ಆದ್ದರಿಂದ ದಯಮಾಡಿ ಎಲ್ಲರು ಕುಳಿತುಕೊಳ್ಳಿ. ಸದನ ನಡೆಯುವುದಕ್ಕೆ ಒಂದು ಪದ್ಧತಿ ಇದೆ. ನಿಮಗೆ ಏನಾದರು ಕೇಳಬೇಕೆಂದಿದ್ದರೆ ನೀವು ನನಗೆ ಒಂದು ಲಿಖಿತ ಸೂಚನೆಯನ್ನು ಕೊಡಿ. ನಾನು ಅದನ್ನು ನೋಡಿ ನಮ್ಮ ನಿಯಮಾವಳಿಗಳ ಪುಸ್ತಕದ ಪ್ರಕಾರ ಅವಕಾಶ ಇದ್ದರೆ ಖಂಡಿತ ಮಾತನಾಡಲು ಅವಕಾಶ ಕೊಡುತ್ತೇನೆ.

(ಗೊಂದಲ)

ನೀವು ನನಗೂ ಮಾತನಾಡಲು ಬಿಡುವುದಿಲ್ಲವೇ? ನೀವು ನನಗೂ ಮಾತನಾಡಲು ಬಿಡುವುದಿಲ್ಲವೇ? ನಾನು ಸದನ ನಡೆಸುತ್ತಿಲ್ಲ. ಮೊದಲು ನನ್ನ ಮಾತನ್ನು ಕೇಳಿ. ನೀವು ಕೇಳುವುದಿಲ್ಲವೆಂದರೆ ಆಗುವುದಿಲ್ಲ. ನೀವು ನನಗೂ ಮಾತನಾಡಲು ಬಿಡುವುದಿಲ್ಲವೇ? ನೀವು ನನಗೂ ಮಾತನಾಡಲು ಬಿಡುವುದಿಲ್ಲವೆಂದರೆ ನಾನು ಕೈ ಮುಗಿದು ಹೋಗುತ್ತೇನೆ. ನೀವು ಸದನವನ್ನು ನಡೆಸಿಕೊಳ್ಳಿ.

(ಗೊಂದಲ)

ನೀವು ನನಗೂ ಮಾತನಾಡುವುದಕ್ಕೆ ಬಿಡುವುದಿಲ್ಲ ಅಂದರೆ ಹೇಗೆ? ಸದನ ನಡೆಸುವುದಕ್ಕೆ ಒಂದು ಪದ್ಧತಿ ಇದೆ. ನೀವು ಯಾವುದೇ ವಿಷಯದ ಬಗ್ಗೆ ಮಾತನಾಡುವುದಿದ್ದರೆ ಲಿಖಿತ ಮೂಲಕ ನನಗೆ ಸೂಚನೆ ಕೊಡಿ. ನಾನು ಅದಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ಏಕೆ ಅವಕಾಶ ಕೊಡುವುದಿಲ್ಲ, ಅವಕಾಶ ಕೊಡುವುದಾದರೆ ಏಕೆ ಅವಕಾಶ ಕೊಡುತ್ತೇನೆಂದು ಹೇಳುತ್ತೇನೆ. ಅದರ ಬಗ್ಗೆ ಚರ್ಚೆ ಮಾಡೋಣ. ಆದರೆ ನಮ್ಮ ಸದನದಲ್ಲಿ ಇದುವರೆಗೆ ನಡೆದುಕೊಂಡು ಬಂದಿರತಕ್ಕಂಥದ್ದು, ಹಿಂದಿನಿಂದ ನಡೆದುಕೊಂಡು ಬಂದಿರತಕ್ಕಂಥದ್ದು ಏನೆಂದರೆ, ಪ್ರಶ್ನೋತ್ತರ ಅವಧಿ ಮುಗಿದ ತಕ್ಷಣ ನಿಮಗೆ ಯಾವುದೇ ವಿಷಯದ ಬಗ್ಗೆ ಏನಾದರು ಪ್ರಸ್ತಾಪ ಮಾಡುವುದಿದ್ದರೆ ನಾನು ಅದಕ್ಕೆ ಅವಕಾಶ ಕೊಡುತ್ತೇನೆ. ಪ್ರಶ್ನೋತ್ತರ ವೇಳೆಗಿಂತ ಮುಂಚೆ ಅವಕಾಶ ನೀಡಬೇಕೆಂದರೆ ಆ ತರಹದ ಅವಶ್ಯಕತೆ ಇದ್ದರೆ ಹೇಳಬೇಕಾಗುತ್ತದೆ. ಪ್ರಶ್ನೋತ್ತರ ವೇಳೆಗಿಂತ ಮುಂಚೆ ಯಾವುದಕ್ಕಾದರು ಅವಕಾಶ ನೀಡುವುದಿದ್ದರೆ ನೀವು ವಿರೋಧ ಪಕ್ಷದವರು ನಿಲುವಳಿ ಸೂಚನೆಯ ಬಗ್ಗೆ ಕೇಳುತ್ತೀರಿ. ಈ ಹಿಂದೆ ಯಾರೇ ಸಭಾಪತಿಯವರಿದ್ದಾಗಲೂ, ಯಾವುದೇ ಸಂದರ್ಭದಲ್ಲಿಯೂ ಪ್ರಶ್ನೋತ್ತರ ಅವಧಿಗಿಂತ ಮುಂಚೆ ಪ್ರಶ್ನೋತ್ತರ ಅವಧಿಯನ್ನು ಪಕ್ಕಕ್ಕೆ ತಳ್ಳಿ ಬೇರೆ ವಿಷಯಗಳನ್ನು ಚರ್ಚೆ ಮಾಡಿರುವಂಥ ಉದಾಹರಣೆಗಳು ನನ್ನ ಮುಂದೆ ಇಲ್ಲ. **ಇಷ್ಟರಮೇಲೆ ಒಬ್ಬರಿಗಿಂತ ಹೆಚ್ಚು ಸದಸ್ಯರು ಎದ್ದು ನಿಂತು ಮಾತನಾಡುವುದನ್ನು ನಾವು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ**. ಸದನ ನಡೆಯಬೇಕೆಂದರೆ ಸದನ ನಡೆಸೋಣ. ಸದನವನ್ನು ಚೆನ್ನಾಗಿ ನಡೆಸೋಣ. ಸರ್ಕಾರ ವಿರೋಧ ಪಕ್ಷ ನನಗೆ ಇಬ್ಬರೂ ಒಂದೆ. ನನಗೆ ಯಾವುದೂ ಭಿನ್ನಾಭಿಪ್ರಾಯವಿಲ್ಲ. ನನಗೆ ಸದನ ನಡೆಯಬೇಕು. ಸದನ ನಡೆಸುವಾಗ ನೀವು ಸರ್ಕಾರಕ್ಕೆ ಏನು ಕೇಳಬೇಕೋ ಅದನ್ನು ಕೇಳಿ. ಸರ್ಕಾರದವರು ಏನು ಉತ್ತರ ಹೇಳಬೇಕೋ ಅದನ್ನು ಹೇಳುತ್ತಾರೆ. ಅವರ ಉತ್ತರ ನಿಮಗೆ ಸಮಾಧಾನ ಕೊಡುವ ಹಾಗೆ ಇರಬೇಕು, ಹಾಗೆಯೇ ಇರಬೇಕು ಎನ್ನುವುದು ನನಗೆ ಸಂಬಂಧ ಇಲ್ಲ. ನಾನು ಇಷ್ಟೇ ಹೇಳುತ್ತೇನೆ. ಅದೇನೆಂದರೆ ನಾನು ಸದನ

ನಡೆಸುತ್ತೇನೆ. 8–10 ಜನ ಎದ್ದು ನಿಂತು ಮಾತನಾಡುವ ಪದ್ಧತಿಯೇ ಸರಿಯಲ್ಲ. ಒಬ್ಬರಿಗಿಂತ ಹೆಚ್ಚು ಸದಸ್ಯರು ಒಟ್ಟಿಗೆ ನಿಂತು ಮಾತನಾಡುವ ಪದ್ಧತಿಯೇ ಸರಿಯಲ್ಲ. ದಯಮಾಡಿ ಯಾರಾದರು ಮಾತನಾಡುವುದಿದ್ದರೆ ಅದು ವಿರೋಧ ಪಕ್ಷದ ನಾಯಕರಿರಬಹುದು, ಅಥವಾ ಮತ್ತೊಬ್ಬರು ಇರಬಹುದು. ಯಾರೇ ಗೌರವಾನ್ವಿತ ಸದಸ್ಯರಿರಬಹುದು ಅವರೇನಾದರು ಮಾತನಾಡಬೇಕೆಂದರೆ, ಉತ್ತರ ಹೇಳಬೇಕೆಂದಿದ್ದರೆ ಖಂಡಿತವಾಗಿಯೂ ಕೇಳುವುದಕ್ಕೆ ನನಗೆ ಸಹನೆ ಇದೆ. ಆದರೆ ಎಲ್ಲರೂ ಒಟ್ಟಿಗೆ ಎದ್ದು ನಿಂತು ಮಾತನಾಡುವುದಾದರೆ ನಾನು ಒಪ್ಪುವುದಿಲ್ಲ. ಯಾರಾದರು ಒಬ್ಬರು ನೀವು ಎದ್ದು ನಿಂತು ಮಾತನಾಡುವ ಹಾಗಿದ್ದರೆ, ಯಾವ ವಿಷಯದ ಬಗ್ಗೆ ಮಾತನಾಡುತ್ತೀರೆಂದು ಹೇಳುವುದಾದರೆ ನೋಡೋಣ. ತಮಗೆಲ್ಲಾ ಗೊತ್ತಿರಲಿ ಎಂದು ಒಂದು ವಿಷಯ ಹೇಳುವವನಿದ್ದೇನೆ. ನಾನು ಇಷ್ಟು ಹೊತ್ತು ತಡವಾಗಿ ಬಂದಿರುವ ಕಾರಣವೇನೆಂದರೆ, ನಾನು ಸುಮ್ಮನೆ ಕುಳಿತಿರಲಿಲ್ಲ. ನಿಯಮಾವಳಿಗಳ ಪುಸ್ತಕವನ್ನು ನೋಡುತ್ತಿದ್ದೆ, ಹಳೆಯ ನಡವಳಿಕೆಗಳನ್ನು ನೋಡುತ್ತಿದ್ದೆ. ಹಿಂದಿನ ಸಭಾಪತಿಯವರು ಏನು ಮಾಡಿದ್ದಾರೆ, ಪಾರ್ಲಿಮೆಂಟ್‌ನಲ್ಲಿ ಏನಾಗಿದೆ, ರಾಜ್ಯ ಸಭೆಯಲ್ಲಿ ಏನಾಗಿದೆ, ಇದನ್ನೆಲ್ಲಾ ನೋಡಿ ಬಂದಿರುವ ಕಾರಣ ಸ್ವಲ್ಪ ತಡವಾಗಿ ಬಂದಿದ್ದೇನೆ. ನಾನೇನು ಯೋಚನೆ ಮಾಡಿದ್ದೆ ಅಂದರೆ ನಾನು ಸದನಕ್ಕೆ ತಡವಾಗಿ ಬಂದಿದ್ದಕ್ಕೆ ಕ್ಷಮೆ ಕೇಳಬೇಕೆಂದಿದ್ದೆ. ಆದರೆ ನೀವು ಅದಕ್ಕೂ ಬಿಡಲಿಲ್ಲ. ಸದನ 11 ಗಂಟೆಗೆ ಇದೆ ಅಂದರೆ ನಾನು ಸಾಮಾನ್ಯವಾಗಿ 11 ಗಂಟೆ 10 ನಿಮಿಷದೊಳಗಾಗಿ ಸದನವನ್ನು ಪ್ರಾರಂಭ ಮಾಡುತ್ತಿದ್ದೆ. ಆದರೆ ಇಂದು 11 ಗಂಟೆ 40 ನಿಮಿಷಗಳ ನಂತರ ಸದನವನ್ನು ಪ್ರಾರಂಭ ಮಾಡುತ್ತಿದ್ದೇನೆ. ಅಷ್ಟು ತಡವಾಗಿ ಸದನವನ್ನು ಏಕೆ ಪ್ರಾರಂಭ ಮಾಡುತ್ತಿದ್ದೇನೆಂದು ಹೇಳುವುದಕ್ಕೆ ಹೊರಟಿದ್ದೆ. ನೀವು ಅದಕ್ಕೂ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ ಸಾಧ್ಯ? ಈ ಘಟನೆ ನಡೆದಿರುವಂಥದ್ದು ಎಲ್ಲರಿಗೂ ತಿಳಿದಿರುವಂಥ ವಿಷಯವಾಗಿದೆ. ಅದರಲ್ಲಿ ಮುಚ್ಚು ಮರೆ ಏನೂ ಇಲ್ಲ. ಆ ಘಟನೆಯ ಹಿನ್ನಲೆಯಲ್ಲಿ ಏನೇನಾಗಬೇಕು, ಏನಾಗುತ್ತದೆ, ಹೇಗಾಗುತ್ತದೆ, ಹೇಗಿರಬಹುದು, ಸದಸ್ಯರ ಭಾವನೆಗಳೇನಿರುತ್ತವೆ,

ಅವರ ಮನಃಸ್ಥಿತಿ ಯಾವ ರೀತಿ ಇರುತ್ತದೆ, ಇವುಗಳ ಹಿನ್ನೆಲೆಯಲ್ಲಿ ರಾಜ್ಯ ಸಭೆಯಲ್ಲಿ ಏನು ನಡೆಯಿತೆಂದು ತೆಗೆಸಿ, ಅಲ್ಲಿಂದ ತರಿಸಿ ಅದನ್ನು ನೋಡಿ, ಅಧ್ಯಯನ ಮಾಡಿ, ನಮ್ಮ ನಿಯಮಾವಳಿಗಳು ಏನು ಹೇಳುತ್ತವೆ ಅದನ್ನು ಅಧ್ಯಯನ ಮಾಡಿ ನಾನು ಸದನಕ್ಕೆ ಬರುವುದು ಸ್ವಲ್ಪ ತಡವಾಯಿತು. ಇಲ್ಲದಿದ್ದರೆ ಇಷ್ಟು ತಡ ಆಗುತ್ತಿರಲಿಲ್ಲ. ಈ ಎಲ್ಲಾ ಹಿನ್ನಲೆಯಲ್ಲಿ ನನಗೆ ಅನಿಸುವುದೇನೆಂದರೆ ಎಂತಹದ್ದೇ ಘಟನೆ ನಡೆದಿರಲಿ, ಸರ್ಕಾರದ ಪರವಾಗಿ ಮುಖ್ಯಮಂತ್ರಿಗಳು ಅಥವಾ ಸಚಿವರು ಒಂದು ಹೇಳಿಕೆ ಮಾಡಬೇಕೆಂದಿದ್ದೇವೆ, ಪ್ರಶ್ನೋತ್ತರ ವೇಳೆಗಿಂತ ಮುಂಚೆಯೇ ಹೇಳಿಕೆಯನ್ನು ಮಾಡುತ್ತೇವೆಂದು ಹೇಳಿದರೆ ಮಾತ್ರ ನನಗೆ ಅವಕಾಶ ನೀಡುವುದಕ್ಕೆ ಅಧಿಕಾರ ಇದೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಕೇಳುವುದೇನೆಂದರೆ ಅವರೇನಾದರು ಹೇಳಿಕೆ ಮಾಡುವ ಹಾಗಿದ್ದರೆ ಈಗಲೇ ಮಾಡಬಹುದು ಅಥವಾ ಪ್ರಶ್ನೋತ್ತರ ವೇಳೆಯ ನಂತರ ಕೂಡ ಮಾಡಬಹುದು. ಅದು ಸರ್ಕಾರದ ಇಷ್ಟ. ಈಗ ಮಾನ್ಯ ವೀರಣ್ಣ ಮತ್ತಿ ಕಟ್ಟಿಯವರು ಮಾತನಾಡಲಿ.

**ಶ್ರೀ ವೀರಣ್ಣ ಮತ್ತಿಕಟ್ಟಿ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ತಾವು ಹೇಳಿದ್ದನ್ನು ನಾವು ಒಪ್ಪುತ್ತೇವೆ. ಈ ರಾಜ್ಯದಲ್ಲಿ ಸಂವಿಧಾನ ಬದ್ಧತೆಯಿಂದ ನಡೆಯತಕ್ಕಂಥ ಕಲಾಪಗಳಿಗೋಸ್ಕರ ಆ ಪುಸ್ತಕವನ್ನು ನಾವೇ ಮಾಡಿ ನಿಯಮಾವಳಿಗಳನ್ನು ಮಾಡಿಕೊಂಡಿದ್ದೇವೆ. ಅದನ್ನೆಲ್ಲಾ ಮೀರಿ ಸಂವಿಧಾನ ಬದ್ಧತೆಯಿಂದ ನಡೆಯತಕ್ಕಂಥ ಸದನಗಳಿಗೆ ಮೀರಿ, ಪುಸ್ತಕದಲ್ಲಿರತಕ್ಕಂಥ ನಿಯಮಾವಳಿಗಳನ್ನೆಲ್ಲಾ ಗಾಳಿಗೆ ತೂರಿ ಅದಕ್ಕೆ ಅವಮಾನವಾಗುವ ರೀತಿಯಲ್ಲಿ ನಡೆದುಕೊಂಡಿದ್ದಕ್ಕೆ ಇದೊಂದು ವಿಶಿಷ್ಟವಾದಂಥ ಪರಿಸ್ಥಿತಿ ಇದೆ. ವಿಶಿಷ್ಟವಾದ ಸಂದರ್ಭದಲ್ಲಿ ತಾವು ಈ ನಿಯಮಾವಳಿಗಳನ್ನು ಬದಿಗೊತ್ತಿ ಈ ವಿಷಯಕ್ಕೆ ಆದ್ಯತೆಯನ್ನು ನೀಡಿ. ಇದು ಯಾವುದು ನಿಯಮಾವಳಿಗಳ ಪ್ರಕಾರ ನಡೆದಿಲ್ಲ ಎಂದು ತಮಗೆ ಗೊತ್ತಿದೆ. ಉಳಿದ ವಿಚಾರಗಳಿಗೆ ನಾವು ತಮಗೆ ಅತ್ಯಂತ ಗೌರವ ಕೊಡುತ್ತೇವೆ. ನೀವು ಹೇಳಿದ್ದೆಲ್ಲಾ ನೂರಕ್ಕೆ ನೂರು ಸತ್ಯ. ಆದರೆ ಅದು ಯಾವಾಗ? ಈ ಸದನ ಹಾಗೂ ಆ ಸದನ ಸಂವಿಧಾನಬದ್ಧವಾಗಿ ನಾವು ರಚಿಸಿದಂಥ

ನಿಯಮಾವಳಿಗಳ ಪ್ರಕಾರ ನಡೆದಾಗ. ಅದನ್ನು ಮೀರಿ ಈ ರಾಜ್ಯದ ಆರು ಕೋಟಿ ಜನರಿಗೆ ಅವರ ಭಾವನೆಗಳಿಗೆ ನೋವು ಆದಾಗ ತಾವು ದಯಮಾಡಿ ಈ ವಿಷಯವನ್ನು ವಿಶೇಷ ಪ್ರಕರಣ ಎಂದು ಪರಿಗಣಿಸಿ ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮಾತನಾಡಲಿಕ್ಕೆ ಅವಕಾಶ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೆ, ವಿಧಾನ ಸಭೆ ಇರಬಹುದು, ವಿಧಾನ ಪರಿಷತ್ತು ಇರಬಹುದು, ಅವರೆಡು ಈ ರಾಜ್ಯದ ಜನರ ಆಶೋತ್ತರಗಳನ್ನು, ಈ ರಾಜ್ಯದ ಜನರ ಭಾವನೆಗಳನ್ನು ಗೌರವಿಸಬೇಕಾದಂಥ, ಎಲ್ಲಾ ಮಹತ್ವದ ಜವಾಬ್ದಾರಿಗಳನ್ನು ಹೊಂದಿರುವಂಥ ಸದಸ್ಯರುಗಳು ನಾವೆಲ್ಲರೂ ಇದ್ದೇವೆ, ಅನುಭವಸ್ಥರೂ ಇದ್ದೇವೆ. ನಮ್ಮ ಮೂಲಕ ನಮ್ಮ ರಾಜ್ಯದ ಜನತೆಗೆ ಒಂದು ಹೆಮ್ಮೆ, ಗೌರವ ಬರುವಂಥ ವ್ಯವಸ್ಥೆಯನ್ನು ನಾವೆಲ್ಲರೂ ರೂಪಿಸುವುದಕ್ಕೆ ಬದ್ಧರಾಗಬೇಕಾದಂಥ ಅಗತ್ಯತೆ ಇದ್ದೆ ಇದೆ. ನಾವು ಇಲ್ಲಿ ಜನರ ಧ್ವನಿಯಾಗಿ ಇದ್ದೇವೆ. ನಾವು ಜನರಿಗೆ ಉತ್ತರವನ್ನು ಕೊಡಬೇಕಾದಂಥ ಹೊಣೆಗಾರಿಕೆ, ಜವಾಬ್ದಾರಿಯಲ್ಲಿದ್ದೇವೆ. ಈ ಸದನ, ಅಂದರೆ ವಿಧಾನ ಪರಿಷತ್ತು ಬಹಳ ಘನತೆ, ಗಂಭೀರತೆಯನ್ನು ಹೊಂದಿರುವಂಥ ಚಿಂತಕರ, ಅನುಭವಿಗಳ ನಮ್ಮೆಲ್ಲರ ಒಂದು ಸದನ ಇದು. ಈ ಸದನದಲ್ಲಿ ಏನು ನಡೆಯುತ್ತದೆ ಎನ್ನುವುದನ್ನು ನೋಡುವುದಕ್ಕೆ ಜನ ಇನ್ನು ಹೆಚ್ಚು ಕಾತುರದಿಂದ ನೋಡುತ್ತಿರುತ್ತಾರೆ. ಹಾಗಾಗಿ ಈ ಸದನದ ಜವಾಬ್ದಾರಿ ಅತೀ ಹೆಚ್ಚು ಇದೆ. ನಾವೆಲ್ಲಾ ಇಲ್ಲಿ ಅನುಭವಿ ಸದಸ್ಯರುಗಳಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ, ಮಾನ್ಯ ವಿರೋಧ ಪಕ್ಷದ ಸದಸ್ಯರಲ್ಲಿ ಹಾಗೂ ತಮ್ಮಲ್ಲಿ ನನ್ನ ವಿನಂತಿ ಏನೆಂದರೆ ಯಾವ ಯಾವ ಘಟನೆಗಳ ಬಗ್ಗೆ ಯಾರು ಯಾರು ಉಲ್ಲೇಖಿಸಬೇಕೆಂದಿದ್ದಾರೆ ಪ್ರಶ್ನೋತ್ತರವಾದ ನಂತರ ನಿಯಮಾವಳಿಗಳಡಿಯಲ್ಲಿ ಅವರು ಯಾವ ಯಾವ ರೀತಿಯಲ್ಲಿ ಸೂಚನೆಗಳನ್ನು ಕಳುಹಿಸಿದ್ದಾರೋ ಅದರ ಪ್ರಕಾರ ತಾವು ಅವರಿಗೆ ಅವಕಾಶವನ್ನು ಕೊಡಿ. ಸರ್ಕಾರದ ಹತ್ತಿರ ಉತ್ತರ ಇದೆ. ಯಾವುದೇ ಸಂದರ್ಭದಲ್ಲಿ, ಜನತೆಯ ಯಾವುದೇ

ಸಮಸ್ಯೆಗಳನ್ನು ತಾವು ಉಲ್ಲೇಖಿಸಲು ಬಯಸಿದರೆ ನಾವು ಹಿಂದೆ ಸರಿಯುವುದಿಲ್ಲ. ನಾವು ಜವಾಬ್ದಾರಿಯುತವಾಗಿ ನಡೆದುಕೊಳ್ಳುತ್ತೇವೆ. ನಾವು ಉತ್ತರವನ್ನು ಕೊಡುವುದಕ್ಕೆ ಸಿದ್ದರಿದ್ದೇವೆ. ನಾವು ಉತ್ತರ ಕೊಡುವುದಕ್ಕೆ ಸಿದ್ಧರಿದ್ದೇವೆ, ನೀವು ಅದನ್ನು ಕೇಳುವುದಕ್ಕೆ ಸಿದ್ದರಿದ್ದೀರಿ. ಆದರೆ ಯಾವ ಸಂದರ್ಭ, ಹೇಗೆ ಎಂಬುದನ್ನು ತಾವು ತಮ್ಮ ವಿವೇಚನೆ ಬಳಸಿ ಕಾನೂನಿನ ಅಡಿಯಲ್ಲಿ ಅದಕ್ಕೆ ಅವಕಾಶ ಮಾಡಿಕೊಡಬಹುದಾಗಿದೆ. ನಾವು ಸರ್ಕಾರದ ಪರವಾಗಿ ಉತ್ತರ ಕೊಡುವುದಕ್ಕೆ ಸಿದ್ಧರಿದ್ದೇವೆ. ಪ್ರಶ್ನೋತ್ತರ ಅವಧಿಗೆ ಮೊದಲೇ ಉತ್ತರ ಕೊಡಿ ಎಂದರೆ ನಾವು ಅದಕ್ಕೆ ಕೂಡ ಸಿದ್ದರಿದ್ದೇವೆ. ಆದರೆ ಸದನದ ಪರಂಪರೆ ಏನಿದೆ, ಪ್ರಶ್ನೋತ್ತರ ಅವಧಿ ಅತಿ ಮುಖ್ಯವಾದಂತಹ ಒಂದು ಘಟ್ಟ. ನಮ್ಮ ನಿಯಮಾವಳಿಗಳ ಪ್ರಕಾರ, ನಮ್ಮೆಲ್ಲರ ಅನುಭವಗಳ ಪ್ರಕಾರ ಪ್ರಶ್ನೋತ್ತರ ಅತ್ಯಂತ ಮಹತ್ವವಾದುದಾಗಿದ್ದು ಪ್ರಶ್ನೋತ್ತರ ಅವಧಿಯಲ್ಲಿ ಬರುವಂತಹ ಪ್ರಶ್ನೆಗಳಲ್ಲಿಯೂ ಕೂಡ ಜನರ ಭಾವನೆಗಳು ವ್ಯಕ್ತವಾಗುತ್ತವೆ. ಜನರ ಸಮಸ್ಯೆಗಳಿಗೆ ಸಂಬಂಧಿಸಿದಂತೆಯೇ ತಾವು ಉತ್ತರಗಳನ್ನು ಬಯಸುವವರಿದ್ದೀರಿ. ಅಂದರೆ ಪ್ರಶ್ನೋತ್ತರ ಅವಧಿಗೂ ಸಹ ಅದರದ್ದೇ ಆದಂತಹ ಗಾಂಭೀರ್ಯತೆ ಮತ್ತು ಪ್ರಾಮುಖ್ಯತೆ ಇರುತ್ತದೆ. ನಾನು ಸರ್ಕಾರವಾಗಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಸರ್ಕಾರದ ಪರವಾಗಿ ಈಗಲೇ ಹೇಳಿಕೆ ಮಾಡಿ ಎಂದು ತಾವು ಹೇಳುವುದಾದರೆ ನಾನು ಹೇಳಿಕೆ ನೀಡಲು ಸಿದ್ಧನಿದ್ದೇನೆ. ಇಲ್ಲ, ಪ್ರಶ್ನೋತ್ತರ ಅವಧಿಯ ನಂತರ ಹೇಳಿಕೆ ಮಾಡಿ ಎಂದರೆ ನಾನು ಅದಕ್ಕೂ ಸಿದ್ಧನಿದ್ದೇನೆ.

**ಶ್ರೀ ಮತ್ತಿಕಟ್ಟಿ ವೀರಣ್ಣ (ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸರ್ಕಾರದ ಪರವಾಗಿ ಇಷ್ಟು ವಿಷಯಗಳನ್ನು ತಿಳಿಸಿದ್ದಾರೆ. ನಿಯಮ, ನಿಯಮದ ಅಡಿಯಲ್ಲಿ ಎನ್ನುವಂತಹ ಪ್ರಶ್ನೆ ಇಲ್ಲ. ಈ ರಾಷ್ಟ್ರದಲ್ಲಿಯೇ ಅತಿ ಹೆಚ್ಚು ಪರಂಪರೆಯನ್ನು ಪ್ರತಿಪಾದಿಸಿದವರು ವಿಧಾನ ಪರಿಷತ್ತು, ಅತ್ಯಂತ ಹಳೆಯ people's representation ಇದ್ದಂತಹದ್ದಿದು. 125 ವರ್ಷಗಳನ್ನು ನಾವು ಈಗಾಗಲೇ ಪೂರೈಸಿದ್ದೇವೆ. ನಮ್ಮ ವಿಧಾನಸಭೆ ಮತ್ತು ವಿಧಾನ ಪರಿಷತ್ತು, ಈ ರಾಷ್ಟ್ರಕ್ಕೆ

ನಮ್ಮ ನಾಯಕತ್ವ, ಸಭಾಪತಿಗಳಿಂದ ಹಿಡಿದು ಮುಖ್ಯಮಂತ್ರಿಗಳಿಂದ ಹಿಡಿದು ಈ ಸರ್ಕಾರದಲ್ಲಿ ಇಡೀ ರಾಷ್ಟ್ರಕ್ಕೆ ಮಾರ್ಗದರ್ಶನ ಮಾಡಿದಂತಹ ಜನರನ್ನು ಕೊಟ್ಟಂಥದ್ದು. ಕರ್ನಾಟಕ ಒಂದು ಮಾದರಿ ರಾಜ್ಯ ಎಂದು ಈ ರಾಷ್ಟ್ರದಲ್ಲಿ ನಂಬಿದ್ದಾರೆ. ಏಕೆಂದರೆ ತಮಗೂ ಗೊತ್ತಿದೆ, ತಾವು ಸಭಾಪತಿಗಳಾಗಿ ಪೀಠಾಸೀನ ಅಧಿಕಾರಿಗಳ ಸಮ್ಮೇಳನದಲ್ಲಿ ಹಲವಾರು ಬಾರಿ ಭಾಗವಹಿಸಿದ್ದೀರಿ, ಅದೇರೀತಿ ನಾನು ಸಹ ಭಾಗವಹಿಸಿದ್ದೇನೆ. ಸನ್ಮಾನ್ಯ ಜಗದೀಶ್ ಶೆಟ್ಟರ್‌ರವರು, ಮಾನ್ಯ ಸುದರ್ಶನ್‌ರವರು ಸಹ ಹೋಗಿಬಂದಿದ್ದಾರೆ. ಈ ರಾಷ್ಟ್ರದಲ್ಲಿ ನಮಗೆ, ಕರ್ನಾಟಕದ ಜನತೆಗೆ ವಿಶಿಷ್ಟವಾದಂತಹ ಗೌರವವಿದೆ. ಅದನ್ನು ನಾವು ನಡೆಸಿಕೊಂಡು ಉಳಿಸಿಕೊಂಡು ಬರಬೇಕಾದರೆ ಅದು ಒಂದು ತಪಸ್ಸಿದ್ದಂತೆ, ಅದನ್ನು ಬಹಳ ಪರಿಶ್ರಮದಿಂದ ಮತ್ತು ನಿಯತ್ತಿನಿಂದ ಸಾಧಿಸಬೇಕಾಗುತ್ತದೆ. ಆದರೆ ಆ ಮೌಲ್ಯಗಳಿಗೆ ಹೊಡೆತ ಬಿದ್ದಾಗ ತಾವು ಇದಕ್ಕೆ ಕಟ್ಟುಬೀಳಬಾರದು. ದಯಮಾಡಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಸರ್ಕಾರಿ ಈ ಬಗ್ಗೆ ಉತ್ತರ ಕೊಡುವುದಕ್ಕೆ ಅವಕಾಶವಿದೆ, ಆದ್ದರಿಂದ ನಾನು ಈ ವಿಚಾರದಲ್ಲಿ ಸರ್ಕಾರದ ಬಗ್ಗೆ ಹೇಳುತ್ತಿಲ್ಲ. ಇದು ಇಡೀ ರಾಜ್ಯದ ಜನತೆಯ ಗೌರವ ಅಷ್ಟೇ ಅಲ್ಲ, ಈ ರಾಷ್ಟ್ರದಲ್ಲಿ ಅತ್ಯುತ್ತಮವಾದ ಪರಂಪರೆಯನ್ನು ಹೊಂದಿರುವಂತಹ ಎರಡೂ ಸದನಗಳ ಗೌರವದ ಪ್ರಶ್ನೆಯೂ ಅಡಗಿದೆ. ನಾನು ವ್ಯಕ್ತಿಗತವಾಗಿ ಯಾರನ್ನೂ ದೂಷಿಸುತ್ತಿಲ್ಲ. ನನಗೆ ಬಹಳ ನೋವಾಗಿದೆ, ನನ್ನ ಜೊತೆ ಇದ್ದವರು ಸಹಿತ ಕೆಲವರು ಈ ರೀತಿ ನಡೆದುಕೊಂಡಿದ್ದಾರೆ. ನನ್ನ ಮನಸ್ಸಿಗೆ ಬಹಳ ನೋವಾಗಿದೆ, ರಾತ್ರಿಯೆಲ್ಲಾ ನಾವು ನಿದ್ದೆ ಮಾಡಿಲ್ಲ. ಅದಕ್ಕೋಸ್ಕರ ದಯಮಾಡಿ ಈ ರಾಜ್ಯದ ಜನತೆಯ ಹಿತದೃಷ್ಟಿಯಿಂದ, ಈ ನಮ್ಮ ಪರಂಪರೆಯ ದೃಷ್ಟಿಯಿಂದ ಕರ್ನಾಟಕದ ಎರಡೂ ಸದನಗಳ ಗೌರವದ ದೃಷ್ಟಿಯಿಂದ ದಯಮಾಡಿ ಈ ವಿಷಯವನ್ನು ಪ್ರಸ್ತಾಪಿಸಲು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಸುತ್ತಿದ್ದೇನೆ.

**ಶ್ರೀ ವಿ.ಆರ್. ಸುದರ್ಶನ್:–** ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:–** ಮಾನ್ಯ ಸುದರ್ಶನ್‌ರವರೇ, ತಾವು ದಯಮಾಡಿ ಒಂದು ನಿಮಿಷ ಕುಳಿತುಕೊಳ್ಳಿ. ಯಾವ ವಿಷಯದ ಬಗ್ಗೆ ಚರ್ಚೆ ಮಾಡಬೇಕಾಗಿದೆ ಎನ್ನುವಂತಹ ವಿಷಯವನ್ನು ಯಾರೂ ನನಗೆ ಕೊಟ್ಟಿಲ್ಲ. ಈ ಪರಿಸ್ಥಿತಿ ಯಾವ ರೀತಿಯಾಗಿದೆ ಎಂದರೆ, ಇವೊತ್ತು ಇರತಕ್ಕಂತಹ ವಾತಾವರಣದ ಹಿನ್ನೆಲೆಯಲ್ಲಿ ಏನು ಚರ್ಚೆ ಮಾಡುತ್ತಿದ್ದೇವೆ ಎನ್ನುವಂಥದ್ದು ಇಲ್ಲಿ ಕುಳಿತಿರುವಂತಹ ಎಲ್ಲರಿಗೂ ಗೊತ್ತಿದೆ, ಇಡೀ ರಾಜ್ಯದ ಜನತೆಗೆ ಸಹ ಗೊತ್ತಿದೆ. ಆದರೆ ನನ್ನೆದುರಿಗೆ ಯಾವುದೇ ರೀತಿಯ ಬೇಡಿಕೆಯಾಗಲಿ ಅಥವಾ ಲಿಖಿತವಾಗಿರತಕ್ಕಂತಹ ಒಂದು ಸೂಚನೆಯಾಗಲಿ ಇಲ್ಲ. ಈ ಹಿನ್ನೆಲೆಯಲ್ಲಿ ನಾನು ಒಂದು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಇ. ಕೃಷ್ಣಪ್ಪ:–** ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಲು ಅವಕಾಶ ಕೋರಿ ನಾನು ತಮಗೆ ಸೂಚನಾ ಪತ್ರವೊಂದನ್ನು ಕಳುಹಿಸಿಕೊಟ್ಟಿದ್ದೇನೆ.

**ಶ್ರೀ ವಿ.ಆರ್. ಸುದರ್ಶನ್:–** ಮಾನ್ಯ ಸಭಾಪತಿಯವರೇ ನಾವು ಪ್ರಶ್ನೋತ್ತರ ವೇಳೆಗೆ ಸಂಬಂಧಪಟ್ಟಂತೆಯೇ ಬರುತ್ತಿದ್ದೇವೆ.

**ಸಭಾಪತಿಯವರು:–** ದಯಮಾಡಿ ಎಲ್ಲರೂ ಒಂದು ನಿಮಿಷ ಕುಳಿತುಕೊಳ್ಳಿ. ಮಾನ್ಯ ಕೃಷ್ಣಪ್ಪನವರೇ, ತಾವು ಕಳುಹಿಸಿಕೊಟ್ಟಿರುವಂತಹ ಶೂನ್ಯವೇಳೆಯ ಪ್ರಸ್ತಾವ ಪ್ರಶ್ನೋತ್ತರ ವೇಳೆಯ ನಂತರವೇ ಬರುತ್ತದೆ. ನನಗೂ ಸಹ ನಿಯಮಾವಳಿಗಳು ಗೊತ್ತಿವೆ. ಪ್ರಶ್ನೋತ್ತರ ಸಮಯದ ನಂತರ ಶೂನ್ಯವೇಳೆಯ ಸಮಸ್ಯೆಗಳು ಬರುತ್ತವೆಯೇ ಹೊರತಾಗಿ ಅಲ್ಲಿಯವರೆಗೆ ಅವುಗಳನ್ನು ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ. ಹಾಗಾಗಿ ನನಗೆ ಶೂನ್ಯವೇಳೆಯಲ್ಲಿ ಮಾತನಾಡಲು ಅವಕಾಶ ಕೊಡಿ ಎಂದು ಬರೆದು ಕಳುಹಿಸಿಕೊಟ್ಟಿರುವಂತಹ ವಿಷಯವನ್ನು ಪ್ರಸ್ತಾಪಿಸಲು ಈಗಲೇ ಅವಕಾಶ ಕೊಡಿ ಎಂದು ಬರೆದು ಕಳುಹಿಸಿಕೊಟ್ಟಿರುವಂತಹ ವಿಷಯವನ್ನು ಪ್ರಸ್ತಾಪಿಸಲು ಈಗಲೇ ಅವಕಾಶ ಕೊಡಿ ಎಂದು ಕೇಳಿದರೆ ಆ ರೀತಿ ಅವಕಾಶ ಕೊಡಲು ಸಾಧ್ಯವಿಲ್ಲ ಎಂದು ನಾನು ಹೇಳಬೇಕಾಗುತ್ತದೆ. ಖಂಡಿತವಾಗಿಯೂ ಅದು

ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಮಾನ್ಯ ಸಚಿವರಾದ ವಿಶ್ವೇಶ್ವರ ಹೆಗಡೆ ಕಾಗೇರಿಯವರು ನನ್ನ ಕೊಠಡಿಗೆ ಬಂದು, ನಾನು ಸರ್ಕಾರದ ಪರವಾಗಿ ಒಂದು ಹೇಳಿಕೆಯನ್ನು ಮಾಡಬೇಕೆಂದಿದ್ದೇನೆ, ತಾವು ನನಗೆ ಈ ದಿವಸ ಸದನ ಪ್ರಾರಂಭವಾದ ಕೂಡಲೇ ಅವಕಾಶ ಮಾಡಿಕೊಡಬೇಕೆಂದು ನನ್ನನ್ನು ಕೇಳಿಕೊಂಡರು. ನಾನು ಅವರಿಗೆ ಏನು ಹೇಳಿದ್ದೇನೆ ಎಂದರೆ ತಾವು ಪ್ರಶ್ನೋತ್ತರ ಅವಧಿಯ ನಂತರ ಆ ಹೇಳಿಕೆಯನ್ನು ಮಾಡುವುದು ಒಳ್ಳೆಯದು, ಇದು ಪದ್ಧತಿ ಎಂದು ಹೇಳಿದ್ದೇನೆ. ನನಗೆ ಮೊದಲೇ ಹೇಳಿಕೆ ಮಾಡುವುದಕ್ಕೆ ಅವಕಾಶ ಕೊಟ್ಟರೆ ಸಂತೋಷ, ಅಕಸ್ಮಾತ್ ತಾವು ಪ್ರಶ್ನೋತ್ತರ ಅವಧಿಯ ನಂತರವೇ ಹೇಳಿಕೆ ಮಾಡಬೇಕು ಎಂದು ತೀರ್ಮಾನ ಮಾಡಿದರೆ ಅದಕ್ಕೂ ನಾನು ಬದ್ಧನಾಗಿದ್ದೇನೆ. ರಾಜ್ಯದ ಜನತೆಯೆಲ್ಲಾ ಬಹಳ ಕಾತುರತೆಯಿಂದ ಮನನೊಂದು ನೋಡಿರತಕ್ಕಂತಹ ಈ ಸಂಗತಿಯ ಹಿನ್ನೆಲೆಯಲ್ಲಿ ಸದನ ಪ್ರಾರಂಭವಾದ ತಕ್ಷಣ ಸರ್ಕಾರದ ಪರವಾಗಿ ನನಗೆ ಈ ಹೇಳಿಕೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಕೇಳಿದ್ದಾರೆ. ಅದಕ್ಕಾಗಿ ಇವೊತ್ತಿನ ಪರಿಸ್ಥಿತಿ, ತಮ್ಮೆಲ್ಲಾ ಹಿರಿಯರ ಅಭಿಪ್ರಾಯ ನೋಡಿದರೆ ಈ ಚರ್ಚೆಯನ್ನು ಪ್ರಾರಂಭ ಮಾಡುವುದಕ್ಕೆ ಬರುವುದಿಲ್ಲ, ಆದರೆ ಹೇಳಿಕೆ ಮಾಡುವುದಕ್ಕೆ ನಾನು ಅವಕಾಶ ಕೊಡಬಹುದು. ಸಚಿವರೇ, ತಾವು ಒಂದು ಹೇಳಿಕೆ ಮಾಡಿ. ಪ್ರಶ್ನೋತ್ತರ ವೇಳೆಯ ನಂತರ ವಿರೋಧ ಪಕ್ಷದವರು ಬೇರೆ ರೀತಿಯಲ್ಲಿ ಆ ವಿಷಯವನ್ನು ತೆಗೆದುಕೊಂಡು ಬನ್ನಿ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ತಮಗೂ ನೋವಾಗಿದೆ. ಮಾನ್ಯ ಸಚಿವರು ನಮ್ಮ ಅನಿಸಿಕೆಗಳನ್ನು ಕೇಳಿದ ನಂತರ ಅವರು ಹೇಳಿಕೆ ಮಾಡಬೇಕೇ ಹೊರತು ಸುಮ್ಮನೆ ಹೇಳಿಕೆ ಮಾಡಿದರೆ ಸರಿಯಾಗುವುದಿಲ್ಲ.

(ಗೊಂದಲ)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೆಲ್ಲರ ಭಾವನೆಗಳನ್ನು ಮತ್ತು ರಾಜ್ಯದ ಜನತೆಯ ಭಾವನೆಗಳನ್ನು ಅರ್ಥೈಸಿಕೊಂಡಿರುವ ಹಿನ್ನೆಲೆಯಲ್ಲಿ . . .

(ಗೊಂದಲ)

**ಸಭಾಪತಿಯವರು:–** ಸಚಿವರು ಸರ್ಕಾರದ ಪರವಾಗಿ ಹೇಳಿಕೆ ಕೊಡುತ್ತಿದ್ದಾರೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ...

(ಗೊಂದಲ)

**ಸಭಾಪತಿಯವರು:–** ನಾನು ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿಲ್ಲ. ಸಚಿವರು ಹೇಳಿಕೆ ಮಾಡಲಿ, ಅವರು ಏನು ಹೇಳುತ್ತಾರೆಯೋ ಕೇಳೋಣ.

(ಗೊಂದಲ)

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ಸರ್ಕಾರವನ್ನು ವಿಸರ್ಜನೆ ಮಾಡಲಾಗುತ್ತಿದೆಯೇ? ಹಾಗಿದ್ದರೆ ಹೇಳಿ.

**ಸಭಾಪತಿಯವರು:–** ಮಾನ್ಯ ಮೋಟಮ್ಮನವರೇ, ವಿರೋಧ ಪಕ್ಷದ ನಾಯಕರಾಗಿರುವ ತಾವು ಸಹ ನನಗೆ ಯಾವುದೇ ರೀತಿಯ ಸಂದೇಶ ಕಳುಹಿಸಿಕೊಟ್ಟಿಲ್ಲ. ಹೇಳಿಕೆ ಮಾಡುತ್ತೇನೆ ಎಂದು ಕೇಳಿಲ್ಲ. ಬರವಣಿಗೆಯಲ್ಲಿ ಕೊಟ್ಟಿಲ್ಲ. ಆದರೆ . . .

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, burning issue ಇದ್ದಾಗ ಅದನ್ನು ಬರವಣಿಗೆಯಲ್ಲಿ ಕೊಡಬೇಕಾದ ಅಗತ್ಯ ಇರುವುದಿಲ್ಲ, suo moto ತಮ್ಮಲ್ಲಿ ನಾನು ಪ್ರಾರ್ಥನೆ ಮಾಡಬಹುದು.

**ಸಭಾಪತಿಯವರು:–** ಮಾನ್ಯ ವಿರೊಧ ಪಕ್ಷದ ನಾಯಕರೇ, ನಾನು ಹೇಳುವುದನ್ನು ತಾವು ಕೇಳುವುದಕ್ಕೇ ತಯಾರಿಲ್ಲದಿದ್ದರೆ ಹೇಗೆ? ನನ್ನ ಕಛೇರಿಗೆ ಬಂದು ಸಚಿವರು ಏನು ಹೇಳಿದರು ಎಂಬುದನ್ನು ನಾನು ಸದನದ ಗಮನಕ್ಕೆ ತಂದಿದ್ದೇನೆ. ಆ ಹಿನ್ನೆಲೆಯಲ್ಲಿ ನೀವು ಈ ವಿಚಾರವನ್ನು ಹೇಳುತ್ತಿದ್ದೀರಿ. ಆದರೆ ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೋರಿರುವಂತಹ ಯಾವುದೇ ಸೂಚನೆ ಇಲ್ಲ. ಸರ್ಕಾರದ ಪರವಾಗಿ ಸಚಿವರು ಒಂದು ಹೇಳಿಕೆಯನ್ನು ಕೊಡುವುದಾಗಿ ತಿಳಿಸಿದ್ದಾರೆ. ಅವರು ಹೇಳಿಕೆ ಕೊಡಲಿ, ಆಮೇಲೆ ಮುಂದಿನದನ್ನು ನೋಡೋಣ.

(ಗೊಂದಲ)

**ಶ್ರೀ ವಿ.ಆರ್. ಸುದರ್ಶನ್:–** ಮಾನ್ಯ ಸಭಾಪತಿಯವರೇ, ನಾವು ತಮ್ಮ ಗಮನವನ್ನು ಸೆಳೆಯುತ್ತಿದ್ದೇವೆ.

(ಗೊಂದಲ)

**ಸಭಾಪತಿಯವರು:–** ಸರ್ಕಾರದ ಪರವಾಗಿ ಹೇಳಿಕೆ ಮಾಡುವುದಕ್ಕೆ ಮಾನ್ಯ ಸಚಿವರಿಗೆ ಅಧಿಕಾರ ಇದೆ.

(ಗೊಂದಲ)

**ಶ್ರೀಮತಿ ಮೋಟಮ್ಮ:–** ಇಲ್ಲ, ಸುಮ್ಮಸುಮ್ಮನೆ ಹೇಳಿಕೆ ಕೊಡುವಂತಹ ಅಗತ್ಯ ಏನಿದೆ? ನಾವು ಹೇಳುವುದನ್ನು ಕೇಳಿದ ನಂತರ ಅವರು ಹೇಳಿಕೆ ಮಾಡುವುದಿದ್ದರೆ ಮಾಡಲಿ. ನಾವು ಹೇಳುವುದನ್ನು ಅವರು ಮೊದಲು ಕೇಳಬೇಕು. ನಾವು ಕರ್ನಾಟಕದ ಆರು ಕೋಟಿ ಜನರ ಪರವಾಗಿ ಮಾತನಾಡುತ್ತಿದ್ದೇವೆ. ಈ ಘಟನೆಯಿಂದ ನಿಮಗೆ ನೋವಾಗಿಲ್ಲದಿರಬಹುದು, ಆದರೆ ಇಡೀ ರಾಜ್ಯದ ಜನತೆಗೆ ನೋವಾಗಿದೆ. ಇಡೀ ರಾಜ್ಯದ ಜನತೆ ತಲೆತಗ್ಗಿಸುವಂತಹ ಘಟನೆ ನಡೆದಿದೆ.

(ಗೊಂದಲ)

**ಸಭಾಪತಿಯವರು:–** ಒಬ್ಬರಿಗಿಂತ ಹೆಚ್ಚು ಜನರು ಎದ್ದುನಿಂತು ಮಾತನಾಡಿದರೆ ಅದು ಕಡತಕ್ಕೆ ಹೋಗುವುದಿಲ್ಲ, ಅದನ್ನು ರೆಕಾರ್ಡ್ ಮಾಡತಕ್ಕದ್ದಲ್ಲ.

**ಸಭಾಪತಿಯವರು:–** ಸಚಿವರೇ ತಾವು ಹೇಳಿಕೆ ಮಾಡಿ.

## 2. ಸಚಿವರ ಹೇಳಿಕೆ

ಸಚಿವರುಗಳಾದ ಶ್ರೀಯುತ ಲಕ್ಷ್ಮಣ ಎಸ್. ಸವದಿ ಶ್ರೀ ಸಿ.ಸಿ. ಪಾಟೀಲ್ ಹಾಗೂ ಶ್ರೀ ಕೃಷ್ಣ ಪಾಲೇಮಾರ್‌ರವರು ತಮ್ಮ ಸ್ಥಾಪನೆಗಳಿಗೆ ರಾಜೀನಾಮೆ ನೀಡಿರುವ ಕುರಿತು.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ತಮ್ಮ ಅನುಮತಿಯ ಮೇರೆಗೆ ನಾನು ಸರ್ಕಾರದ ಪರವಾಗಿ ಈ ಹೇಳಿಕೆಯನ್ನು ಕೊಡಬಯಸುತ್ತಿದ್ದೇನೆ. ಗೌರವಾನ್ವಿತ ವಿರೋಧ ಪಕ್ಷದ ನಾಯಕರು ಮತ್ತು ಎಲ್ಲ ಸದಸ್ಯರಲ್ಲಿ ನಾನು ವಿನಂತಿ ಮಾಡುತ್ತಿದ್ದೇನೆ. ನೆನ್ನೆ ನಡೆದಂತಹ ಘಟನೆಯ ಹಿನ್ನೆಲೆಯಲ್ಲಿ ನಮ್ಮ ಸರ್ಕಾರದ ಸಚಿವರಾದಂತಹ ಶ್ರೀಯುತ ಲಕ್ಷ್ಮಣ ಎಸ್. ಸವದಿಯವರು, ಸಿ.ಸಿ. ಪಾಟೀಲ್‌ರವರು ಹಾಗೂ ಕೃಷ್ಣ ಪಾಲೇಮಾರ್‌ರವರು ಇವೊತ್ತು ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ತಮ್ಮ ಸಚಿವ ಸ್ಥಾನಕ್ಕೆ ರಾಜಿನಾಮೆಯನ್ನು ಸಲ್ಲಿಸಿದ್ದಾರೆ. ಮುಖ್ಯಮಂತ್ರಿಯವರು ಅದನ್ನು ಮಾನ್ಯ ರಾಜ್ಯಪಾಲರಿಗೆ ಕಳುಹಿಸಿಕೊಟ್ಟಿದ್ದಾರೆ. ರಾಜ್ಯಪಾಲರು ಅದನ್ನು ಅಂಗೀಕಾರ ಮಾಡಿದ್ದಾರೆ ಎಂಬುದನ್ನು ನಾನು ಈ ಸದನದ ಗಮನಕ್ಕೆ ತರಬಯಸುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಸಚಿವರು ಸರ್ಕಾರದ ಪರವಾಗಿ ಹೇಳಿಕೆ ಮಾಡಿದ್ದಾರೆ. ಆ ವಿಷಯದ ಬಗ್ಗೆ ಈಗ ಚರ್ಚೆ ಇಲ್ಲ.

(ಗೊಂದಲ)

**ಶ್ರೀ ವಿ.ಆರ್. ಸುದರ್ಶನ್:-** ಮಾನ್ಯ ಸಭಾಪತಿಯವರೇ, ನಾನು ಆಗಿನಿಂದಲೂ ನಿಂತಿದ್ದೇನೆ, ತಮ್ಮ ಗಮನವನ್ನು ಸೆಳೆಯುತ್ತಿದ್ದೇನೆ. ದಯವಿಟ್ಟು ನಾನು ಹೇಳುವುದನ್ನು ಕೂಡ ತಾವು ಸ್ವಲ್ಪ ಕೇಳಬೇಕು.

**ಸಭಾಪತಿಯವರು:-** ಸಚಿವರು ಹೇಳಿಕೆ ಮಾಡುವುದಕ್ಕೆ ಕೂಡ ಬಿಡುವುದಿಲ್ಲ ಎಂದರೆ ಹೇಗೆ ? ತಾವೀಗ ಮಾತನಾಡಿ.

**ಶ್ರೀ ವಿ.ಆರ್. ಸುದರ್ಶನ್:-** ಮಾನ್ಯ ಸಭಾಪತಿಯವರೇ, ಸದನ ಪ್ರಾರಂಭವಾಗಿದೆ, ತಾವು ಕೂಡ ಪೀಠದಲ್ಲಿ ಕುಳಿತಿದ್ದೀರಿ. ನಾನು ತಮ್ಮ ಮುಖಾಂತರ ಹೇಳಬಯಸುವುದೇನೆಂದರೆ, ಸಭಾನಾಯಕರು ಸದನಕ್ಕೆ ಬರಬೇಕು, ಮುಖ್ಯಮಂತ್ರಿಗಳು ಕೂಡ ಬರಬೇಕು. ಏಕೆಂದರೆ ಇದು ಪ್ರಶ್ನೋತ್ತರಗಳ ಸಮಯ. ನಾವು ಸರ್ಕಾರಕ್ಕೆ ಪ್ರಶ್ನೆಗಳನ್ನು ಕಳುಹಿಸಿಕೊಟ್ಟಿದ್ದೇವೆ. ಆದರೆ ಈ ಸಂದರ್ಭದಲ್ಲಿ ತಾವು ಒಂದು ವಿಚಾರವನ್ನು ಸರ್ಕಾರಕ್ಕೆ ತಿಳಿಸಬೇಕಾಗುತ್ತದೆ. ಆ ಮೂಲಕ ಈ ರಾಜ್ಯದ ಜನತೆಗೆ ನಾವು ಈ ವೇದಿಕೆಯ ಮುಖಾಂತರ, ಈ ಸದನದ ಮುಖಾಂತರ ಹೇಳುತ್ತಿದ್ದೇವೆ. ನಮ್ಮ ಪ್ರಶ್ನೆಗಳಿಗೆ ಉತ್ತರಗಳನ್ನು ಹೇಳತಕ್ಕಂತಹ ನೈತಿಕವಾದಂತಹ ಶಕ್ತಿ ಮತ್ತು ಹಕ್ಕನ್ನು ಸರ್ಕಾರ ಕಳೆದುಕೊಂಡಿದೆ.

(ಗೊಂದಲ)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-** ಮಾನ್ಯ ಸಭಾಪತಿಯವರೇ, ಅವರು ಹೇಳುವುದನ್ನೆಲ್ಲಾ ಕೇಳುವುದಕ್ಕೆ ನಾವು ತಯಾರಿಲ್ಲ. ಹಿಂದೆ ಯಾರ್ಯಾರು ಏನೇನು ಮಾಡಿದ್ದಾರೆ ಎಂಬುದು ನಮಗೂ ಗೊತ್ತಿದೆ. ನಮ್ಮ ಸರ್ಕಾರಕ್ಕೆ ಆ ನೈತಿಕತೆ, ಆ ಬದ್ಧತೆ ಇರುವುದರಿಂದಾಗಿದೆಯೇ ಈ ವಿಚಾರದಲ್ಲಿ ತೆಗೆದುಕೊಂಡಿರುವ ನಿರ್ಣಯವನ್ನು ಘೋಷಣೆ ಮಾಡಿರುವುದು. ನಮ್ಮ ಈ ಸರ್ಕಾರಕ್ಕೆ ನೈತಿಕತೆ ಇದೆ. ಜವಾಬ್ದಾರಿ ಇದೆ, ನಮಗೆ ಹೊಣೆಗಾರಿಕೆ ಇದೆ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರ ಸದಸ್ಯರುಗಳು ರಾಜಕೀಯ ಲಾಭ ತೆಗೆದುಕೊಳ್ಳುವುದಕ್ಕೆ, ರಾಜಕೀಯ ಉದ್ದೇಶವನ್ನಿಟ್ಟುಕೊಂಡು ಈ ರೀತಿ ಚರ್ಚೆ ಮಾಡತಕ್ಕಂಥದ್ದು ಸರಿಯಲ್ಲ.

(ಗೊಂದಲ)

**ಸಭಾಪತಿಯವರು:–** ರೆಕಾರ್ಡ್‌ನಲ್ಲಿ ಹೋಗತಕ್ಕದ್ದಲ್ಲ.

(ಈ ಹಂತದಲ್ಲಿ ನಡವಳಿಕೆಗಳನ್ನು ದಾಖಲಿಸದಂತೆ ಸಭಾಪತಿಯವರು ಸೂಚಿಸಿದರು)

(ಗೊಂದಲ)

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ನಂಗಾನಾಚ್ ಮಾಡಿಸುವವರಿಂದ ನಾವು ನೈತಿಕತೆಯನ್ನು ಕಲಿಯಬೇಕಾಗಿಲ್ಲ. ಕಾಂಗ್ರೆಸ್ ಪಕ್ಷದವರೇ ಆದಂತಹ ಎನ್.ಡಿ. ತಿವಾರಿಯವರು ಆಂಧ್ರದ ರಾಜ್ಯಪಾಲರು ನಿಮಗೆ ನಂಗಾನಾಚ್ ಮಾಡುವುದನ್ನು ಕಲಿಸಿಕೊಟ್ಟಿದ್ದಾರೆ. ನಿಮ್ಮಿಂದ ನಾವು ನೈತಿಕತೆಯನ್ನು ಕಲಿಯಬೇಕಾಗಿಲ್ಲ.

(ಗೊಂದಲ)

**ಸಭಾಪತಿಯವರು:–** ಒಬ್ಬರಿಗಿಂತ ಹೆಚ್ಚು ಜನರು ಎದ್ದುನಿಂತು ಮಾತನಾಡಿದರೆ ಅದು ಕಡತಕ್ಕೆ ಹೋಗುವುದಿಲ್ಲ, ಅದನ್ನು ರೆಕಾರ್ಡ್ ಮಾಡತಕ್ಕದ್ದಲ್ಲ.

(ಈ ಹಂತದಲ್ಲಿ ನಡವಳಿಕೆಗಳನ್ನು ದಾಖಲಿಸದಂತೆ ಮಾನ್ಯ ಸಭಾಪತಿಯವರು ಸೂಚಿಸಿದರು)

(ಗೊಂದಲ)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೇ, ಈ ರೀತಿ ಈ ಸದನವನ್ನು ದುರ್ಬಳಕೆ ಮಾಡಿಕೊಳ್ಳುವ ಪ್ರವೃತ್ತಿಯನ್ನು ವಿರೋಧ ಪಕ್ಷದವರು ಬಿಡಬೇಕು. ಸರ್ಕಾರ ಈ ವಿಚಾರದಲ್ಲಿ ಇಷ್ಟು ಸ್ಪಷ್ಟವಾದಂತಹ ನಿಲುವನ್ನು ತೆಗೆದುಕೊಂಡಿದೆ ಎನ್ನುವಂತಹ ಒಂದು ಹೇಳಿಕೆಯನ್ನು ನೀಡಿದೆ ನಂತರ ಕೂಡ ವಿರೋಧ ಪಕ್ಷದವರು ಈ ರೀತಿ ನಡೆದುಕೊಳ್ಳುವುದು ಸರಿಯಲ್ಲ. ರಾಜ್ಯದ ಜನತೆ ನಮ್ಮ ಸರ್ಕಾರದ ಈ ನಿಲುವನ್ನು ಒಪ್ಪಿದೆ. ವಿರೋಧ ಪಕ್ಷದವರು ಇಂತಹ ಸಂದರ್ಭವನ್ನು ದುರ್ಬಳಕೆ ಮಾಡಿಕೊಳ್ಳುವ ಪ್ರವೃತ್ತಿಯನ್ನು ಬಿಡಬೇಕು.

(12 ಗಂಟೆ)

(ಗೊಂದಲ)

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೇ, ...

(ಗೊಂದಲ)

**ಸಭಾಪತಿಯವರು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ನಾಣಯ್ಯನವರು ಏನೋ ಮಾತನಾಡಬಯಸುತ್ತಿದ್ದಾರೆ. ಅವರು ಏನು ಹೇಳುತ್ತಾರೆಯೋ ಕೇಳೋಣ.

(ಗೊಂದಲ)

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ಈ ಸರ್ಕಾರಕ್ಕೆ ನೈತಿಕ ಹಕ್ಕಿಲ್ಲ ಎನ್ನುವುದನ್ನು ಹೇಳುವುದಕ್ಕೆ ದಯಮಾಡಿ ನಮಗೆ ತಾವು ಅವಕಾಶ ಮಾಡಿಕೊಡಿ.

**ಸಭಾಪತಿಯವರು:–** ಹಿರಿಯ ಸದಸ್ಯರಾದ ಮಾನ್ಯ ನಾಣಯ್ಯನವರು ಮಾತನಾಡಬಯಸುತ್ತಿದ್ದಾರೆ, ಅವರು ಏನು ಹೇಳುತ್ತಾರೆಯೋ ಕೇಳೋಣ.

**ಶ್ರೀ ವಿ.ಆರ್. ಸುದರ್ಶನ್:–** ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:–** ಪ್ರಶ್ನೋತ್ತರ ಅವಧಿಯನ್ನು ನಡೆಸಬಾರದು ಎಂದಲ್ಲವೆ ತಾವು ಹೇಳುತ್ತಿರುವುದು.

**ಶ್ರೀ ವಿ.ಆರ್. ಸುದರ್ಶನ್:–** ಮಾನ್ಯ ಸಭಾಪತಿಯವರೇ, ತಾವು ಮಾನ್ಯ ನಾಣಯ್ಯನವರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ. ಅದಕ್ಕಾಗಿ ನಾನು ಕುಳಿತುಕೊಳ್ಳುತ್ತೇನೆ. ಅವರು ಮಾತನಾಡಿದ ನಂತರ ದಯವಿಟ್ಟು ತಾವು ನನಗೆ ವಿವರಣೆ ನೀಡುವುದಕ್ಕೆ ಕೂಡ ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರಾದ ವಿಮಲಾಗೌಡರು ಮತ್ತು ವಿರೋಧ ಪಕ್ಷದ ನಾಯಕರು ತಮ್ಮ ಸ್ಥಾನದಲ್ಲಿ ಕುಳಿತು ಮಾತಿನ ಚಕಮಕಿ ನಡೆಸುತ್ತಿದ್ದರು)**

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿಮಲಾಗೌಡರು ನನ್ನ ಜೊತೆ ಜಗಳ ಮಾಡುತ್ತಿದ್ದಾರೆ. ದಯವಿಟ್ಟು ತಮ್ಮ ಸ್ಥಾನದಲ್ಲಿ ಉಪ ಸಭಾಪತಿಯವರನ್ನು ಕುಳ್ಳಿರಿಸಿ ತಾವು ತಮ್ಮ ಕೊಠಡಿಯೊಳಗೆ ಹೋಗಿಬಿಡಿ.

**ಸಭಾಪತಿಯವರು:–** ಇದು ಅತ್ತೆ–ಸೊಸೆ ಜಗಳ, ನಾನೇನು ಮಾಡಲಿ ಹೇಳಿ. ನಮ್ಮ ಕೈಯಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ...

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ಶ್ರೀಮತಿ ಭಾರತಿ ಶೆಟ್ಟಿಯವರು ಲೈಗಿಂಕ ಕಿರುಕುಳದ ಬಗ್ಗೆ ಅಷ್ಟೆಲ್ಲಾ ಮಾತನಾಡಿದರಲ್ಲಾ ಈಗ ಸರ್ಕಾರದಲ್ಲಿನ ಮಂತ್ರಿಗಳು ಈ ರೀತಿ ಮಾತನಾಡಬಹುದೇ, ಅದರ ಬಗ್ಗೆ ಸ್ವಲ್ಪ ಮಾತನಾಡಿ ಅಮ್ಮ.

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೇ, ಬಹಳ ಜನ ಮಂತ್ರಿಗಳು ತಮ್ಮ ಸ್ಥಾನವನ್ನು ಕಳೆದುಕೊಳ್ಳುತ್ತಿರುವುದರಿಂದ ನಿಮಗೂ ಸಚಿವರಾಗುವಂತಹ ಅವಕಾಶ ಬರಬಹುದು. ಇದರಿಂದ ನಿಮಗೆ ಒಳ್ಳೆಯದೇ ಆಯಿತು. ಆದ್ದರಿಂದ ತಾವೇನೂ ಆ ಬಗ್ಗೆ ಚಿಂತಿಸಬೇಡಿ.

**ಸಭಾಪತಿಯವರು:–** ಒಂದು ನಿಮಿಷ ಎಲ್ಲರೂ ಕುಳಿತುಕೊಳ್ಳಿ, ಮಾನ್ಯ ನಾಣಯ್ಯನವರೇ, ತಾವು ಮಾತನಾಡಿ.

**ಶ್ರೀ ಎಂ.ಸಿ. ನಾಣಯ್ಯ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಮ್ಮ ಕರ್ನಾಟಕ ವಿಧಾನ ಸಭೆ ಮತ್ತು ವಿಧಾನ ಪರಿಷತ್ತು ಈ ಎರಡೂ ಸದನಗಳನ್ನು ಹೊಂದಿರತಕ್ಕಂತಹ ರಾಜ್ಯ. ಕೆಳಮನೆಯ ಸದಸ್ಯರಾಗಿದ್ದು ಮಂತ್ರಿಯಾಗಿರತಕ್ಕಂತಹವರು ಈ ಸದನಕ್ಕೆ ಕೂಡ ಬಂದು ಉತ್ತರ ಕೊಡತಕ್ಕಂತಹ ಅಧಿಕಾರ, ಈ ಸದನದಲ್ಲಿ ಸದಸ್ಯರಾಗಿರತಕ್ಕಂತಹವರು ಮಂತ್ರಿಗಳಾದರೆ ಕೆಳಮನೆಗೆ ಹೋಗಿ ಉತ್ತರ ಹೇಳತಕ್ಕಂತಹ ಅಧಿಕಾರ ಅವರಿಗಿರುತ್ತದೆ. ಅದನ್ನು ಹೊರತುಪಡಿಸಿದರೆ ಈ ಸದಸನದ ಸದಸ್ಯರು ಆ ಸದನಕ್ಕೆ ಹೋಗುವಂತಿಲ್ಲ, ಅದೇರೀತಿ ಆ ಸದನದ ಸದಸ್ಯರು ಈ ಸದನಕ್ಕೆ ಬರುವಂತಿಲ್ಲ. ಇದು ನಾವು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅಳವಡಿಸಿಕೊಂಡಿರತಕ್ಕಂತಹ ಒಂದು ಪದ್ಧತಿ. ಇವೊತ್ತು ನಾವು ಚರ್ಚೆ ಮಾಡುತ್ತಿರುವಂತಹ ಸಂದರ್ಭದಲ್ಲಿ ಸರ್ಕಾರದ ವತಿಯಿಂದ ಎದ್ದು ನಿಂತು ಯಾವುದೋ ಒಂದು ವಿಚಾರಕ್ಕೆ ಸಂಬಂಧಿಸಿದಂತೆ ವಿರೋಧ ಪಕ್ಷದಿಂದ ಪ್ರಸ್ತಾಪ ಮಾಡಿರತಕ್ಕಂತಹ ವಿಚಾರವನ್ನು ಅಲ್ಲಿಗೇ ಅದನ್ನು ಮೊಟಕುಗೊಳಿಸುವಂತಹ ಪರಿಸ್ಥಿತಿಯನ್ನು ತಾವು ನಿರ್ಮಾಣ ಮಾಡಬಾರದು. ನೀವು ಉತ್ತರ ಹೇಳತಕ್ಕಂತಹ ಸಂದರ್ಭದಲ್ಲಿ ನಾವು ಕೂಡ ಈ ಭಾಗದಲ್ಲಿ ಎದ್ದುನಿಂತು ನೀವು ಆ ಹೇಳಿಕೆಯನ್ನು ಕೊಡಬೇಡಿ ಎಂದು ಹೇಳತಕ್ಕಂತಹ ಪರಿಸ್ಥಿತಿ ನಿರ್ಮಾಣವಾಗಬಾರದು.

ಕರ್ನಾಟಕ ರಾಜ್ಯದ ಸಚಿವರ ಬಗ್ಗೆ ನೆನ್ನೆ ದೃಶ್ಯ ಮಾಧ್ಯಮದಲ್ಲಿ ಮತ್ತು ಇವೊತ್ತು ಎಲ್ಲಾ ಪತ್ರಿಕೆಗಳಲ್ಲಿ ಬಂದಿರತಕ್ಕಂತಹ ವಿಚಾರ ಇಡೀ ರಾಷ್ಟ್ರದ ಉದ್ದಗಲಕ್ಕೂ ಹರಡಿದೆ. ಇದು ಕರ್ನಾಟಕ ರಾಜ್ಯದ, ಕರ್ನಾಟಕ ವಿಧಾನ ಮಂಡಲದ ಘನತೆಯ ಪ್ರಶ್ನೆಗಿಂತಲೂ ಹೆಚ್ಚಾಗಿ ವಿಧಾನ ಮಂಡಲಗಳ ಸಾರ್ವಭೌಮತೆಯ ಪ್ರಶ್ನೆಯೂ ಆಗುತ್ತದೆ ಎಂಬುದನ್ನು ಕೂಡ ಗಮನದಲ್ಲಿಟ್ಟುಕೊಳ್ಳಬೇಕು. ಏಕೆಂದರೆ ನಾವೆಲ್ಲಾ ಈ ಸದನದ ಸದಸ್ಯರು. ಒಬ್ಬ ಸದಸ್ಯರ ಒಂದು ಅನೈತಿಕ ಅಥವಾ ಒಂದು ಅನುಚಿತ ವರ್ತನೆ ಅಥವಾ ಒಬ್ಬ ಮಂತ್ರಿಯ ಅನುಚಿತ ವರ್ತನೆಯ ಪರಿಣಾಮ ವಿಧಾನ ಮಂಡಲದ ಮೇಲೆ ಸಂಪೂರ್ಣವಾಗಿ ಬೀರುತ್ತದೆ ಎನ್ನುವಂತಹ ಕಟುಸತ್ಯವನ್ನು ಕೂಡ ನಾವು

ಅರ್ಥ ಮಾಡಿಕೊಳ್ಳಬೇಕು. ಆದುದರಿಂದ ನಮ್ಮ ಚರ್ಚೆ ಗಂಭೀರ ಸ್ವರೂಪದ ಚರ್ಚೆ ಆಗಬೇಕಾಗುತ್ತದೆ. ಇದನ್ನು ಬಿಟ್ಟು ನಾವು ಲಘುವಾಗಿ ಚರ್ಚೆ ಮಾಡತಕ್ಕಂಥದ್ದು, ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ ಎರಡೂ ಕಡೆಯವರು ಒಬ್ಬರಿಗಿಂತ ಒಬ್ಬರು ಗಟ್ಟಿ ಎಂದು ತೋರಿಸಿಕೊಳ್ಳುವುದಕ್ಕೆ ಇದು ಕುಸ್ತಿಯ ಅಖಾಡ ಅಲ್ಲ. ಈ ವಿಚಾರವನ್ನು ನಾನು ಅತ್ಯಂತ ನೋವಿನಿಂದ ಹೇಳುತ್ತಿದ್ದೇನೆ. ಇದರಿಂದ ಎಲ್ಲರಿಗೂ ನೋವಾಗಿದೆ. ಏಕೆಂದರೆ ಸದನದಲ್ಲಿ ಕಾನೂನುಗಳನ್ನು ರಚನೆ ಮಾಡುವವರೇ ನಾವು, ನಾವೇ ಮಾಡಿರತಕ್ಕಂತಹ ಕಾನೂನುಗಳನ್ನು ನಾವೇ ಸದನದ ಒಳಗಡೆ ಉಲ್ಲಂಘನೆ ಮಾಡತಕ್ಕಂತಹ ಪರಿಸ್ಥಿತಿ ನಿರ್ಮಾಣವಾದರೆ ಬಹುಶಃ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಮ್ಮ ನಡವಳಿಕೆ ನೈತಿಕ ಅದಃಪತನದ ಪಾತಾಳಕ್ಕೆ ಹೋಗುತ್ತಿರುವುದನ್ನು ಸಹ ಅದು ಸೂಚಿಸುತ್ತದೆ. ಈ ಹಿನ್ನೆಲೆಯಲ್ಲಿ ವಿರೋಧ ಪಕ್ಷದ ನಾಯಕಿಯಾಗಿರುವಂತಹ ಶ್ರೀಮತಿ ಮೋಟಮ್ಮನವರು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ತಾವು ಅವರನ್ನು ಕೇಳಿದ್ದೀರಿ, ಯಾವ ನಿಯಮದ ಅಡಿಯಲ್ಲಿ ಯಾವುದೇ ತರಹದ ಒಂದು ನೋಟೀಸ್ ಬಂದಿದ್ದರೆ ನಾನು ಖಂಡಿತವಾಗಿಯೂ ಚರ್ಚೆಗೆ ಅವಕಾಶ ಮಾಡಿಕೊಡುತ್ತಿದ್ದೆ ಎನ್ನುವಂತಹ ಮಾತನ್ನು ಹೇಳುವ ಮೂಲಕ ಆ ಪೀಠದಲ್ಲಿ ಕುಳಿತುಕೊಂಡು ಮಾಡಬೇಕಾದಂತಹ ಕರ್ತವ್ಯವನ್ನು ತಾವು ಮಾಡಿದ್ದೀರಿ. ಆದರೆ ಇದು ಮಂತ್ರಿಗಳ ವಿಚಾರ. ಸದಸ್ಯರ ವಿಚಾರವಾಗಿದ್ದರೆ, ವಿಧಾನ ಸಭೆಯಲ್ಲಿ ಕೇವಲ ಒಬ್ಬ ಸದಸ್ಯರ ವಿಚಾರವಾಗಿದ್ದರೆ ಈ ಸದನದಲ್ಲಿ ಅದನ್ನು ನಾವು ಚರ್ಚೆ ಮಾಡತಕ್ಕಂತಹ ಸಂದರ್ಭ ಬಂದಾಗಲೂ ಕೂಡ ಅದಕ್ಕೆ ಕೆಲವು ಇತಿಮಿತಿಗಳಿವೆ. ಆದರೆ ಮಂತ್ರಿಗಳು, ಅವರು ಈ ಸದನದ ಸದಸ್ಯರಾಗಿರಲಿ ಅಥವಾ ಆ ಸದನದ ಸದಸ್ಯರಾಗಿರಲಿ ಅವರ ವಿಚಾರ ಬಂದಾಗ ಎರಡು ಸದನಗಳಲ್ಲಿ ಕೂಡ ಆ ವಿಷಯವಾಗಿ ಚರ್ಚೆ ಮಾಡತಕ್ಕಂತಹ ಅವಕಾಶ ಇದೆ. ಈ ಹಿನ್ನೆಲೆಯಲ್ಲಿ ನೆನ್ನೆ ನಡೆದಿರುವ ಘಟನೆಯ ಬಗ್ಗೆ ಎಲ್ಲರೂ ಅವರವರ ಪ್ರತಿಕ್ರಿಯೆಯನ್ನು ಕೊಟ್ಟಿರತಕ್ಕಂಥದ್ದನ್ನು ನಾವು ನೋಡಿದ್ದೇವೆ. ಈ ಘಟನೆಯಿಂದಾಗಿ ಜನರ ಮನಸ್ಸಿಗೂ ಬಹಳ ನೋವಾಗಿದೆ. ಇದರಿಂದ ಸರ್ಕಾರಕ್ಕಾಗಲಿ, ವಿರೋಧ ಪಕ್ಷದ ಸ್ಥಾನದಲ್ಲಿರುವ

ನಮಗಾಗಲಿ ಘನತೆ ಬರುವುದಿಲ್ಲ. ಎರಡೂ ಸದನಗಳ ಘನತೆಗೆ ಧಕ್ಕೆ ಉಂಟಾದ ಮೇಲೆ ನಾಳೆ ಸಾರ್ವಜನಿಕರು ನಮ್ಮ ಅರ್ಹತೆಯನ್ನೇ ಪ್ರಶ್ನೆ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇವರು ಈ ಸದನಗಳಲ್ಲಿ ಕುಳಿತು ಕೆಲಸ ಮಾಡುವಂತಹ ಅರ್ಹತೆಯನ್ನು ಪಡೆದಿದ್ದಾರೆಯೆ ಎಂದು ಚರ್ಚೆ ಮಾಡುವವರು ಈ ಸದನದ ಹೊರಗಡೆ ಇರತಕ್ಕಂತಹವರು. ಆದ್ದರಿಂದ ನಾನು ಸರ್ಕಾರದವರಲ್ಲಿ ಒಂದು ಮಾತನ್ನು ಕೇಳಬಯಸುತ್ತೇನೆ. ನಾವು ವಿರೋಧ ಪಕ್ಷದಿಂದ ಈ ವಿಚಾರಗಳನ್ನು ಪ್ರತಿಪಾದನೆ ಮಾಡಿದಾಗ ಸ್ವಲ್ಪಮಟ್ಟಿಗೆ ಉದ್ವೇಗ ಇರಬಹುದು ಅಥವಾ ಅದರಲ್ಲಿ ಅತಿಶಯೋಕ್ತಿ ಕೂಡ ಇರಬಹುದು, ಆದರೆ ಸರ್ಕಾರದವರಲ್ಲಿ ಸಹನೆ ಇರಬೇಕಾಗುತ್ತದೆ. ಕಾರಣ, you are at the receiving end today. ನಿಮ್ಮಲ್ಲಿರುವಂತಹ ಸಹನೆ, ನೀವು ಅದಕ್ಕೆ ಕೊಡಬೇಕಾಗಿರುವಂತಹ ಉತ್ತರ ಮತ್ತು ನೀವು ನಮ್ಮ ವಿರೋಧ ಪಕ್ಷದವರ ಜೊತೆಯಲ್ಲಿ ಇದನ್ನು ಎತ್ತಿಕೊಂಡು ಯಾವ ರೀತಿಯಲ್ಲಿ ಇದನ್ನು ಬಗೆಹರಿಸಬೇಕು ಎನ್ನುವಂತಹ ಪ್ರಶ್ನೆಯೇ ಹೊರತು ಇದು ನಾನು ಮೇಲೆ, ನಾನು ಮೇಲೆ ಎಂದು ಹೇಳತಕ್ಕಂತಹ ಪ್ರಶ್ನೆ ಅಲ್ಲ. ಆದ್ದರಿಂದ ಇವೊತ್ತು ಮಾನ್ಯ ಮಂತ್ರಿಗಳು ಪ್ರಶ್ನೋತ್ತರಕ್ಕೆ ಮೊದಲೇ ಸರ್ಕಾರದ ಪರವಾಗಿ ಒಂದು ಹೇಳಿಕೆಯನ್ನು ಮಾಡಿದರು. ಆ ಹೇಳಿಕೆಯ ಪ್ರತಿ ನಮಗೆಲ್ಲರಿಗೂ ಕೂಡ ಲಭ್ಯವಾಗುವಂತೆ ಇಷ್ಟು ಹೊತ್ತಿಗೆ ಸರ್ಕಾರ ವ್ಯವಸ್ಥೆ ಮಾಡಬೇಕಾಗಿತ್ತು. ದಯವಿಟ್ಟು ಈಗಲಾದರೂ ಎಲ್ಲರಿಗೂ ಅದರ ಪ್ರತಿಗಳನ್ನು ಕಳುಹಿಸಿಕೊಡಿ. ನೆನ್ನೆ ವಿಧಾನಸಭೆಯಲ್ಲಿ 3 ಜನ ಮಂತ್ರಿಗಳಿಗೆ ಸಂಬಂಧಪಟ್ಟಂತೆ ನಡೆದಿರತಕ್ಕಂತಹ ಘಟನೆಗೆ ಸಂಬಂಧಿಸಿದಂತೆ ಮಾನ್ಯ ಸಚಿವರು ಇವೊತ್ತು ಹೇಳಿಕೆಯನ್ನು ಮಾಡಿದ್ದಾರೆ. ಬಹುಶಃ ನಾವು ಅದನ್ನು ಈ ರೀತಿ ಭಾವಿಸುತ್ತೇವೆ, ನೆನ್ನೆ ಸದನದಲ್ಲಿ ನಡೆದಿರುವ ಘಟನೆ ಬಗ್ಗೆ, ಅದು ಕರ್ನಾಟಕ ರಾಜ್ಯಕ್ಕೂ ಮತ್ತು ವಿಧಾನ ಮಂಡಲಕ್ಕೂ ರಾಜಕೀಯವಾಗಿ ದೊಡ್ಡದಾದಂತಹ ಮರ್ಮಾಘಾತವನ್ನು ಉಂಟು ಮಾಡಿರತಕ್ಕಂತಹ ಹಿನ್ನೆಲೆಯಲ್ಲಿ ಬಹುಶಃ ಸರ್ಕಾರ ಈ ಹೇಳಿಕೆಯನ್ನು ನೀಡಿದೆ ಎಂದು ನಾವು ಭಾವಿಸುತ್ತೇವೆ. ಸನ್ಮಾನ್ಯ ಮುಖ್ಯಮಂತ್ರಿಯವರು ಕೆಳಮನೆಯಲ್ಲಿದ್ದಾರೆ. ಇಂತಹ ಸಂದರ್ಭದಲ್ಲಿ ಈ

ಸದನಕ್ಕೆ ಮಾನ್ಯ ಸಭಾನಾಯಕರು ಖಂಡಿತವಾಗಿಯೂ ಬರಬೇಕಾಗಿತ್ತು. ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಒಬ್ಬ ಮಂತ್ರಿಯಾಗಿ ಸರ್ಕಾರದ ಪರವಾಗಿ ಉತ್ತರವನ್ನು ಹೇಳುವುದಕ್ಕಾಗುವುದಿಲ್ಲ ಎಂದು ನಾನು ಹೇಳುವುದಿಲ್ಲ. ಏಕೆಂದರೆ ಜಂಟಿ ಜವಾಬ್ದಾರಿಕೆ ಇರುವಂತಹ ಸಂದರ್ಭದಲ್ಲಿ ಖಂಡಿತವಾಗಿಯೂ ಆ ಕೆಲಸವನ್ನು ಮಾಡುವುದಕ್ಕೆ ಅವರಿಗೆ ಅಧಿಕಾರ ಇದೆ. ಆದರೆ ಈ ಸದನಕ್ಕೆ ಸಂಬಂಧಪಟ್ಟಂತೆ ಸನ್ಮಾನ್ಯ ಆಚಾರ್ಯ ಅವರನ್ನು ಸಭಾನಾಯಕರನ್ನಾಗಿ ನೇಮಕ ಮಾಡಲಾಗಿದೆ. ಆದ್ದರಿಂದ ನಾವು ಸರ್ಕಾರದ ಪರವಾಗಿ ಮಾನ್ಯ ಸಭಾನಾಯಕರಿಂದ ಉತ್ತರವನ್ನು ಬಯಸುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಯವರು ಕೆಳಮನೆಯಲ್ಲಿರತಕ್ಕಂತಹ ಸಂದರ್ಭದಲ್ಲಿ ಇವೊತ್ತಿನ ಈ ಸಂದರ್ಭದಲ್ಲಿ ಈ ಸದನದಲ್ಲಿ ಮಾನ್ಯ ಸಭಾನಾಯಕರು ಕಡ್ಡಾಯವಾಗಿ ಇರಲೇಬೇಕಾಗುತ್ತದೆ. ನಾವು ಈ ಸದನದ ಗೌರವ, ಈ ಮೇಲ್ಮನೆ ಸದನ ಅಂದರೆ ಕರ್ನಾಟಕ ವಿಧಾನ ಪರಿಷತ್ತಿನ ಘನತೆ ಮತ್ತು ಹಿರಿಮೆಗಳೇನಿವೆ ಅದೇ ಘನತೆ ಮತ್ತು ಹಿರಿಮೆ ಕೆಳಮನೆಗೂ ಇದೆ. ಕೆಳಮನೆ ಘನತೆ, ಹಿರಿಮೆಯನ್ನು ಕಳೆದುಕೊಂಡು ಮೇಲ್ಮನೆ ಎನ್ನುವಂಥದ್ದು ಅಸ್ತಿತ್ವದಲ್ಲಿರುವುದಕ್ಕೆ ಸಾಧ್ಯವೇ ಇಲ್ಲ. ಏಕೆಂದರೆ ....

**Sri V.R. SUDARSHAN:-** It's a creation of the Assembly.

**Sri M.C. NANAIAH:-** Not only a creation of the Assembly; it's a creation of the Constitution. ಕಾರಣವೇನೆಂದರೆ, the Ministers are answerable to the Assembly. ಆದುದರಿಂದ ಆ ಸದನಕ್ಕೆ ಇರತಕ್ಕಂತಹ ಎತ್ತರ, ಇವೊತ್ತು ಈ ಸರ್ಕಾರ ಇರಬೇಕೆ ಬೇಡವೇ ಎನ್ನುವಂತಹ ತೀರ್ಮಾನ ಮಾಡುವುದು ಆ ಸದನವೇ ಹೊರತಾಗಿ ನಾವಲ್ಲ. ಇಲ್ಲಿ ಸರ್ಕಾರದ ವಿರುದ್ಧ ಅವಿಶ್ವಾಸ ಗೊತ್ತುವಳಿಯನ್ನು ತರುವಂತಹ ಅಧಿಕಾರ ನಮಗಿಲ್ಲ. ಈ ಹಿನ್ನೆಲೆಯಲ್ಲಿ ತಾವು ಮಾನ್ಯ ಸಚಿವರಿಗೆ ಹೇಳಿಕೆಯನ್ನು ಕೊಡಲಿಕ್ಕೆ ಅಧಿಕಾರ ಕೊಟ್ಟಿದ್ದೀರಿ, ಆ ವಿಚಾರ ಇರಲಿ. ಇನ್ನಾದರೂ ಮಾನ್ಯ ಸಭಾನಾಯಕರನ್ನು ಈ ಸದನಕ್ಕೆ ಕರೆಸಿದರೆ ಉತ್ತಮ, ಅವರು ಈ ಸದನಕ್ಕೆ ಬರಬೇಕಾಗುತ್ತದೆ. ಆದರೆ

ಪ್ರಶ್ನೋತ್ತರಕ್ಕಿಂತ ಮೊದಲೇ ಆ ಹೇಳಿಕೆಯನ್ನು ನೀಡುವುದಕ್ಕೆ ತಾವು ಅವರಿಗೆ ಅಧಿಕಾರವನ್ನು ಕೊಟ್ಟಿದ್ದೀರಿ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ನಾವೆಲ್ಲರೂ ದಯವಿಟ್ಟು ಒಟ್ಟಾರೆಯಾಗಿ ಮಾತನಾಡೋಣ. ಇಂತಹ ಪರಿಸ್ಥಿತಿ ನಮ್ಮ ಕರ್ನಾಟಕ ರಾಜ್ಯದ ವಿಧಾನ ಮಂಡಲದಲ್ಲಿ ಇನ್ನು ಮುಂದೆ ಮರುಕಳಿಸದ ಹಾಗೆ ಜನಸಾಮಾನ್ಯರ ಮನಸ್ಸಿನಲ್ಲಿ ನಾವೆಲ್ಲಾ ಅರ್ಹತೆಯನ್ನು ಪಡೆದಿರತಕ್ಕಂತಹ ಜನಸಾಮಾನ್ಯ ಶಾಸಕರು ಎನ್ನುವಂತಹ ಪರಿಸ್ಥಿತಿಯನ್ನು ನಾವು ನಿರ್ಮಾಣ ಮಾಡದೆ ಹೋದರೆ ಪ್ರಜಾತಂತ್ರ ವ್ಯವಸ್ಥೆ ಅರಾಜಕತೆಯತ್ತ ಹೋಗಿ we may end up where ? We will end up in anarchy. ನಿಯಮ 324ರ ಅಡಿಯಲ್ಲಿ ಮಂತ್ರಿಗಳಿಗೆ ಹೇಳಿಕೆಯನ್ನು ಕೊಡುವುದಕ್ಕೆ ಒಂದು ಅಧಿಕಾರವನ್ನು ನಮ್ಮ ಸದನದಲ್ಲಿ ಇಟ್ಟುಕೊಂಡಿದ್ದೇವೆ. ಹೇಳಿಕೆ ಕೊಟ್ಟ ನಂತರ ಆ ಹೇಳಿಕೆ ಈ ಸದನದ ಆಸ್ತಿ ಆಗುತ್ತದೆ. ಅದು ಆಸ್ತಿ ಆದ ಮೇಲೆ ಆ ಹೇಳಿಕೆಯ ಮೇಲೆ ನಮಗೆಲ್ಲರಿಗೂ ಸರ್ಕಾರದ ವತಿಯಿಂದ ಮಾಹಿತಿಯನ್ನು ಕೇಳುವಂತಹ ಸಂಪೂರ್ಣ ಅಧಿಕಾರವಿದೆ. ಈಗ ಮಾಹಿತಿಯನ್ನು ಕೇಳಲೇ ಬೇಕಾಗುತ್ತದೆ. ಆದರೆ ಆ ಹೇಳಿಕೆ ಇನ್ನೂ ಕೂಡ ನಮಗೆ ತಲುಪಲಿಲ್ಲ. ಆಡಳಿತ ಪಕ್ಷದ ಸದಸ್ಯರು ಸಹ ಮಾಹಿತಿಯನ್ನು ಕೇಳಬೇಕು. ಕಾರಣ ಇದು ಕೇವಲ ವಿರೋಧ ಪಕ್ಷದವರಿಗೆ ಮಾತ್ರ ಸಂಬಂಧಪಟ್ಟಿರುವಂತಹ ವಿಷಯವಲ್ಲ. ಇದು ಇಡೀ ಸದನಕ್ಕೆ ಸಂಬಂಧಪಟ್ಟಿರುವಂಥದ್ದು. ಆದುದರಿಂದ ತಾವೆಲ್ಲರೂ ಸಹ ಇದರ ಬಗ್ಗೆ ಪ್ರಶ್ನಿಸಬೇಕಾಗುತ್ತದೆ. ಕಡೆಗೆ ಒಟ್ಟಾರೆ ನಾವೆಲ್ಲರೂ ಸೇರಿ ಏನು ಮಾಡಬೇಕು ಎಂಬ ತೀರ್ಮಾನಕ್ಕೆ ಬರಬೇಕಲ್ಲವೆ. ಆ ಹಿನ್ನಲೆಯಲ್ಲಿ ಮಾನ್ಯ ಸಚಿವರ ಹೇಳಿಕೆಯನ್ನು ತಾವು ದಯವಿಟ್ಟು ಸಂಪೂರ್ಣವಾಗಿರುವಂತಹ ಮಾಹಿತಿಯನ್ನು ಸರ್ಕಾರದಿಂದ ಪಡೆಯುವುದಕ್ಕೋಸ್ಕರ ನೀವು ಅವಕಾಶವನ್ನು ಕೊಡಲೇ ಬೇಕಾಗುತ್ತದೆ. ಪ್ರಶ್ನೋತ್ತರ ಕಳೆದ ಮೇಲೆ ಅಲ್ಲ. ಏಕೆಂದರೆ ಈಗಾಗಲೇ ಹೇಳಿಕೆಯನ್ನು ಕೊಟ್ಟಾಗಿದೆ. ಆದಕಾರಣ ನಾವು ಮಾಹಿತಿಯನ್ನು ಪಡೆಯಲೇ ಬೇಕಾಗಿರುವಂತಹ ಪರಿಸ್ಥಿತಿಯಲ್ಲಿ ನಾವಿದ್ದೇವೆ.

ಆದುದರಿಂದ ತಾವು ದಯವಿಟ್ಟು ನಿಯಮ 324 ನ್ನು ನೋಡಿ. ಸರ್ಕಾರಕ್ಕೆ ಯಾವುದಾದರು ಒಂದು ಮುಜುಗರದ ಪರಿಸ್ಥಿತಿ ನಿರ್ಮಾಣವಾದಾಗ ಸರ್ಕಾರವೇ ಸ್ವ-ಇಚ್ಛೆಯಿಂದ ಒಂದು ಹೇಳಿಕೆಯನ್ನು ಮಾಡುವುದಕ್ಕೆ ಇರುವಂತಹ ಅವಕಾಶವನ್ನು ನಾವೇ ನಿಯಮ 324 ರ ಅಡಿಯಲ್ಲಿ ಕೊಟ್ಟಿದ್ದೇವೆ.

> "324. Statement made by a Minister:- A minister may make a statement on a matter of public importance with the consent of the Chairman, on such statement, no discussion shall be allowed. Members may be permitted to ask clarification for the purpose of eliciting frurther information".

ಈ ಸದನಕ್ಕೆ ಈಗ ನಿಮ್ಮ ಕಡೆಯಿಂದ ಎಲ್ಲಾ ರೀತಿಯಾದಂತಹ ಮಾಹಿತಿಯನ್ನು ಪಡೆಯುವುದಕ್ಕೆ ಇರುವಂತಹ ಅವಕಾಶ ನಮಗೂ ಇದೆ, ನಿಮಗೂ ಇದೆ. ಮೆಂಬರ್ಸ್ ಎಂದರೆ ಕೇವಲ ವಿರೋಧ ಪಕ್ಷದ ಸದಸ್ಯರು ಮಾತ್ರವಲ್ಲ. ಆದುದರಿಂದ ಒಟ್ಟಾರೆ ದಯವಿಟ್ಟು ನಿಯಮ 324 ರ ಅಡಿಯಲ್ಲಿ ಹೇಳಿಕೆಯನ್ನು ಮಾಡಿರುವಂತಹ ಹಿನ್ನಲೆಯಲ್ಲಿ ದಯವಿಟ್ಟು ಎಲ್ಲಾ ಮಾಹಿತಿಯನ್ನು ಸರ್ಕಾರದಿಂದ ಪಡೆಯುವ ಸಂದರ್ಭದಲ್ಲಿ ನೀವು ಮಂತ್ರಿಯಾಗಿ ಆ ಹೇಳಿಕೆಯನ್ನು ಬಹುಶಃ ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ತಾವು ಕೊಟ್ಟಿರಬಹುದು. I am very certain now. That must

have been a statement presented by the Hon'ble Chief Minister, read by the Minister. ಆ ಹಿನ್ನಲೆಯಲ್ಲಿ ಹೇಳುತ್ತೇನೆ. ದಯವಿಟ್ಟು ನಾನು ಹೇಳುವುದೇನೆಂದರೆ, ಮಾಹಿತಿಯನ್ನು ಕೇಳುವುದಕ್ಕೆ ಇರುವಂತಹ ಸಂಪೂರ್ಣವಾದ ಅವಕಾಶವನ್ನು ಈ ಸದನದ ಎಲ್ಲಾ ಸದಸ್ಯರಿಗೆ ಈಗಲೇ ಕೊಡಬೇಕಾಗುತ್ತದೆ. ಬಹುಶಃ ಇವತ್ತಿನ ನಮ್ಮ ಪ್ರಶ್ನೋತ್ತರಗಳು ಮತ್ತು ಇವತ್ತು ಚರ್ಚೆಗೆ ಇರುವಂತಹ ವಿಚಾರ ನಮ್ಮ ಅಸ್ತಿತ್ವವನ್ನು ನಾವು ಉಳಿಸಿಕೊಳ್ಳದೆ ಹೋದರೆ ನಮ್ಮ ಸಾರ್ವಭೌಮತ್ವವನ್ನು ನಾವು ಉಳಿಸಿಕೊಳ್ಳದೆ ಹೋದರೆ ಈ

ಸದನದ ಘನತೆ, ಪರಂಪರೆಯನ್ನು ನಾವು ಉಳಿಸಿಕೊಳ್ಳದೆ ಹೋದರೆ ಈ ಸದನದಲ್ಲಿ ಮಾಡುವಂತಹ ಯಾವದೇ ಚರ್ಚೆಗೆ ಅರ್ಥವಿಲ್ಲ. ಈ ಹಿನ್ನಲೆಯಲ್ಲಿ ನಾನು ಮಾಹಿತಿಯನ್ನು ಬಯಸುವ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರಾಗಿರುವಂತಹ ಶ್ರೀಮತಿ ಮೋಟಮ್ಮನವರಿಗೆ ಇರುವಂತಹ ಅಧಿಕಾರ ಏನಿದೆ ಆ ಅಧಿಕಾರವನ್ನು ಮುಂದೆ ಚಲಾವಣೆ ಮಾಡಿದಮೇಲೆ, ಈ ಸದನದಲ್ಲಿರುವಂತಹ ಎಲ್ಲರಿಗೂ ಚರ್ಚೆಗೆ ಅವಕಾಶವನ್ನು ಕೊಡುವ, ಬಹುಶಃ ಇವತ್ತಿನ ಮಟ್ಟಿಗೆ ನಾವು ಯಾವುದೇ ಚರ್ಚೆಯನ್ನು ಮಾಡದೆ ಹೋದರೂ ಚಿಂತೆ ಇಲ್ಲ, ರಾಜ್ಯದ ಜನತೆಗೆ ಈ ವಿಧಾನ ಮಂಡಲದ ಮುಖಾಂತರ ನೇರವಾಗಿರುವಂತಹ ಒಂದು ಸಂದೇಶವನ್ನು ಕೊಡುವುದಕ್ಕೆ ಇರುವಂತಹ ಪ್ರಯತ್ನವನ್ನು ನಾವು ಮಾಡದೆ ಹೋದರೆ ವಿಧಾನ ಮಂಡಲದ ಅಸ್ತಿತ್ವವನ್ನೇ ಪ್ರಶ್ನೆ ಮಾಡುವಂತಹ ಜವಾಬ್ದಾರಿ, ಶಕ್ತಿ ಆ ಜನರ ಹತ್ತಿರ ಇದೆ ಎಂದು ಹೇಳುವಂತಹ ಅನಿವಾರ್ಯವಾಗಿರುವಂತಹ, ನಿರ್ವಿವಾದವಾಗಿರುವಂತಹ ಸತ್ಯವನ್ನು ನಾವೆಲ್ಲರೂ ಅರಿತುಕೊಳ್ಳಬೇಕು. ನನ್ನ ಸ್ನೇಹಿತರು ಹಾಗೂ ಮಾನ್ಯ ಸಚಿವರು ಯಾರಿದ್ದೀರಿ ದಯವಿಟ್ಟು ಈ ವಿಷಯವನ್ನು ಪಕ್ಷದ ವತಿಯಿಂದ ನೋಡಬೇಡಿ. ನಾವು ನೀವು ಒಟ್ಟಾರೆಯಾಗಿ ಇದರ ಬಗ್ಗೆ ಚರ್ಚೆ ಮಾಡುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿ ಎಂದು ಹೇಳಿ, ಕೈಯನ್ನು ಮೇಲಕ್ಕೆ ಎತ್ತುವುದು, ಬಾಯನ್ನು ಇನ್ನೂ ಮೇಲೆತ್ತುವಂತಹ ಪರಿಸ್ಥಿತಿಯನ್ನು ದಯವಿಟ್ಟು ನಿರ್ಮಾಣ ಮಾಡಬೇಡಿ. ಈ ಒಂದು ಘಟನೆಗೆ ಸಂಬಂಧಪಟ್ಟಂತೆ ಮಾತ್ರ ಎಂದು ಹೇಳಿ, ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದಂತಹ ಶ್ರೀಯುತ ನಾಣಯ್ಯನವರು ಬಹಳ ಪ್ರಸ್ತುತವಾಗಿರುವಂತಹ ಅನೇಕ ಸಂಗತಿಗಳನ್ನು ಇಲ್ಲಿ ಉಲ್ಲೇಖಿಸಿದ್ದಾರೆ. ನಾನು ಈಗಾಗಲೇ ಹೇಳಿದಂತೆ ನಮ್ಮ ವಿಧಾನ ಸಭೆ ಮತ್ತು ವಿಧಾನ ಪರಿಷತ್ತುಗಳು ಜನರ ಗಂಭೀರವಾದಂತಹ ಸಮಸ್ಯೆಯನ್ನು ಚರ್ಚಿಸುವಂತಹ ಒಂದು ವೇದಿಕೆ. ಜನರಿಗೆ ಜವಾಬ್ದಾರಿಯುತವಾದಂತಹ,

ಉತ್ತರದಾಯಿತ್ವವಾದಂತಹ ಒಂದು ಹೊಣೆಗಾರಿಕೆ ಇರುವಂತಹ ಒಂದು ಸದನ ಇದು. ಈಗಾಗಲೇ ನಮ್ಮ ರಾಜ್ಯದಲ್ಲಿ ಹಿಂದೆಲ್ಲಾ ನಾವು ಸಂತೋಷದಿಂದ ಹೇಳುತ್ತಿದ್ದಂತೆ, ಅನುಭವಿಸುತ್ತಿದ್ದಂತೆ ಈ ಸದನದ ಘನತೆ, ಗೌರವವನ್ನು ಇನ್ನಷ್ಟು ಹೆಚ್ಚಿಸುವುದಕ್ಕೆ ಪಕ್ಷಾತೀತವಾದಂತಹ ಪ್ರಯತ್ನ ಮಾಡಬೇಕು. ಈ ಸದನ ಕೇವಲ ಆಡಳಿತ ಪಕ್ಷದ್ದು ಮಾತ್ರ, ವಿರೋಧ ಪಕ್ಷದ ಸದಸ್ಯರ ಜವಾಬ್ದಾರಿಗಳೇ ಇಲ್ಲ ಎನ್ನುವಂಥದ್ದಲ್ಲ. ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳು ನಾವೆಲ್ಲರೂ ಒಟ್ಟಾಗಿ ಈ ಸದನದ ಮೇಲುಸ್ತರವನ್ನು ಇನ್ನಷ್ಟು ಹೆಚ್ಚಿಸುವುದಕ್ಕೆ ನಮ್ಮೆಲ್ಲರ ಒಟ್ಟಾದಂತಹ ಪ್ರಯತ್ನವನ್ನು ನಾವು ಮಾಡಲೇ ಬೇಕು. ಮಾನ್ಯ ನಾಣಯ್ಯನವರು ಹೇಳಿರುವಂತಹ ಎಲ್ಲಾ ವಿಚಾರಗಳನ್ನು ನಾನು ಒಪ್ಪುತ್ತೇನೆ. ನಿನ್ನೆ ದಿವಸ ನಡೆದಂತಹ ಘಟನೆ ಅಥವಾ ಈ ರೀತಿಯ ಚರ್ಚೆಯ ಕಾರಣಗಳಿಂದಾಗಿ ನಾವು ನಾವೇ ನಮ್ಮ ಜವಾಬ್ದಾರಿಯನ್ನು ಹೆಚ್ಚಿಸುವಂತಹ ಒಂದು ಕ್ಷಣವು ಹೌದು, ಹಾಗೂ ನಮ್ಮ ನಮ್ಮ ಜವಾಬ್ದಾರಿಗಳನ್ನು ಹೆಚ್ಚಿಸಿಕೊಳ್ಳುವಂತಹ ಒಂದು ಅವಕಾಶ, ಇರುವುದನ್ನು ನಾವು ಕಾಣುತ್ತಿದ್ದೇವೆ. ಆ ಘಟನೆಗಳ ಬಗ್ಗೆ ಪುನಃ ನಾನು ಉಲ್ಲೇಖ ಮಾಡಲು ಬಯಸುವುದಿಲ್ಲ. ಏಕೆಂದರೆ ನಮಗೆಲ್ಲರಿಗೂ ಅದು ಗೊತ್ತಿರುವಂತಹ ಸಂಗತಿ. ಆದರೆ ಮಾನ್ಯ ಸಚಿವರುಗಳು, ಅಥವಾ ನಮ್ಮ ಸರ್ಕಾರದ ಮುಖ್ಯಮಂತ್ರಿಗಳು ಅಥವಾ ನಮ್ಮ ಹಿರಿಯರೆಲ್ಲರೂ ಸಹ ಜನತೆಯ ಭಾವನೆಗಳಿಗೆ, ನಮ್ಮೆಲ್ಲರ ಭಾವನೆಗಳಿಗೆ ಅಷ್ಟೇ ಜವಾಬ್ದಾರಿಯುತವಾಗಿ ಸ್ಪಂದಿಸಿ, ಅವರೇ ಇವತ್ತು ಸ್ವ-ಇಚ್ಛೆಯಿಂದ ರಾಜಿನಾಮೆಯನ್ನು ಸಲ್ಲಿಸಿ, ಆ ರಾಜಿನಾಮೆ ಅಂಗೀಕಾರವಾಗಿ ನಾವು ಈ ರೀತಿಯ ವಿಷಯಗಳಿಗೆ ರಾಜ್ಯದ ಜನತೆಯ ಎದುರು ನಮ್ಮ ಬದ್ಧತೆಯನ್ನು, ಹೇಗೆ ತೋರಿಸಬೇಕು ಎನ್ನುವುದನ್ನು ನಾವು ತೋರಿಸಿದ್ದೇವೆ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ನಮಗೆ ಸ್ಟೇಟ್‌ಮೆಂಟ್ ಕೊಡಿಸುತ್ತಾರೆಯೆ ಕೇಳಿ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೇ, ನಿರ್ಣಯವನ್ನು ಹೇಳಿಯಾಗಿದೆ. ಮಾನ್ಯ ರಾಜ್ಯಪಾಲರು ಅವರ ರಾಜಿನಾಮೆಯನ್ನು ಅಂಗೀಕಾರ ಮಾಡಿದ್ದು ಸಹ ಆಗಿದೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಸ್ಟೇಟ್‌ಮೆಂಟ್ ಕೊಟ್ಟಾದ ಮೇಲೆ ನಮಗೆ ಅದರ ಒಂದು ಪ್ರತಿಯನ್ನು ಕೊಡಬೇಕು.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೇ, ಪ್ರತಿಯನ್ನು ಕಳುಹಿಸಿಕೊಡುತ್ತೇನೆ.

**ಶ್ರೀ ಬಸವರಾಜ ಹೊರಹಟ್ಟಿ:–** ಮಾನ್ಯ ಸಭಾಪತಿಯವರೇ, ಇಷ್ಟು ಗಂಭೀರವಾದಂತಹ ಚರ್ಚೆ ನಡೆಯುತ್ತಿದೆ. ಈ ರೀತಿ ಇರುವಾಗ ನೀವು ಮಾಡಿರುವಂತಹ ಸ್ಟೇಟ್‌ಮೆಂಟ್ ಕಾಪಿ ನಮಗೆ ಕೊಡಬೇಕು. ಇಲ್ಲವೆಂದರೆ ನೀವು ಹೇಳುವುದರಲ್ಲಿ ಅರ್ಥವಿಲ್ಲ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೇ, ಈ ಸಂದರ್ಭದಲ್ಲಿ ಒಂದೇ ಒಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ನಾವು ಜವಾಬ್ದಾರಿಯುತವಾಗಿ ಸ್ಪಂದಿಸಿರುವುದನ್ನು ಸಹ ನಾನು ಈ ಸದನಕ್ಕೆ ತಿಳಿಯಬಯಸುತ್ತಿದ್ದೇನೆ. ನಾವು ಇದರಲ್ಲಿ ಏನಾದರು ಉದಾಸೀನ ಮಾಡಿದ್ವಿ, ನಿರ್ಲಕ್ಷ್ಯ ಮಾಡಿದ್ವಿ ಇತ್ಯಾದಿಗಳು ಇಲ್ಲ. ಮಾನ್ಯ ಸಚಿವರುಗಳು ಸಹ ಅತ್ಯಂತ ಜವಾಬ್ದಾರಿಯುತವಾಗಿ ಘಟನೆಗಳ ಬಗ್ಗೆ ತನಿಖೆಗಳು ನಡೆಯಲಿ ಎನ್ನುವ ಮಾತನ್ನು ಹೇಳಿರುವುದನ್ನು ನಾವು ಕೇಳಿದ್ದೇವೆ, ಮತ್ತು ಸಚಿವರುಗಳೇ ಮಾನ್ಯ ಮುಖ್ಯಮಂತ್ರಿಗಳಿಗೆ ರಾಜಿನಾಮೆಯನ್ನು ಸಲ್ಲಿಸಿ, ಅದು ಅಂಗೀಕಾರ ಆಗಿರುವುದನ್ನು ಸಹ ನಾನು ಈಗಾಗಲೇ ಹೇಳಿಕೆಯಲ್ಲಿ ಹೇಳಿದ್ದೇನೆ. ನನ್ನ ಒಂದು ವಿನಂತಿ ಏನೆಂದರೆ, ಈ ಹೇಳಿಕೆ ಮಾನ್ಯ ನಾಣಯ್ಯನವರು ಹೇಳಿದಂತೆ ಇದು ಸದನದ ಆಸ್ತಿ ಆಗಿರುವುದು ಸತ್ಯ. ಹಾಗಾಗಿ ಈ ಹೇಳಿಕೆಯ ಪ್ರತಿಯನ್ನು ದೊರಕಿಸಿಕೊಡಲಾಗುವುದು. ಅದೇನು ದೊಡ್ಡ ವಿಷಯವಲ್ಲ. ಆದರೆ ಮಾನ್ಯ ಸಭಾಪತಿಯವರು ಮತ್ತು ಸಭಾಧ್ಯಕ್ಷರು ತಾವುಗಳು ಈ ರೀತಿಯ

ವಿಷಯಗಳನ್ನು ಯಾವ ನಿಯಮಾವಳಿಗಳ ಅಡಿಯಲ್ಲಿ ಹೇಗೆ ತೆಗೆದುಕೊಳ್ಳಬೇಕು, ಯಾವ ಸಮಯದಲ್ಲಿ ತೆಗೆದುಕೊಳ್ಳಬೇಕು, ಯಾವ ರೀತಿಯಲ್ಲಿ ತೆಗೆದುಕೊಳ್ಳಬೇಕು ಎನ್ನುವುದನ್ನು ಚರ್ಚೆ ಮಾಡಿ ತೆಗೆದುಕೊಳ್ಳಲಿ.

**Sri S.R. PATIL:-** Already you have made a statement......

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೇ, ಕೇವಲ ಹೇಳಿಕೆ ಮಾತ್ರವಲ್ಲ ಅದಕ್ಕೆ ಪೂರಕವಾಗಿಯು ಸಹ ತಾವು ಮಾತನಾಡಿದ್ದೀರಿ. ಆದಕಾರಣ ಇದರ ಬಗ್ಗೆ ಚರ್ಚೆ ಆಗಬೇಕು.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೇ, ಆದುದರಿಂದ ಈ ರೀತಿಯ ಘಟನೆಗಳ ಬಗ್ಗೆ ತಾವು ಮುಂದಿನ ಸಮಯಗಳಲ್ಲಿ ಸೂಕ್ತವಾದಂತಹ ರೀತಿಯಲ್ಲಿ ಅವಕಾಶವನ್ನು ಕೊಟ್ಟರೆ ಸರ್ಕಾರ ಜವಾಬ್ದಾರಿಯುತವಾದಂತಹ ರೀತಿಯಲ್ಲಿ ಸ್ಪಂದಿಸುವುದಕ್ಕೆ ಸಿದ್ಧವಿದೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ. ಅದಕ್ಕಿಂತ ಮೊದಲು ಒಂದು ವಿಷಯವನ್ನು ಈ ಸದನದ ಗಮನಕ್ಕೆ ತರಬಯಸುತ್ತೇನೆ. ಇದೂವರೆವಿಗೂ ಮಾತನಾಡಿದಂತಹ ಸನ್ಮಾನ್ಯ ವೀರಣ್ಣ ಮತ್ತಿಕಟ್ಟಿ ಇರಬಹುದು ಸನ್ಮಾನ್ಯ ನಾಣಯ್ಯನವರು ಇರಬಹುದು, ಎಲ್ಲರೂ ಮಾತನಾಡುತ್ತಿದ್ದಾರೆ. ಈ ವಿಷಯದ ಬಗ್ಗೆ ಯಾವುದೇ ನಿಯಮಾವಳಿಯಲ್ಲಿ ಅವಕಾಶ ಇಲ್ಲದೇ ಇದ್ದರೂ ಸಹ ವಿಷಯದ ಗಾಂಭೀರ್ಯತೆಯನ್ನು ಅರ್ಥಮಾಡಿಕೊಂಡು ಸ್ವಲ್ಪ ಹೊತ್ತು ಸಮಯವನ್ನು ನನಗೆ ನಾನೇ ನಿಗದಿಪಡಿಸಿ ಸ್ವಲ್ಪ ಹೊತ್ತು ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ. ಆದರೆ ಆ ಸದನದ ಒಳಗೆ ನಡೆದಂತಹ ಯಾವುದೇ ಘಟನೆಯ ಬಗ್ಗೆ ಉಲ್ಲೇಖವಾಗಲಿ, ಆ ಸದನದ ಬಗ್ಗೆ ಪ್ರಸ್ತಾಪವಾಗಲಿ ಬೇಡ. ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಬಹಳ ಗಂಭೀರವಾಗಿರುವಂತಹ ಒಂದು ಸಂಗತಿಯನ್ನು ಪ್ರಸ್ತಾಪ ಮಾಡಿದರು, ಏನೆಂದರೆ, "ನನಗೆ ರಾತ್ರಿ ಇಡೀ ನಿದ್ದೆ ಬರಲಿಲ್ಲ" ಎಂದು. ಬಹುಶಃ ನಮಗ್ಯಾರಿಗೂ ನಿದ್ದೆ ಬಾರದ ಸ್ಥಿತಿ ನಿರ್ಮಾಣವಾಗಿತ್ತು. ಹಾಗಾಗಿ ಈ ರೀತಿಯ

ಸಂಗತಿಗಳು ಯಾವುದೇ ಒಂದು ಸಂದರ್ಭದಲ್ಲಿ ನಡೆದಾಗ ನಮ್ಮೆಲ್ಲರ ಮನಸ್ಸಿಗೂ ನೋವಾಗುತ್ತದೆ. ಆ ನೋವನ್ನು ಕೋಪದಲ್ಲಿ ಪ್ರದರ್ಶನ ಮಾಡದೇ ನಾವು ನಮ್ಮ ಘನತೆಯನ್ನು ಹೆಚ್ಚಿಸಿಕೊಳ್ಳುವ ದಾರಿಗಳು ಯಾವುದೆಂದು ಚಿಂತನೆಯನ್ನು ಮಾಡಬೇಕಾಗುತ್ತದೆ. ಈಗ ವಿರೋಧ ಪಕ್ಷದ ನಾಯಕರು ಮಾತನಾಡಲಿ.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೇ, ಯಾವಾಗಲೂ ನನ್ನನ್ನು ಮಾತನಾಡಲಿಕ್ಕೆ ಕರೆದು, ಮಧ್ಯೆದಲ್ಲಿ ತಾವು ಏನನ್ನೋ ಹೇಳುತ್ತೀರಿ. ಇದರಿಂದ ನನಗೆ ಮಾತನಾಡಲು ಒಂದು ರೀತಿ ಆಗುತ್ತದೆ. ನಿಜವಾಗಿಯೂ ತಮ್ಮ ಬಗ್ಗೆ ನನಗೆ ಅಪಾರವಾದ ಗೌರವವಿದೆ. ನಾವುಗಳು ಏನನ್ನು ಹೇಳುತ್ತೇವೆ ಎನ್ನುವುದನ್ನು ಕೇಳುವ ಸಹನೆಯನ್ನು ಇಟ್ಟುಕೊಳ್ಳದೇ ಮೊದಲೇ ಎಲ್ಲರ ಮೇಲೆ ತಮ್ಮ ಕೋಪವನ್ನು ಪ್ರದರ್ಶನ ಮಾಡಿದರೆ ಹೇಗೆ?

**ಸಭಾಪತಿಯವರು:–** ಎಲ್ಲರೂ ಒಂದೇ ಕಾಲದಲ್ಲಿ ಮಾತನಾಡಲು ಬಯಸಿದ್ದಕ್ಕೆ ನಾನು ಕೋಪ ಮಾಡಿಕೊಂಡೆನು. ಯಾರಾದರೂ ಒಬ್ಬರು ಮಾತನಾಡಿದ್ದಲ್ಲಿ ನಾನು ಎಂದಿಗೂ ಬೇಸರವನ್ನು ಮಾಡಿಕೊಳ್ಳುವುದಿಲ್ಲ. ಹತ್ತು ಜನರು ಎದ್ದು ನಿಂತುಕೊಂಡು, ನಾನು ಸುಮ್ಮನಿರಿ ಎಂದರೂ ಯಾರು ಸುಮ್ಮನಾಗಲಿಲ್ಲ. ಅದಕ್ಕಾಗಿ ನನಗೆ ಕೋಪ ಬಂದಿತು.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಗಳೇ,

**ಶ್ರೀ ಆರ್. ಅಶೋಕ್ (ಗೃಹ ಸಚಿವರು):–** ಮಾನ್ಯ ಸಭಾಪತಿಗಳೇ, ನನ್ನದೊಂದು ಮನವಿ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಗಳೇ, ನಾನು ಮಾತನಾಡಲು ಪ್ರಾರಂಭಿಸಿದಾಗಲೆಲ್ಲ ಈ ರೀತಿಯ ಅಡಚಣೆ ಮಾಡಿದರೆ ಹೇಗೆ?

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಗಳೇ, ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಮಧ್ಯೆದಲ್ಲಿ ಮತ್ತೊಬ್ಬರು ಮಾತನಾಡುವುದು, ಅದಕ್ಕೆ ವಿರೋಧ ಪಕ್ಷದ ನಾಯಕರು ಮೇಲಿಂದ ಮೇಲೆ ಯೀಲ್ಡ್ ಆಗುವುದು ಎಷ್ಟು ಸರಿ?

**ಸಭಾಪತಿಯವರು:–** ಈಗ ವಿರೋಧ ಪಕ್ಷದ ನಾಯಕರನ್ನು ಮಾತನಾಡಲು ನಾನು ಕರೆದಿದ್ದೇನೆ. ಮಧ್ಯೆದಲ್ಲಿ ಗೃಹಸಚಿವರು ಏನನ್ನೋ ಹೇಳಲು ಎದ್ದು ನಿಂತರು. ಆಗ ನಾನು ವಿರೋಧ ಪಕ್ಷದ ನಾಯಕರಿಗೆ ಅವರು ನನ್ನ ಕಡೆ ನೋಡಿಕೊಂಡು ಮಾತನಾಡುತ್ತಿದ್ದ ಕಾರಣ, ಆ ಕಡೆ ನೋಡುವಂತೆ ಹೇಳಿದೆನು. ಅವರು ಯೀಲ್ಡ್ ಆಗುವುದು ಬಿಡುವುದು ಅವರ ಇಚ್ಚೆಗೆ ಬಿಟ್ಟ ವಿಚಾರ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಗಳೇ, ತಮ್ಮ ಮೇಲೆ ನಮಗೆ ಅಪಾರವಾದ ಗೌರವವಿದೆ. ಹಾಗೆಯೇ ನಿನ್ನೆಯ ದಿವಸ ನಡೆದಂತಹ ಘಟನೆಯ ಬಗ್ಗೆ ತಮ್ಮ ಹಾಗೆಯೇ ನಮಗೂ ಸಹ ಸಾಕಷ್ಟು ನೋವು ಆಗಿದೆ. ಏಕೆಂದರೆ ಇದು ಎಲ್ಲಾ ರಾಜಕಾರಣಿಗಳ ಮರ್ಯಾದೆಯ ಪ್ರಶ್ನೆ ಕೂಡ ಆಗಿದೆ. ಇದರಿಂದ ಹೊರಗಿನ ಜನರು ರಾಜಕಾರಣಿಗಳ ಬಗ್ಗೆ ಏನು ಮಾತನಾಡಬಹುದು ಎನ್ನುವುದನ್ನು ನಾವು ನಿವು ಎಲ್ಲರೂ ಸಹ ವಿಚಾರ ಮಾಡಬೇಕಾಗುತ್ತದೆ. ಆದ್ದರಿಂದ ಆ ವಿಷಯದ ಬಗ್ಗೆ ಮಾತನಾಡಲು ನಮಗೆ ಮೊದಲ ಆದ್ಯತೆಯನ್ನು ನೀಡಬೇಕೆಂದು ನಾವು ಕೇಳಿದೆವು. ಅನಾವಶ್ಯಕವಾಗಿ ಗಲಾಟೆಯನ್ನು ಮಾಡುವುದಕ್ಕಲ್ಲ. ನಮಗೂ ಸಹ ಸದನ ನಡೆಯಬೇಕೆನ್ನುವ ಆಸೆಯಿದೆ. ಅದಕ್ಕಾಗಿಯೇ ಇದುವರೆವಿಗೂ ಸದನವನ್ನು ಅಚ್ಚುಕಟ್ಟಾಗಿ ನಡೆಸಿಕೊಂಡು ಬಂದಿದ್ದೇವೆ ಎಂದು ನಾವು ಅಂದುಕೊಂಡಿದ್ದೇವೆ. ತಮಗೆ ಏನು ಅನಿಸಿದೆ ಎನ್ನುವುದು ನಮಗೆ ಗೊತ್ತಿಲ್ಲ.

**ಸಭಾಪತಿಯವರು:–** ತಮ್ಮೆಲ್ಲರ ಸಹಕಾರ ಇಲ್ಲದಿದ್ದರೆ ಈ ಸದನವೇ ನಡೆಯುವುದಿಲ್ಲ. ನಿಮ್ಮೆಲ್ಲರ ಸಹಕಾರದಿಂದಲೇ ಈ ಸದನ ಚೆನ್ನಾಗಿ ನಡೆಯುತ್ತಿರುವುದು. ನಿನ್ನೆಯ ದಿವಸ ನನಗೆ ನನ್ನ ಮಾಧ್ಯಮದ ಮಿತ್ರರೊಬ್ಬರು ಫೋನ್ ಮಾಡಿ 'ನಿಮ್ಮ ಸದನ ಮುಗಿಯುವ ಸಮಯದಲ್ಲೂ 30–40 ಜನ ಸದಸ್ಯರು ಸದನದಲ್ಲಿರುತ್ತಾರೆ, ನಿಜವಾಗಿ ಭೇಷ್' ಎಂದು ಹೇಳಿದರು. ಈ 'ಭೇಷ್' ನನಗಲ್ಲ ತಮಗೆಲ್ಲರಿಗೂ ಸೇರಬೇಕಾಗುತ್ತದೆ. ಈ ಶಹಬಾಸ್‌ಗಿರಿ ಸಿಕ್ಕಿರುವುದು ತಮಗೆ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಗಳೇ, ಹೀಗೆ ತಮಗೆ ಗೌರವ ಹಾಗೂ ಸಹಕಾರ ನೀಡುತ್ತಾ ಈ ಸದನ ನಡೆಸಿಕೊಂಡು ಬಂದಿದ್ದೇವೆ. ಆದರೆ ಇವತ್ತಿನ ಸಂದರ್ಭ ಏನು ಎನ್ನುವುದನ್ನು ಹಿರಿಯರಾದ ತಮ್ಮ ಗಮನಕ್ಕೆ ತಂದು, ಈ ವಿಚಾರವನ್ನು ಎಷ್ಟರಮಟ್ಟಿಗೆ ಪ್ರಸ್ತಾಪ ಮಾಡಲಿಕ್ಕೆ ಅವಕಾಶ ನೀಡುವಿರಿ ಎನ್ನುವುದನ್ನು ಮನದಟ್ಟು ಮಾಡಲು ನಾನು ಮಾತನಾಡಲಾರಂಭಿಸಿರುವೆ. ನಮ್ಮ ಎಲ್ಲ ಸದಸ್ಯರಿಗೂ ಕೂಡ ಈ ಬಗ್ಗೆ ಬದ್ಧತೆ ಹಾಗೂ ಕಳಕಳಿಯಿದೆ. ಹಾಗಾಗಿ ಅವರು ಕೂಡ ಈ ವಿಚಾರದ ಬಗ್ಗೆ ಮಾತನಾಡಬಯಸಿದರು. ತಾವೇ ತಿಳಿಸಿರುವ ಹಾಗೆ ಸಂವಿಧಾನಬದ್ಧವಾಗಿ ಈ ಸದನಗಳು ನಡೆಯಬೇಕು. ಇದಕ್ಕೆ ನಮ್ಮ ಸಹಮತವೂ ಸಹ ಇದೆ. ಸಂವಿಧಾನಬದ್ಧವಾಗಿ ಸದನಗಳು ನಡೆಯಬೇಕಾದರೆ ಸರ್ಕಾರಕ್ಕೂ ಕೂಡ ನೈತಿಕತೆ ಇರಬೇಕಾಗುತ್ತದೆ. ಅದು ಇಲ್ಲದ ಕಾರಣ ಅದನ್ನು ತಮಗೆ ಹೇಳಬೇಕೆಂದು ನಾವೆಲ್ಲರೂ ನಿಂತಿದ್ದೆವು. ಇದರ ಬಗ್ಗೆ ಸಚಿವರು ಎದ್ದುನಿಂತು suo moto ಹೇಳಿಕೆಯನ್ನು ನೀಡುತ್ತೇನೆ ಎಂದರೆ ಹೇಗಾಗುತ್ತದೆ? ಈಗ ಸಭಾಪತಿಯವರು ಅನುಮತಿ ನೀಡಿದ ಹಿನ್ನಲೆಯಲ್ಲಿ ಸಚಿವರು ಸದನದಲ್ಲಿ ಆ ಬಗ್ಗೆ ಮಾತನಾಡಿದ್ದಾರೆ. ಆದರೆ ಅವರು ಮಾನ್ಯ ನಾಣಯ್ಯನವರು ಹೇಳಿದ ಹಾಗೆ ಒಂದು ಹೇಳಿಕೆಯನ್ನು ಬರೆದುಕೊಂಡು ಅಥವಾ ಟೈಪ್ ಮಾಡಿಕೊಂಡು ಅದರ ಪ್ರತಿಯನ್ನು ಸದನದ ಸದಸ್ಯರೆಲ್ಲರಿಗೂ ಸಹ ಕಳುಹಿಸಬೇಕಾಗಿತ್ತು. ಈಗ ಸಚಿವರು ಪ್ರತಿಯನ್ನು ಕೊಡುವುದಾಗಿ ಹೇಳುತ್ತಿದ್ದಾರೆ. ಆದರೆ ಈ ವಿಷಯದ ಬಗ್ಗೆ ಮಾತನಾಡಲು ಅವಕಾಶವನ್ನೇ

ನೀಡದೆ ಆಡಳಿತ ಪಕ್ಷದವರೆಲ್ಲರೂ ಎದ್ದು ನಿಂತುಕೊಂಡು ಅಡಚಣೆಯನ್ನು ಮಾಡುವುದಾದರೆ ಅದು ಸರಿಯಲ್ಲ. ಗಂಭೀರವಾದ ವಿಚಾರಗಳು ಚರ್ಚೆಗೆ ಬಂದಾಗ ಎಲ್ಲರಿಗೂ ಸಹ ಅದರ ಬಗ್ಗೆ ಗಂಭೀರತೆ ಇರಬೇಕೆನ್ನುವುದು ಬಹಳ ಮುಖ್ಯ. ಸರ್ಕಾರಕ್ಕೆ ನೈತಿಕತೆ ಇಲ್ಲ ಎಂದು ಏಕೆ ಹೇಳಿದೆವು ಎನ್ನುವುದನ್ನು ಕೂಡ ನಾವು ಹೇಳಬೇಕಾಗುತ್ತದೆ. ನಮ್ಮ ರಾಜ್ಯದ ಶಾಸಕಾಂಗಕ್ಕೆ ಅಪಾರವಾದ ಗೌರವವಿದೆ. ಅದು ಕೆಳಮನೆಯಿರಬಹುದು ಅಥವಾ ಮೇಲ್ಮನೆ ಇರಬಹುದು. ಇದಕ್ಕೆ ತನ್ನದೇ ಆದ ಇತಿಹಾಸ ಮತ್ತು ಸಂಸ್ಕೃತಿಯನ್ನು ಹೊಂದಿದೆ. ಇದನ್ನು ನಾವು ಉಳಿಸಿಕೊಂಡು ಹೋಗಬೇಕಾಗುತ್ತದೆ. ಈಗ ನಾನು ಮತ್ತು ತಾವು ಎಷ್ಟು ವರ್ಷಗಳಿಂದ ರಾಜಕಾರಣದಲ್ಲಿದ್ದೇವೆ. ಇಂತಹ ಘಟನೆಗಳು ಎಂದಾದರೂ ನಡೆದಿತ್ತೇ? ಜವಾಬ್ದಾರಿಯುತ ಮಂತ್ರಿಗಳು ಇಂತಹ ಕೆಲಸದಲ್ಲಿ ತೊಡಗುತ್ತಾರೆ ಎಂದಲ್ಲಿ ನಮಗೆ ನಿಜವಾಗಿ ನೋವು ಆಗುತ್ತದೆ. ನಿನ್ನೆಯ ದಿವಸ ಕೂಡ ನಮ್ಮ ಸದನದಲ್ಲಿ ಸೈಂಟ್ ಮೇರಿಸ್ ದ್ವೀಪದಲ್ಲಿ ನಡೆದಂತಹ ಘಟನೆಯ ಬಗ್ಗೆ ಪ್ರಸ್ತಾಪ ಮಾಡಿ, ಇಂತಹ ಘಟನೆಗಳು ನಡೆಯಬಾರದಿತ್ತು, ಇದರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕೂಡ ಹೇಳಿದೆವು. ನಮ್ಮ ರಾಜ್ಯದ ಶಾಲಾ ಕಾಲೇಜುಗಳಲ್ಲಿ ಹೆಣ್ಣುಮಕ್ಕಳ ಮೇಲೆ ಲೈಗಿಂಕ ಕಿರುಕುಳ ನಡೆಯುತ್ತಿರುವ ಬಗ್ಗೆ ಮಾನ್ಯ ಸದಸ್ಯರಾದ ಭಾರತಿಶೆಟ್ಟಿಯವರು ಕೂಡ ಪ್ರಸ್ತಾಪವನ್ನು ಮಾಡಿದ್ದರು. ಇಂತಹ ವಿಚಾರಗಳು ಚರ್ಚೆಯಾಗುವಾಗ ಕೆಳಮನೆಯಲ್ಲಿ ಸಂಜೆ 5 ಗಂಟೆಯ ಸಮಯದಲ್ಲಿ ಈ ಘಟನೆ ನಡೆದಿದೆ. ಇಲ್ಲಿ ವಿಚಾರಗಳು ಚರ್ಚೆ ಆದದ್ದು ಯಾವಾಗ? ನಿನ್ನೆಯ ದಿವಸ ಮಾನ್ಯ ಸದಸ್ಯರಾದ ಅಲ್ಲಮ ಪ್ರಭುಪಾಟೀಲ್‌ರವರು ತೊಗರಿಬೇಳೆ ಬೆಳೆಯುವ ರೈತರು ಎಷ್ಟು ಸಂಕಷ್ಟದಲ್ಲಿದ್ದಾರೆ ಅದಕ್ಕೆ ಸರ್ಕಾರ ಸರಿಯಾಗಿ ಸ್ಪಂದಿಸಲಿಲ್ಲ ಎಂದು ಅವರು ಸದನದಲ್ಲಿ ಕಣ್ಣೀರಿಟ್ಟಿದ್ದಾರೆ. ಅದಕ್ಕೆ ಸಂಬಂಧಪಟ್ಟ ಹಾಗೆ ಲಕ್ಷಣ ಸವದಿಯವರೆ ಉತ್ತರವನ್ನು ನೀಡಿದ್ದಾರೆ. ಇವರ ಉತ್ತರದಿಂದ ಸಮಾಧಾನ ಹೊಂದದ ಸದಸ್ಯರು ರೈತರ ಶಾಪ ತಮಗೆ ತಟ್ಟದೇ ಇರುವುದಿಲ್ಲ ಎನ್ನುವ ಮಾತನ್ನು ಹೇಳಿದರು. ಇವತ್ತು ನಾವು ಆ ಶಾಪ ತಟ್ಟಿದೆ ಎನ್ನುವುದನ್ನು ನಂಬಬೇಕೋ ಬೇಡವೋ ಎನ್ನುವುದು ಗೊತ್ತಿಲ್ಲ. ಆ ರೀತಿಯ ಒಂದು

ಕಾಕತಾಳೀಯ ಘಟನೆ ನಡೆದು ಹೋಗಿದೆ. ಇದರ ಬಗ್ಗೆ ಚರ್ಚೆ ಮಾಡಲು ತಮ್ಮ ಮುಂದೆ ಈ ವಿಚಾರವನ್ನು submission ಮಾಡಲು ನಾವು ಹೊರಟಿದ್ದೆವು. ಆದರೆ ತಾವು ನಮ್ಮ ಮೇಲೆ ಸಿಟ್ಟಾದಲ್ಲಿ ನಮ್ಮ ಮನಸ್ಸಿಗೆ ಬೇಸರ ಆಗುತ್ತದೆ. ನಾಣಯ್ಯನವರು ಇದು ಸಾರ್ವಜನಿಕ ಮಹತ್ವದ ಘಟನೆ ಆಗಿದೆ ಎಂದು ಹೇಳಿದರು. ಇದರಿಂದ ಎಲ್ಲರಿಗೂ ನೋವು ಆಗಿದೆ. ಅದರ ಬಗ್ಗೆ ನಾವು ಸರ್ಕಾರವನ್ನು ಕೇಳಬೇಕಾಗುತ್ತದೆ. ಈಗಾಗಲೇ ನಡೆದಿರುವ ಹಗರಣಗಳ ಮೇಲೆ ಇದು ಮತ್ತೊಂದು ಹಗರಣ. ನಿನ್ನೆ ನಡೆದ ಹಗರಣಗಳ ಹಾಗೆ ನಿರಂತರವಾಗಿ 5–6 ಹಗರಣಗಳು ಈ ಸರ್ಕಾರದಲ್ಲಿ ನಡೆದಿವೆ. ಇದೆಲ್ಲ ನಡೆಯಲು ಹೇಗೆ ಅಸ್ಪದವಾಯಿತು? ಏನು ತಪ್ಪಿಲ್ಲದೇ ಕೆಳಮನೆಯಲ್ಲಿ 16 ಜನ ಸದಸ್ಯರ ಸದಸ್ಯತ್ವದ ರದ್ದು ಆಗುತ್ತದೆ. ಆದರೆ ಇಂತಹ ಘಟನೆಗಳು ನಡೆದ ಹಿನ್ನಲೆಯಲ್ಲಿ ಅವರ ಸದಸ್ಯತ್ವ ರದ್ದು ಆಗುವುದೇ? ಇದಕ್ಕೆ ಸರ್ಕಾರದ ನೈತಿಕತೆ ಇಲ್ಲವೇ?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಗಳೇ, ಈ ವಿಷಯದ ಬಗ್ಗೆ ಚರ್ಚೆಗೆ ಅವಕಾಶವನ್ನು ನೀಡಿದಲ್ಲಿ ಸರ್ಕಾರ ಬೇರೆ ಸಂದರ್ಭದಲ್ಲಿ ಉತ್ತರವನ್ನು ನೀಡಬೇಕಾಗುತ್ತದೆ. ಈಗ ಇಲ್ಲಿ ಬೇರೆ ವಿಚಾರವೇ ಚರ್ಚೆಯಾಗುತ್ತಿದೆ. ವಿಷಯದ ವ್ಯಾಪ್ತಿಯನ್ನೇ ಬಿಟ್ಟು ಮುಂದುವರೆದಲ್ಲಿ ನಾವು ಬೇರೆ ರೀತಿಯಲ್ಲಿ ಉತ್ತರವನ್ನು ನೀಡಬೇಕಾಗುತ್ತದೆ.

(ಗೊಂದಲ)

**ಸಭಾಪತಿಯವರು:–** ಈಗ ಯಾವುದು ರೆಕಾರ್ಡ್‌ಗೆ ಹೋಗುವುದು ಬೇಡ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಗಳೇ, ನಾನು ಸಮಾಧಾನವಾಗಿ ಏಕೆ ಏನು ಎನ್ನುವುದನ್ನು ಕೇಳುತ್ತಿದ್ದೇನೆ. ಯಾವುದೇ ತಪ್ಪು ಮಾತನ್ನು ಆಡಿಲ್ಲ. ಅದಕ್ಕೆ ಸರ್ಕಾರದಿಂದ ಏಕೆ ಮಧ್ಯೆ ಬಾಯಿ ಹಾಕಬೇಕು?

**ಶ್ರೀ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಗಳೇ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ. Under Rule 324 "A Minister may make a statement on a matter of public importance with the consent of the Chairman, on such statement, no discussion shall be allowed. Members may be permitted to ask clarification for the purpose of eliciting further information." ಕ್ಲಾರಿಫಿಕೇಶನ್ ಕೇಳುವುದನ್ನು ಬಿಟ್ಟು ಗಂಟೆಗಳ ಕಾಲ ಚರ್ಚೆ ಅವಕಾಶ ನೀಡುವುದು ಸರಿಯಲ್ಲ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಗಳೇ, ಸಚಿವರು ನಮಗೆ ಇನ್ನೂ ಹೇಳಿಕೆಯನ್ನು ನೀಡಿಲ್ಲ. ನಾವು ಸದನದ ಎಲ್ಲಾ ಕಲಾಪಗಳನ್ನು ಬದಿಗೊತ್ತಿ ಈ ವಿಚಾರದ ಬಗ್ಗೆ ಚರ್ಚೆಗೆ ಏಕೆ ಅವಕಾಶ ಕೊಡಿ ಎಂದು ಕೇಳಿದೆ ಎನ್ನುವುದನ್ನು ಹೇಳುತ್ತಿದ್ದೇನೆ. ಈ ಘಟನೆಯಿಂದ ಎಲ್ಲರಿಗೂ ಸಹ ನೋವಾಗಿದೆ ಎಂದು ಹೇಳಿದ್ದೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಗಳೇ, . . .

(ಗೊಂದಲ)

**ಶ್ರೀಮತಿ ಮೋಟಮ್ಮ:-** ಸರ್ಕಾರ ನಡೆಸುವವರಿಗೆ ಈ ಘಟನೆಯ ಗಂಭೀರತೆ ಬಗ್ಗೆ ತಿಳಿದಿರಬೇಕಾಗುತ್ತದೆ. ಈಗ ನಾನು ಏನಾದರೂ ತಪ್ಪು ಮಾತನಾಡಿದಲ್ಲಿ ನನಗೆ ಕುಳಿತುಕೊಳ್ಳುವುದಕ್ಕೆ ಹೇಳಿ.

(ಗೊಂದಲ)

**ಸಭಾಪತಿಯವರು:-** ನಿಮ್ಮ ಪಕ್ಷದ ಸದಸ್ಯರೆ, ನಿಮಗೆ ಮಾತನಾಡಲು ಅವಕಾಶವನ್ನು ನೀಡುತ್ತಿಲ್ಲ.

(12.30 ಗಂಟೆ)

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಗಳೆ, ಈಗ ಇವರು ಎತ್ತಿರುವ ಪಾಯಿಂಟ್ ಆಫ್ ಆರ್ಡರ್ ಬಗ್ಗೆ ಹೇಳುತ್ತೇನೆ, ಸರ್ಕಾರ ಹೇಳಿಕೆಯನ್ನೇ ಮಾಡಿಲ್ಲ. ಇವರು ಹೇಗೆ ಪಾಯಿಂಟ್ ಆಫ್ ಆರ್ಡರ್ ಎತ್ತುತ್ತಾರೆ.

**ಶ್ರೀ ಎ. ರಾಮದಾಸ್ (ವೈದ್ಯಕೀಯ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಗಳೆ, ಸರ್ಕಾರ ಹೇಳಿಕೆಯನ್ನು ಕೊಟ್ಟಿದೆ.

**ಶ್ರೀ ಬಸವರಾಜ ಹೊರಟ್ಟಿ:-** ಅದು ಹೇಳಿಕೆ ಎನ್ನುವುದಾದರೆ ಅದರ ಕಾಪಿಯನ್ನು ಕೊಡಿ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಗಳೆ, ಒಂದು ಸಬ್‌ಮಿಶನ್ ಇದೆ.

**ಸಭಾಪತಿಯವರು:-** ಎಲ್ಲರಿಗೂ ಹೇಳಿಕೆಯ ಕಾಪಿಗಳನ್ನು ಕೊಡಿ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಗಳೆ, ತಾವು ಈಗ ಒಂದು ರೂಲಿಂಗ್‌ನ್ನು ಕೊಡಬೇಕು.

**ಸಭಾಪತಿಯವರು:-** ಹೇಳಿಕೆ ಬಗ್ಗೆ ನನ್ನ ಅಭಿಪ್ರಾಯ ಏನು ಎನ್ನುವುದನ್ನು ಹೇಳುತ್ತೇನೆ ಕೇಳಿ. ಬೆಳಗ್ಗೆ ನನ್ನ ಕೊಠಡಿಗೆ ಮಾನ್ಯ ಸಚಿವರು ಬಂದರು. ಸಚಿವರು ಬಂದು 'ನಾನು ಸರ್ಕಾರದ ಪರವಾಗಿ ಒಂದು ಹೇಳಿಕೆಯನ್ನು ಮಾಡುತ್ತೇನೆ. ನನಗೆ ಅವಕಾಶ ಕೊಡಿ, ಎಂದು ಕೇಳಿದರು. 'ಆಯಿತು, ಅವಕಾಶ ಕೊಡುತ್ತೇನೆ, ಆದರೆ ನನ್ನ ಪುಸ್ತಕದ ನಿಯಮದ ಪ್ರಕಾರ ತಾವು ಪ್ರಶ್ನೋತ್ತರ ವೇಳೆಯ ನಂತರ ಹೇಳಿಕೆ ಮಾಡಬೇಕು ಮೊದಲೇ ಮಾಡಲು ಅವಕಾಶ ಕೊಡಲು ನನಗೆ ಕಷ್ಟವಾಗುತ್ತದೆ' ಎಂದು ಹೇಳಿದೆ. 'ಇಲ್ಲ ಸರ್, ಸದನ ಪ್ರಾರಂಭವಾದ ತಕ್ಷಣ ನನಗೆ ಅವಕಾಶವನ್ನು ಕೊಟ್ಟುಬಿಡಿ, ನಾನು ಹೇಳಿಕೆಯನ್ನು ಕೊಡುತ್ತೇನೆ ನಂತರ ತಾವು ಪ್ರಶ್ನೋತ್ತರವನ್ನು ಪ್ರಾರಂಭ ಮಾಡಿ ಎಂದು plead ಮಾಡಿದರು. ನಾನು ಆಗುವುದಿಲ್ಲ ಎಂದು ಹೇಳಿದೆ. ಇದು ನನ್ನ ಕಛೇರಿಯಲ್ಲಿ ನಡೆದ ಘಟನೆ. ಇದನ್ನು ನಾನು ಸದನಕ್ಕೆ

ಹೇಳಿದೆ. ನಂತರ ಸದನದಲ್ಲಿ ಅದೇ ವಿಷಯದ ಮೇಲೆ ನಾವೆಲ್ಲ ಮಾತನಾಡಲೇಬೇಕು ಎಂದು ಹೇಳಿದಾಗ, ನನಗೆ ವಿಷಯ ಗೊತ್ತಿತ್ತು, ಏನು ಹೇಳಿಕೆ ಕೊಡುತ್ತೀರಿ ಎಂದಾಗ ಮಂತ್ರಿಗಳು ನನಗೆ ಅದನ್ನು ತೋರಿಸಿದರು. ಅವರು ತೋರಿಸಲೇ ಬೇಕು ಎನ್ನುವ ಅವಶ್ಯಕತೆ ಇರಲಿಲ್ಲ. ಸ್ವಾಭಾವಿಕವಾಗಿ ತೋರಿಸಿದರು. ಆ ಹಿನ್ನೆಲೆಯಲ್ಲಿ ಸ್ವಾಭಾವಿಕವಾಗಿ ವಿಷಯ ಒಂದೇ ಆಗಿರುವುದರಿಂದ ಆಯಿತು ಅವರು ತುಂಬಾ ಇಷ್ಟಪಡುತ್ತಿದ್ದಾರೆ ಅದಕ್ಕಾಗಿ ತಾವು ಏನು ಹೇಳಿಕೆ ಕೊಡುತ್ತೀರಿ ಕೊಟ್ಟುಬಿಡಿ ಎಂದು ಹೇಳಿದೆ. ಆದರೆ ಕಾನೂನು ಏನು ಹೇಳುತ್ತದೆ ಎಂದು ನೋಡದೆ ಈ ನಿರ್ಧಾರವನ್ನು ನಾನು ಮಾಡಿರುವುದಿಲ್ಲ. ಮಾನ್ಯ ನಾಣಯ್ಯನವರು ಹೇಳಿರುವುದು ಸರಿ ಇದೆ. ನಿಯಮ 324ರಲ್ಲಿ ಅವರು ಹೇಳಿಕೆ ಮಾಡಬಹುದು, ಆದರೆ ಹೇಳಿಕೆಯ ಪ್ರತಿಯನ್ನು ಕೊಡಲೇಬೇಕು ಎಂದು ನಾವು ನಾವೇ ಕಾನೂನು ಮಾಡಿಕೊಂಡಿರುವುದಿಲ್ಲ, ಪುಸ್ತಕದ ಪ್ರಕಾರ. ಇಷ್ಟರ ಮೇಲೆ ಕಾಪಿ ಬೇಕು ಎನ್ನುವುದಾದರೆ, ಹೇಳಿಕೆಯ ಪ್ರತಿಗಳನ್ನು ಕೊಡುತ್ತಾರೆ. ಕಾಪಿಗಳನ್ನು ಮಾಡಿಸುತ್ತಿದ್ದಾರೆ. 3–4 ನಿಮಿಷ ಸಮಯ ಕೊಡಿ, ಎಲ್ಲರಿಗೂ ಹಂಚುತ್ತೇವೆ ಎಂದು ಹೇಳಿದ್ದಾರೆ. ಆ ವಿಷಯದ ಮೇಲೆ ಮಾನ್ಯ ವಿರೋಧ ಪಕ್ಷದ ನಾಯಕರು ಸ್ಪಷ್ಟವಾದ ಪದಗಳಲ್ಲಿ ತಮ್ಮ ಮಾತುಗಳನ್ನು ಪ್ರಾರಂಭ ಮಾಡಿದರು. ನಮಗೆ ಬೇಸರವಾಗುತ್ತಿದೆ, ನಾಚಿಕೆಯಾಗುತ್ತಿದೆ, ಸಂಕೋಚವಾಗುತ್ತಿದೆ ಎಂದು ಅವರು ಹೇಳುತ್ತಿದ್ದಾರೆ. ಆ ವಿಚಾರ ಮಾತನಾಡಬಹುದೆ ಹೊರತು, ಈ ವಿಷಯದ ಬಗ್ಗೆ ಬೇರೆ ಏನಾದರು ಮಾತನಾಡುವುದಾಗಿದ್ದರೆ ದಯಮಾಡಿ ನನಗೆ ಒಂದು ನೋಟಿಸ್‌ನ್ನು ಕೊಡಿ. ಅದರ ಆಧಾರದ ಮೇಲೆ ನಾನು ತೀರ್ಮಾನ ತೆಗೆದುಕೊಳ್ಳುತ್ತೇನೆ. ಈಗ ಪ್ರಶ್ನೋತ್ತರ ತೆಗೆದುಕೊಳ್ಳುವುದನ್ನು ಬಿಟ್ಟು ಇದನ್ನು ಚರ್ಚೆ ಮಾಡುತ್ತೇವೆ ಎಂದರೆ ಅದು ಹೇಗೆ ಸರಿಯಾಗುತ್ತದೆ. ನನ್ನ ಎದುರು ನೋಟಿಸ್ಸೇ ಇಲ್ಲ, ಬರಿ ಬಾಯಿ ಮಾತಿನ ಆಧಾರದ ಮೇಲೆ ಅವಕಾಶ ಕೊಡಿ ಎಂದರೆ ಹೇಗೆ? ಆಯಿತು, ನನಗೂ ವಿಷಯವೇ ಗೊತ್ತಿಲ್ಲ ಎಂದು ನಿದ್ದೆ ಬಂದವರ ಹಾಗೆ ನಟಿಸಲು ನಾನು ತಯಾರಿಲ್ಲ. ನನ್ನ ಎದುರು ಯಾವ ದಾಖಲೆಗಳೇ ಇಲ್ಲದೆ, ಇಂದು ಪತ್ರ, ಒಂದು ಮನವಿ ಇಲ್ಲದೆ ಯಾವ

ಹಿನ್ನೆಲೆಯಲ್ಲಿ, ಯಾವ ನಿಯಮದ ಪ್ರಕಾರ ಅಕಾಶವನ್ನು ಕೊಡಲಿ? ಸುಮ್ಮನೆ ನಿನ್ನೆ ಒಂದು ನಡೆಯಬಾರದ ಘಟನೆ ನಡೆದಿದೆ, ಚರ್ಚೆ ಮಾಡಲು ಅವಕಾಶವನ್ನು ಕೊಡಿ ಎಂದರೆ ಹೇಗೆ? ಈ ರೀತಿಯ ಘಟನೆಗಳು ನಡೆಯಬಾರದು ನಿಜ. ಇನ್ನೇನಾದರು ಬೇರೆ ಘಟನೆ ನಾಳೆ ನಡೆಯುತ್ತದೆ ಆಗ ಬಂದು ಚರ್ಚೆಗೆ ಅವಕಾಶ ಕೊಡಿ ಎಂದರೆ ಹೇಗೆ ಸಾಧ್ಯ? ಸದನ ನಡೆಸಲು ಒಂದು ನಿಯಮವಿದೆ. ಆ ನಿಯಮಾವಳಿ ಪ್ರಕಾರ ನಾನು ಸದನ ನಡೆಸಬೇಕಾಗುತ್ತದೆ. ಹಾಗೆ ನಾನು ಸದನವನ್ನು ನಡೆಸುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಗಳೆ, ಮಂತ್ರಿಗಳು ಒಂದು ಹೇಳಿಕೆಯನ್ನು ಮಾಡಿದ್ದಾರೆ. ನಿಯಮ 324ರ ಅಡಿಯಲ್ಲಿ ಹೇಳಿಕೆ ನಂತರ ಚರ್ಚೆಗೆ ಅವಕಾಶವಿಲ್ಲ. ತಾವು ದಯಮಾಡಿ ರೂಲಿಂಗ್ ಕೊಡಬೇಕು.

**ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು):–** ಮಾನ್ಯ ಸಭಾಪತಿಗಳೆ, ನನ್ನ ಒಂದು ಸಣ್ಣ ಸಬ್‌ಮಿಶನ್ ಇದೆ. ಮಾನ್ಯ ನಾಣಯ್ಯನವರು ಅದರ correct position ಹೇಳಿದ್ದಾರೆ. ಅವರು ಆ ಸದನದ ಸದಸ್ಯರಲ್ಲದೆ ಮಂತ್ರಿಗಳೂ ಆಗಿದ್ದರು, ಅವರು ಎರಡೂ ಸದನಗಳಲ್ಲಿ ಕೆಲಸ ಮಾಡಿರುವುದರಿಂದ ಅದರ ಬಗ್ಗೆ ನಾವು ಕ್ಲ್ಯಾರಿಫಿಕೇಶನ್ ಕೇಳಬಹುದು ಎಂದು ನಿಯಮಗಳನ್ನು ಉಲ್ಲೇಖ ಮಾಡಿ ಅವರು ಹೇಳಿದರು. ಯಾವ ಘಟನೆ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಎಲ್ಲ ವಿರೋಧ ಪಕ್ಷದ ಸದಸ್ಯರು ಚರ್ಚೆ ಮಾಡಬೇಕೆಂದು ಹೇಳುತ್ತಿದ್ದಾರೆ, ಆ ಘಟನೆ ಕೆಳಮನೆಯ ಸದನದ ಒಳಗೆ ನಡೆದಿದೆ. That matter is seized by the Speaker. Speaker is the authority, hi is the custodian of that House. ಇಂತಹ ಸಂದರ್ಭದಲ್ಲಿ... ಘಟನೆ ಏನೋ ಎಲ್ಲೋ ಹೊರಗಡೆ ನಡೆದಿದ್ದರೆ, ಸಾರ್ವಜನಿಕವಾಗಿ ನಡೆದಿದ್ದರೆ ಅದರ ಚರ್ಚೆ ಬೇರೆ. ಸದನದ ಒಳಗಡೆ ನಡೆದಿರುವ ಘಟನೆಯಲ್ಲಿ, when the matter is seized by the Speaker, ಅದನ್ನು ವಿಸ್ತೃತವಾಗಿ, ವಿವರವಾಗಿ ಚರ್ಚೆ ಮಾಡಲು ಅವಕಾಶವಿಲ್ಲ. ಮಾನ್ಯ ನಾಣಯ್ಯನವರು ಹೇಳಿದಂತಹ ವಿಚಾರದಲ್ಲಿ ತಾವು ಒಂದು ರೂಲಿಂಗ್‌ನ್ನು ಈಗ ಕೊಡಬೇಕು. ಆ ರೂಲಿಂಗ್ ಕೊಟ್ಟ ಮೇಲೆ ಆ ರೂಲಿಂಗ್ ಆಧಾರದ

ಮೇಲೆ ಚರ್ಚೆಯಾಗಲಿ, ಅದಕ್ಕೆ ನನ್ನ ತಕರಾರು ಇಲ್ಲ. ಆದರೆ ಆ ಘಟನೆ ಸದನದ ಒಳಗೆ ನಡೆದಿದೆ, ಅದು ಈಗ ಮಾನ್ಯ ಸಭಾಧ್ಯಕ್ಷರ ಮುಂದೆ ಇರುವಾಗ ಅದರ ಬಗ್ಗೆ ಇಲ್ಲಿ ವಿವರವಾಗಿ ಚರ್ಚೆ ಮಾಡುವುದು ಸೂಕ್ತವಲ್ಲ, ಸಾಧುವೂ ಅಲ್ಲ. ಏಕೆಂದರೆ ನಾಳೆ ಈ ಸದನದಲ್ಲಿ ನಡೆದಿರುವುದನ್ನು ಆ ಮನೆಯಲ್ಲಿ ಚರ್ಚೆ ಮಾಡುವುದು ಆಗುತ್ತದೆ. ಇದು ಸದನದ ಒಳಗೆ ನಡೆದಿರುವುದರಿಂದ ಈ ಮಾತನ್ನು ಹೇಳುತ್ತಿದ್ದೇನೆ. Since the Speaker is already seized of the matter, ಮತ್ತು ಆ ಸದನ ನಡೆಯುತ್ತಿರುವ ಹಿನ್ನೆಲೆಯಲ್ಲಿ ಇಲ್ಲಿ ಆ ವಿಷಯವನ್ನು ಚರ್ಚೆ ಮಾಡುವುದು ಸೂಕ್ತವಲ್ಲ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಗಳೆ, the matter has been seized by the Hon'ble Speaker of the lower House ಎಂದು ಹೇಳಿದ್ದಾರೆ. ಈ ವಿಷಯ ರಾಜ್ಯದ ಮನೆ ಮಾತಾಗಿದೆ. ಇಷ್ಟೇ ಅಲ್ಲ, ಕೆಲವು ಚಾನೆಲ್‌ಗಳವರು ಇದನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಸಾರ ಮಾಡುತ್ತಿದ್ದಾರೆ. ಇಡೀ ರಾಜ್ಯದ ಜನ ಈ ವಿಷಯದ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಸಾಕಷ್ಟು ಘಟನೆಗಳು ನಡೆದು ಹೋಗಿವೆ.

**ಶ್ರೀ ಎಸ್.ಆರ್. ಪಾಟೀಲ್:-** ನಾನು ಮಾತನಾಡುತ್ತಿದ್ದೇನೆ. ಮಧ್ಯೆದಲ್ಲಿ ಅವರು ಮಾತನಾಡಬೇಡಿ ಎಂದು ಹೇಳಿ. ಈ ವಿಚಾರ ಇಡೀ ರಾಜ್ಯದ ಮನೆಮಾತಾಗಿದೆ. ಬೇರೆ-ಬೇರೆ ದೇಶಗಳಲ್ಲಿರುವ ಜನರು ಸಹಿತ ಇದಕ್ಕೆ ಪ್ರತಿಕ್ರಿಯೆ ಮಾಡುತ್ತಿದ್ದಾರೆ. It is seized by the the lower Huse ಎಂದರೆ ಏನು? ಎಲ್ಲರೂ ರಿಯಾಕ್ಟ್ ಮಾಡುತ್ತಿದ್ದಾರೆ.

(ಗೊಂದಲ)

**ಶ್ರೀ ಬಸವರಾಜ ಬೊಮ್ಮಾಯಿ:-** ಹಲವಾರು ವಿಷಯಗಳು ಮನೆ-ಮಾತಾಗಿವೆ ಅದನ್ನು ನಾವು ಪ್ರಶ್ನೆ ಮಾಡಲಿಲ್ಲ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:-** ಮನೆಮಾತಾಗಿರುವ ವಿಷಯವನ್ನು ಮಾತನಾಡಲು ಜವಾಬ್ದಾರಿಯುತವಾದ ವಿರೋಧ ಪಕ್ಷದ ನಾಯಕರಿಗೆ ಅವಕಾಶವಿಲ್ಲ ಎಂದರೆ ಹೇಗೆ ಇದು? ಸಾಮಾನ್ಯ ಮತದಾರರು ಇದರ ಬಗ್ಗೆ ರಿಯಾಕ್ಟ್ ಮಾಡುತ್ತಿದ್ದಾರೆ. The matter is made known to the entire world, not only India.

**ಸಭಾಪತಿಯವರು:-** ಹಿಂದಿನ ಬೆಂಚಿನವರಿಗೆ ಮಾತನಾಡಲು ಅವಕಾಶ ಕೊಡುವುದಿಲ್ಲ ಎಂದು ಯಾವಾಗಲು ನನ್ನ ಮೇಲೆ ಆಪಾದನೆ ಮಾಡುತ್ತಿರುತ್ತಾರೆ. ಮುಂದಿನವರಿಗೆ ಹಿಂದಿನವರು ಕಾಣುವುದಿಲ್ಲ. ಹಿಂದಿನವರು ಏನೋ ಮಾತನಾಡಬೇಕು ಎಂದು ಆಗಿನಿಂದ ಮಧ್ಯೆದಲ್ಲಿ ಬಾಯಿ ಹಾಕುತ್ತಿದ್ದಾರೆ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಗಳೆ, ನಾನು ಇನ್ನು ನನ್ನ ಮಾತುಗಳನ್ನು ಪೂರ್ತಿ ಮಾಡಿರುವುದಿಲ್ಲ. ಮಧ್ಯೆದಲ್ಲಿ ಎಲ್ಲರೂ ಮಾತನಾಡಿದರೆ ಹೇಗೆ?

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಗಳು, The matter is seized by the Hon'ble Speaker of the lower House ಎಂದು ಹೇಳುತ್ತಾರೆ, ಆದರೆ ಇದು ಇಡೀ ಜಗತ್ತಿಗೆ ಗೊತ್ತಾಗಿದೆ. ಒಬ್ಬ ಸಾಮಾನ್ಯ ಮನುಷ್ಯ ಕೂಡ ಇದರ ಬಗ್ಗೆ ರಿಯಾಕ್ಟ್ ಮಾಡುತ್ತಿದ್ದಾನೆ. ಪ್ರತಿಯೊಬ್ಬ ಪ್ರಜೆ ಮಾತನಾಡುತ್ತಿದ್ದಾನೆ. ಇವರು ಇಲ್ಲಿ ಮಾತನಾಡಬಾರದು ಎಂದು ಹೇಳುತ್ತಾರೆ. ಜವಾಬ್ದಾರಿಯುತ ವಿರೋಧ ಪಕ್ಷದ ನಾಯಕರು ಮಾತನಾಡಲು ಅವಕಾಶವಿಲ್ಲ ಎಂದರೆ ಹೇಗೆ, ಸಾಮಾನ್ಯ ಪ್ರಜೆಯಾಗಿರುವುದೇ ಒಳ್ಳೆಯದಲ್ಲವೆ? ವಿರೋಧ ಪಕ್ಷದ ನಾಯಕರು ಮಾತನಾಡಲು ಅಡೆ-ತಡೆ ಒಡ್ಡುವುದು ಸರಿಯಲ್ಲ.

**ಸಭಾಪತಿಯವರು:-** ಮಾತನಾಡಲು ಅಡೆ-ತಡೆ ಏನು ಇಲ್ಲ. ಆದರೆ ಏನು ಮಾತನಾಡಬೇಕು ಎನ್ನುವುದೇ ಪ್ರಶ್ನೆಯಾಗಿದೆ.

(ಗೊಂದಲ)

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಗಳೆ, ತಾವು ಸ್ವಲ್ಪ ಈ ಕಡೆ ತಿರುಗಿ.

**ಶ್ರೀ ಎ. ರಾಮದಾಸ್:-** ಮಾನ್ಯ ನಾಣಯ್ಯನವರು ಒಂದು ಹೇಳಿಕೆಯನ್ನು ಮಾಡಿದರು.

(ಗೊಂದಲ)

**ಶ್ರೀಮತಿ ಮೋಟಮ್ಮ:-** ಇದು 6 ಕೋಟಿ ಜನರಿಗೆ ಸಂಬಂಧಪಟ್ಟಿರುವಂತ ವಿಷಯ. ಈಗ ಮಾನ್ಯ ಸಚಿವರಾದ ಬಸವರಾಜ ಬೊಮ್ಮಾಯಿಯವರು ಇದು 6 ಕೋಟಿ ಜನರಿಗೆ ಸಂಬಂಧಪಟ್ಟಿರುವ ವಿಚಾರವಲ್ಲ ಎನ್ನುವ ರೀತಿಯಲ್ಲಿ ಮಾತನಾಡಿದರು. ಇದು ಹೊರಗಡೆ ನಡೆದಿರುವುದಲ್ಲ, ಸದನದ ಒಳಗೆ ನಡೆದಿರುವ ವಿಚಾರ ಎಂದು ಹೇಳಿದರು. ಇದು ಎಲ್ಲೇ ನಡೆದಿರಲಿ. 6ಕೋಟಿ ಜನರ ಮರ್ಯಾದೆ ಪ್ರಶ್ನೆ. ಎಲ್ಲಾ ಪ್ರಜಾಪ್ರತಿನಿಧಿಗಳ ಮರ್ಯಾದೆ ಪ್ರಶ್ನೆ. ಈ ರೀತಿ ನಡೆಯಬಾರದಿತ್ತು, ಮುಂದೆಯೂ ನಡೆಯಬಾರದು ಎನ್ನುವ ದೃಷ್ಟಿಯಿಂದ ಮಾತನಾಡುತ್ತಿದ್ದೇವೆಯೇ ವಿನಃ ಯಾರ ಮೇಲೆಯೇ ವೈಯಕ್ತಿಕವಾಗಿ ದ್ವೇಷವಿಟ್ಟುಕೊಂಡು, ಅಥವಾ ಇದರಿಂದ ನಮಗೆ ಏನಾದರೂ ಲಾಭವಾಗುತ್ತದೆ ಎಂದು ಮಾತನಾಡುತ್ತಿಲ್ಲ. ಸ್ಪಷ್ಟವಾಗಿ ಹೇಳುತ್ತಿದ್ದೇವೆ ಇದು 6ಕೋಟಿ ಜನತೆಯ ಮರ್ಯಾದೆ ಪ್ರಶ್ನೆ. ಇದನ್ನು ಸರ್ಕಾರ ಸೀರಿಯಸ್ ಆಗಿ ತೆಗೆದುಕೊಂಡಿರುವುದಿಲ್ಲ, ಮಂತ್ರಿಗಳು ಸೀರಿಯಸ್ ಆಗಿ ತೆಗೆದುಕೊಂಡಿರುವುದಿಲ್ಲ ಎನ್ನುವಂತಹ ವಿಚಾರವನ್ನು ಹೇಳುತ್ತಿದ್ದೇವೆ. ಅಲ್ಲಿ ಬರದ ಬಗ್ಗೆ ಚರ್ಚೆಯಾಗುತ್ತಿದ್ದರೆ ಸಂಬಂಧಪಟ್ಟ ಸಚಿವರು ಅದರ ಬಗ್ಗೆ ಸೀರಿಯಸ್ ಆಗಿ ತೆಗೆದುಕೊಳ್ಳದೆ ಬೇರೆ ಚಟುವಟಿಕೆಯಲ್ಲಿ ತೊಡಗಿದ್ದಾರೆ ಎಂದರೆ ಇದನ್ನು ನಾವು ಕೇಳಬಾರದೆ?

**ಸಭಾಪತಿಯವರು:–** ದಯಮಾಡಿ ಕುಳಿತುಕೊಳ್ಳಿ. ಅವಕಾಶ ಕೊಡಬೇಕೋ ಬೇಡವೋ ಎನ್ನುವುದನ್ನು ನಾನು ಹೇಳುತ್ತೇನೆ. ದಯಮಾಡಿ ಕುಳಿತುಕೊಳ್ಳಿ.

**ಶ್ರೀಮತಿ ಮೋಟಮ್ಮ:–** ಈ ರಾಜ್ಯದಲ್ಲಿ ನಡೆದಿರುವುದು ಇದೊಂದೇ ಘಟನೆಯಲ್ಲ. ಇವು ಹೀಗೆ ನಡೆದುಕೊಂಡು ಹೋಗುತ್ತಿರಬೇಕೆ? ಸರ್ಕಾರಕ್ಕೆ ಏನಾದರೂ ನೈತಿಕತೆ ಇದೆಯೇ? ನೈತಿಕತೆ ಇದ್ದರೆ ಮಾತನಾಡಬೇಕು, ನೈತಿಕತೆ ಇಲ್ಲದ ಮೇಲೆ ಏಕೆ ಮಾತನಾಡಬೇಕು?

**ಸಭಾಪತಿಯವರು:–** ದಯಮಾಡಿ ಕುಳಿತುಕೊಳ್ಳಿ.

**ಶ್ರೀಮತಿ ಮೋಟಮ್ಮ:–** ಇವರ ಹಗರಣ ಒಂದೇ–ಎರಡೇ? ಒಂದಾದ ಮೇಲೆ ಒಂದು ನಡೆಯುತ್ತಿವೆ.

**ಸಭಾಪತಿಯವರು:–** ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

**ಶ್ರೀಮತಿ ಮೋಟಮ್ಮ:–** ನಮಗೆ ಅವಕಾಶ ಕೊಟ್ಟರೆ ಕೇಳುತ್ತೇವೆ. ಮಾನ್ಯ ನಾಣಯ್ಯನವರು ಮಾತನಾಡಿದ್ದಾರೆ, ಇದು ಇನ್ನೂ ಪೂರ್ಣ ಆಗಿಲ್ಲ. ನಾವು ತಮಗೆ ಕನ್ವಿನ್ಸ್ ಮಾಡಬೇಕು.

**ಶ್ರೀ ವಿ.ಆರ್. ಸುದರ್ಶನ್:–** ಕ್ಲಾರಿಫಿಕೇಷನ್ ಕೇಳಲು ಅವಕಾಶ ಕೊಟ್ಟಿಲ್ಲ.

**ಸಭಾಪತಿಯವರು:–** ಈ ವಿಷಯದ ಬಗ್ಗೆ ಚರ್ಚೆ ಮಾಡಲು ಈ ಸದನದಲ್ಲಿ ಅವಕಾಶ ಇಲ್ಲ, ದಯಮಾಡಿ ಕುಳಿತುಕೊಳ್ಳಬೇಕು.

**ಶ್ರೀ ವಿ.ಆರ್. ಸುದರ್ಶನ್:–** ಇನ್ನು ಯಾವ ವಿಷಯದ ಬಗ್ಗೆ ಮಾತನಾಡಬೇಕು? ಪ್ರಶ್ನೆಗಳನ್ನು ಕೇಳುವ ವಾತಾವರಣವೇ ಇಲ್ಲ. ಯಾರಿಗೆ ಪ್ರಶ್ನೆಗಳನ್ನು ಕೇಳುವುದು?

**ಶ್ರೀಮತಿ ಮೋಟಮ್ಮ:–** ಹೊಣೆಗೇಡಿ ಸರ್ಕಾರ......

(ಗೊಂದಲ)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ನಾವು ಸ್ಪಷ್ಟವಾಗಿ ಉತ್ತರವನ್ನು ಹೇಳಿದರೂ, ಸರ್ಕಾರ ಜವಾಬ್ದಾರಿಯಿಂದ ವರ್ತಿಸಿದರೂ ಈ ರೀತಿ ನಡೆದುಕೊಳ್ಳುವುದು ಸರಿಯಲ್ಲ. ಈ ಘಟನೆಯನ್ನು ರಾಜಕೀಯ ಉದ್ದೇಶಕ್ಕೋಸ್ಕರ ಬಳಸಿಕೊಳ್ಳುತ್ತಿದ್ದಾರೆ ಎಂದು ಸ್ಪಷ್ಟವಾಗುತ್ತಿದೆ. ಇಂತಹ ಸಂದರ್ಭದಲ್ಲಿ ನಾವೆಲ್ಲರೂ ಜನತೆಯ ಅಪೇಕ್ಷೆಯಂತೆ ನಮ್ಮ ಘನತೆ ಗೌರವವನ್ನು ಉಳಿಸಿಕೊಳ್ಳಬೇಕು. ಅದನ್ನು ಬಿಟ್ಟು ಈ ರೀತಿ ಸದನಕ್ಕೆ ಅಗೌರವ ತರುವ ರೀತಿಯಲ್ಲಿ ನಡೆದುಕೊಳ್ಳುವುದು ಸರಿಯಲ್ಲ.

(ಗೊಂದಲ)

(ಈ ಹಂತದಲ್ಲಿ ಪ್ಲಕಾರ್ಡ್‌ಗಳನ್ನು ಹಿಡಿದ ಮಾನ್ಯ ಸದಸ್ಯರು **"ಕಳ್ಳಕಾಕರ ಸರ್ಕಾರಕ್ಕೆ ಧಿಕ್ಕಾರ"** ಎಂದು ಘೋಷಣೆಗಳನ್ನು ಕೂಗುತ್ತಾ ಬಾವಿಗೆ ಆಗಮಿಸಿದರು)

**ಸಭಾಪತಿಯವರು:–** ಸದನದ ಒಳಗೆ ಪ್ಲಕಾರ್ಡ್‌ಗಳನ್ನು ತೋರಿಸಿದವರ ಹೆಸರುಗಳನ್ನು ಬರೆದಿಟ್ಟುಕೊಳ್ಳುವುದು.

(ಶ್ರೀ ಆರ್.ವಿ. ವೆಂಕಟೇಶ್, ಶ್ರೀ ವೀರಕುಮಾರ್ ಅಪ್ಪಾಸೋ ಪಾಟೀಲ್, ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ, ಶ್ರೀ ಶ್ರೀನಿವಾಸ ಮಾನೆ ಹಾಗೂ ಇತರ ಸದಸ್ಯರು ಪ್ಲಕಾರ್ಡ್‌ಗಳನ್ನು ಹಿಡಿದು ಸದನದ ಬಾವಿಗೆ ಆಗಮಿಸಿದರು)

**ಸಭಾಪತಿಯವರು:–** ಈ ರೀತಿ ಪ್ಲಕಾರ್ಡ್ ಹಿಡಿದುಕೊಂಡು ಬರುವವರ ಹೆಸರುಗಳನ್ನು ನಾನು ದಾಖಲು ಮಾಡಿಕೊಳ್ಳುತ್ತೇನೆ, ನಾನು ಇದನ್ನು ಒಪ್ಪುವುದಿಲ್ಲ ಹಾಗೂ ಸಹಿಸುವುದಿಲ್ಲ. ಯಾರಾದರೂ ಪ್ಲಕಾರ್ಡ್ ತಂದಿದ್ದರೆ. ನಾನು ಅಲೋ ಮಾಡುವುದಿಲ್ಲ. ನೀವು ಮಾಡುವುದಿದ್ದರೆ ಮಾಡಿ.

(ಗೊಂದಲ)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಒಂದು ಕಡೆ ಸದನದ ಗೌರವವನ್ನು ಹೆಚ್ಚಿಸುವ ರೀತಿ ಮಾತನಾಡುವುದು, ಇನ್ನೊಂದು ಕಡೆ ಸದನದ ಘನತೆ ಗೌರವವನ್ನು ತಗ್ಗಿಸುವ ಪ್ರಯತ್ನ ಆಗುತ್ತಿದೆ. ಈ ರೀತಿ ನಡೆದುಕೊಳ್ಳುವುದು ಸರಿಯಲ್ಲ, ಜವಾಬ್ದಾರಿಯುತವಾಗಿ ವರ್ತನೆ ಮಾಡಲಿ. ಇದು ಸರಿಯಲ್ಲ, ಗೌರವ ತರುವುದಿಲ್ಲ, ಶೋಭೆ ತರುವುದಿಲ್ಲ.

(ಗೊಂದಲ)

**ಶ್ರೀ ಬಸವರಾಜ ಬೊಮ್ಮಾಯಿ:–** ರಾಜಾಸ್ತಾನದ ಮಂತ್ರಿ ಬನ್ವಾರಿ ಲಾಲ್ ಕೇಸ್ ಏನಾಗಿದೆ, ಶ್ರೀ ಎನ್.ಡಿ. ತಿವಾರಿ, ಶ್ರೀ ಅಸಂಖಾನ್, ಇವರಗಳ ಕೇಸ್ ಏನಾಗಿದೆ?

**ಶ್ರೀಮತಿ ಮೋಟಮ್ಮ:–** ಇಲ್ಲಿ ರಾಜಸ್ತಾನದ ಪ್ರಸ್ತಾಪ ಇಲ್ಲ, ಅದರ ಪ್ರಶ್ನೆ ಬರುವುದಿಲ್ಲ, ರಾಜಸ್ತಾನ ಕಟ್ಟಿಕೊಂಡು ಏನು ಮಾಡುತ್ತಾರೆ, ಸಚಿವರಿಗೆ ಮಾನ–ಮರ್ಯಾದೆ ಇರಬೇಕು, ಗೌರವ ಇರಬೇಕು.

**ಸಭಾಪತಿಯವರು:–** ಬಾವಿಯಲ್ಲಿ ನಿಂತು ಘೋಷಣೆ ಕೂಗುವುದು ಹಾಗೂ ಮಾತನಾಡುವುದು ಯಾವುದೂ ರೆಕಾರ್ಡ್ ಆಗುವುದಿಲ್ಲ.

(ಗೊಂದಲ)

**ಸಭಾಪತಿಯವರು:–** ದಯಮಾಡಿ ಮಾನ್ಯ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ತೆರಳಬೇಕು.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಅಲ್ಲಿ ಕುಳಿತುಕೊಂಡು ಸದನದ ಘನತೆ ಗೌರವ ಹೆಚ್ಚಬೇಕು ಎಂದು ಹೇಳುತ್ತಾರೆ, ಈ ರೀತಿ ನಡೆದುಕೊಂಡರೆ ಹೇಗೆ? ಸರ್ಕಾರ ಜವಾಬ್ದಾರಿಯುತವಾಗಿ ನಡೆದುಕೊಳ್ಳುತ್ತಿದೆ. ನಿಯಮಾವಳಿಗಳ ಪ್ರಕಾರ ಚರ್ಚೆ ಮಾಡಿ.

**ಶ್ರೀಮತಿ ಮೋಟಮ್ಮ:–** ಯಾವ ನಿಯಮಾವಳಿ ಇಲ್ಲ, ರಾಜ್ಯದ ಜನರ ಮರ್ಯಾದೆ ಪ್ರಶ್ನೆ.

(ಗೊಂದಲ)

**ಸಭಾಪತಿಯವರು:–** ಸದನವನ್ನು ಮಧ್ಯಾಹ್ನ 3–00 ಗಂಟೆಯವರೆಗೂ ಮುಂದೂಡುತ್ತೇನೆ.

(12 ಗಂಟೆ 45 ನಿಮಿಷಗಳಲ್ಲಿ ಮುಂದೂಡಲ್ಪಟ್ಟ ಸದನವು ಪುನಃ 03 ಗಂಟೆ 16 ನಿಮಿಷಗಳಿಗೆ ಸಮಾವೇಶಗೊಂಡಿತು. ಮಾನ್ಯ ಸಭಾಪತಿಯವರು ಸಭಾಪೀಠದಲ್ಲಿ ಉಪಸ್ಥಿತರಿದ್ದರು)

**(ಸದನ ಪ್ರಾರಂಭವಾಗುತ್ತಿದ್ದ ಹಾಗೆ ಕಾಂಗ್ರೆಸ್ ಹಾಗೂ (ಜೆಡಿ(ಎಎಸ್) ಪಕ್ಷದ ಸದಸ್ಯರು ಧರಣಿ ಮಾಡಲು ಬಾವಿಗೆ ಬಂದರು)**

**ಸಭಾಪತಿಯವರು:–** ವಿರೋಧ ಪಕ್ಷದ ಸದಸ್ಯರು ಧರಣಿ ಮಾಡಿದ್ದು ಮುಗಿಯಿತು, ಸದನವನ್ನು ನಡೆಸೋಣವೆಂದು ಬಹಳ ಸಂತೋಷದಿಂದ ನಾನು ಬಂದಿದ್ದೇನೆ. ಬಾವಿಯಲ್ಲಿರುವ ಸದಸ್ಯರು ದಯಮಾಡಿ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರೆ ಸದನ ನಡೆಸುವುದಕ್ಕೆ ಅನುಕೂಲವಾಗುತ್ತದೆ.

**ಶ್ರೀ ವಿ.ಆರ್. ಸುದರ್ಶನ್ (ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾವು ಸ್ಪಷ್ಟೀಕರಣವನ್ನು ಕೇಳುವುದಕ್ಕೆ ಅವಕಾಶ ಮಾಡಿಕೊಡಿ. ಯಾವ ಕಾರಣಕ್ಕೋಸ್ಕರ ಮಂತ್ರಿಗಳಿಂದ ಮಾನ್ಯ ಮುಖ್ಯಮಂತ್ರಿಯವರು ರಾಜೀನಾಮೆಯನ್ನು ತೆಗೆದುಕೊಂಡರು ಮತ್ತು ಸನ್ಮಾನ್ಯ ರಾಜ್ಯಪಾಲರಿಗೆ ಮಂತ್ರಿಗಳ ರಾಜೀನಾಮೆಯನ್ನು ಕಳುಹಿಸಿದರು ಎನ್ನುವುದು ಈ ರಾಜ್ಯದ ಜನರು ಮತ್ತು ಸದಸ್ಯರು ತಿಳಿದುಕೊಳ್ಳುವ ಹಕ್ಕು ಮತ್ತು ಜವಾಬ್ದಾರಿ ಇದೆ. ದಯಮಾಡಿ ತಾವು ಸರ್ಕಾರಕ್ಕೆ ಹೇಳಿ, ಯಾವ ಕಾರಣಕ್ಕೋಸ್ಕರ ಮಂತ್ರಿಗಳ ರಾಜೀನಾಮೆಯನ್ನು ಪಡೆಯಲಾಯಿತು ಎನ್ನುವ ವಿವರಗಳನ್ನು ಸದನಕ್ಕೆ ಹೇಳಬೇಕು.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಹೇಳಿಕೆಯನ್ನು ಮಾಡಿದ್ದಾರೆ. ಈ ಘಟನೆಯ ಬಗ್ಗೆ ಅವರು ಹೇಳಿಕೆಯನ್ನು ಮಾಡುವುದಕ್ಕೆ ಬರುವುದಿಲ್ಲ. ಅವರು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಅಥವಾ ಸಭಾನಾಯಕರ ಪರವಾಗಿ ಹೇಳಿಕೆಯನ್ನು ನೀಡಬೇಕು. ಆದರೆ ಇಲ್ಲಿ ಅವರೇ ಸಹಿ ಹಾಕಿ ಹೇಳಿಕೆಯನ್ನು ಕೊಟ್ಟಿದ್ದಾರೆ. ಇದು ಯಾವ ನ್ಯಾಯ? ಯಾವ ಕಾರಣಕ್ಕಾಗಿ ರಾಜೀನಾಮೆಯನ್ನು ಅಂಗೀಕರಿಸಲಾಯಿತು ಎನ್ನುವುದು ಇದರಲ್ಲಿ ಇಲ್ಲ. ಯಾವ ವಿಷಯ ಎನ್ನುವುದು ಬೇಕಲ್ಲ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಹಿರಿಯ ಸದಸ್ಯರಾದ ಮಾನ್ಯ ಸುದರ್ಶನ್‌ರವರು ಬಹಳ ತಾತ್ವಿಕವಾಗಿ ಪ್ರಶ್ನೆಯನ್ನು ಎತ್ತಿದ್ದಾರೆ. ಆ ಪ್ರಶ್ನೆಗೆ ಸರ್ಕಾರ ಉತ್ತರವನ್ನು ಕೊಡಬೇಕಾಗುತ್ತದೆ. ಸರ್ಕಾರ ಉತ್ತರವನ್ನು ಕೊಡುವುದಕ್ಕೆ ತಯಾರಾಗಬೇಕಾಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರು ಕೇಳಿರತಕ್ಕಂಥ ವಿಚಾರದ ಬಗ್ಗೆ ಸಭಾನಾಯಕರು, ಮಾನ್ಯ ಮುಖ್ಯಮಂತ್ರಿಗಳು ಅಥವಾ ಯಾರಾದರೂ ಹಿರಿಯ ಸಚಿವರು ಬಂದು ಅದರ ಬಗ್ಗೆ ಉತ್ತರವನ್ನು ಕೊಡಬೇಕಾಗುತ್ತದೆ. ಅವರು ಉತ್ತರವನ್ನು ಕೊಡುವಾಗ the House should be in order. ದಯಮಾಡಿ ಬಾವಿಯಲ್ಲಿರುವ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ವಾಪಸ್ ಬನ್ನಿ. ನಾವು ಸದನದ ನಡವಳಿಗಳನ್ನು ಪ್ರಾರಂಭ ಮಾಡೋಣ. ಮೊದಲು ಸರ್ಕಾರ ಉತ್ತರವನ್ನು ಕೊಡಲಿ. ನಂತರ ಏನು ಪರಿಸ್ಥಿತಿ ಉದ್ಭವವಾಗುತ್ತದೆ ನೋಡೋಣ. ತಾವು ಹೇಳತಕ್ಕಂಥಾದ್ದನ್ನು ನಾನು ಒಪ್ಪುತ್ತೇನೆ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಅಥವಾ ಸಭಾನಾಯಕರು ಈ ಬಗ್ಗೆ ಉತ್ತರವನ್ನು ಕೊಡಬೇಕು. ಯಾವುದೋ ಸಚಿವರು ಉತ್ತರವನ್ನು ನೀಡಿದರೆ ಆ ಉತ್ತರವನ್ನು ಒಪ್ಪಿಸಿಕೊಳ್ಳುವುದಕ್ಕೆ ನಾವು ತಯಾರಿಲ್ಲ.

**ಶ್ರೀ ಎಸ್.ಎ. ರಾಮದಾಸ್ (ವೈದ್ಯಕೀಯ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ಸರ್ಕಾರ ಕೊಟ್ಟಿರತಕ್ಕಂಥ ಹೇಳಿಕೆಯ ಮೇಲೆ ಚರ್ಚೆಯೇ ಇಲ್ಲ ಎಂದ ಮೇಲೆ ಅದರ ಮೇಲೆ ಸ್ಪಷ್ಟೀಕರಣ ಎಂತಹದ್ದು? ಯಾವುದಕ್ಕೆ ಪ್ರಾವಿಷನ್ ಇದೆ? ಅವರು ನಿಯಮ 324ರ ಅಡಿಯಲ್ಲಿ ಎಂದು ಹೇಳಿದರು. ನಿಯಮ 324ರಲ್ಲಿ ಎಲ್ಲಿದೆ?

**ಸಭಾಪತಿಯವರು:–** ಮಾನ್ಯ ವಿರೊಧ ಪಕ್ಷದ ನಾಯಕರು ಹಾಗೂ ಮಾನ್ಯ ಸುದರ್ಶನ್‌ರವರು ತಮ್ಮ ತಮ್ಮ ಸ್ಥಾನದಲ್ಲಿ ಸ್ಪಷ್ಟವಾಗಿ ಒಂದೇ ವಿಷಯದ ಬಗ್ಗೆ ಇಬ್ಬರೂ ಮಾತನಾಡಿದ್ದಾರೆ.

**ಶ್ರೀ ವಿ.ಆರ್. ಸುದರ್ಶನ್:–** ಮಾನ್ಯ ಸಭಾಪತಿಯವರೇ, ನಾನು ಎರಡು ವಿಷಯಗಳನ್ನು ಕೇಳಿದ್ದೇನೆ.

**ಸಭಾಪತಿಯವರು:–** ಯಾವ ಕಾರಣಕ್ಕಾಗಿ ರಾಜೀನಾಮೆಯನ್ನು ಪಡೆಯಲಾಗಿದೆ ಎಂದು ನೀವು ಕೇಳಿದ್ದೀರಿ. ಸರ್ಕಾರ ಇದಕ್ಕೆ ಉತ್ತರವನ್ನು ಹೇಳಬೇಕಾಗುತ್ತದೆ. ಸರ್ಕಾರ ಉತ್ತರವನ್ನು ಹೇಳಿ ಎಂದು ನಾನು ಕೇಳುತ್ತೇನೆ. ಅದಕ್ಕೆ ಮುಂಚೆ ತಾವುಗಳು ತಾವುಗಳು ತಮ್ಮ ತಮ್ಮ ಸ್ಥಾನಕ್ಕೆ ಹೋಗದೇ ಹೋದರೆ ನಾನು ಸರ್ಕಾರದಿಂದ ಹೇಗೆ ಉತ್ತರವನ್ನು ಕೊಡಿಸುವುದು. ಸದನದಲ್ಲಿ ಗಾಂಭೀರ್ಯತೆ ಇದ್ದರೆ ಅವರು ಉತ್ತರವನ್ನು ಕೊಡುತ್ತಾರೆ. ನಿಮಗೆ ಅದರಿಂದ ಸಮಾಧಾನ ಆಗಬಹುದು ಅಥವಾ ಆಗದೇ ಇರಬಹುದು, ನೋಡೋಣ ಏನಾಗುತ್ತದೆ ಎಂದು. ಈಗ ದಯಮಾಡಿ ಬಾವಿಯಲ್ಲಿರುವ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ತೆರಳಲಿ, ನಂತರ ನಾವು ಚರ್ಚೆ ಮಾಡೋಣ. ಸದಸ್ಯರು ತಮ್ಮ ಸ್ಥಾನಗಳಿಗೆ ತೆರಳುವುದಕ್ಕೆ ಮುಂಚೆ ಯಾವುದೇ ಚರ್ಚೆ ಬೇಡ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ಬೆಳಿಗ್ಗೆ ನಾವು ನಿಮ್ಮ ಗಮನಕ್ಕೆ ತಂದ ವಿಷಯ ಬೇರೆ ಆದರೆ ಅದಕ್ಕೆ ಸರಿಯಾಗಿ ಚರ್ಚೆ ಆಗದೆಯೇ ಶಿಕ್ಷಣ ಸಚಿವರು ಈ ರೀತಿಯ ಒಂದು ಹೇಳಿಕೆಯನ್ನು ಕೊಟ್ಟುಬಿಟ್ಟರು. ಈ ರೀತಿಯ ಒಂದು ಹೇಳಿಕೆಯನ್ನು ಕೊಡಿಸಿಬಿಟ್ಟಿರಿ.

**ಶ್ರೀ ಎಸ್.ಎ. ರಾಮದಾಸ್:-** ಮಾನ್ಯ ಸಭಾಪತಿಯವರೇ, ನಿಯಮ 324ರ ಅಡಿಯಲ್ಲಿ ಸರ್ಕಾರ ಹೇಳಿಕೆಯನ್ನು ಮಾಡಿದೆ. ಅದಕ್ಕೆ ಎಲ್ಲಿಯೂ ಸಹ ಚರ್ಚೆಗೆ ಪ್ರಾವಿಷನ್ ಇಲ್ಲ.

**Sri. V.R. SUDARSHAN:-** I am seeking a clarification. I am seeking a clarification.

**ಶ್ರೀಮತಿ ಮೋಟಮ್ಮ:-** ಸಭಾನಾಯಕರು ಅಥವಾ ಮುಖ್ಯಮಂತ್ರಿಗಳು ಉತ್ತರವನ್ನು ಹೇಳಬೇಕು. ಅವರಿಬ್ಬರು ಹೇಳಿಕೆಯನ್ನು ಮಾಡದೇ ಇವರೇ ಸಹಿ ಹಾಕಿ ಉತ್ತರವನ್ನು ಹೇಳುವುದರಲ್ಲಿ ಏನು ಅರ್ಥವಿದೆ? ಅವರ ಪರವಾಗಿ ಎಂದಾದರೂ ಉತ್ತರವನ್ನು ಹೇಳಬೇಕು.

**ಸಭಾಪತಿಯವರು:-** ಸಚಿವ ಸಂಪುಟದ ಪರವಾಗಿ ಯಾವುದೇ ಸಚಿವರು ಹೇಳಿಕೆಯನ್ನು ಕೊಡುವುದಕ್ಕೆ ಅಧಿಕಾರವಿದೆ. ಅವರು ಉತ್ತರವನ್ನು ಕೊಟ್ಟಿದ್ದಾರೆ. ಅದರಲ್ಲಿ ಏನೂ ತಪ್ಪಿಲ್ಲ. ನೋಡೋಣ.

(ಗೊಂದಲ)

**ಶ್ರೀ ವಿ.ಆರ್. ಸುದರ್ಶನ್:-** ಮಾನ್ಯ ಸಭಾಪತಿಯವರೇ, ಇದಕ್ಕೆ ಉತ್ತರ ಕೊಡಲು ಸದನಕ್ಕೆ ಮುಖ್ಯಮಂತ್ರಿಗಳು ಬರಬೇಕು ಇಲ್ಲವೇ ಮಾನ್ಯ ಸಭಾನಾಯಕರು ಬರಬೇಕು. (ಗೊಂದಲ) ನನಗೆ clarification ಬೇಕು.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಗಳೆ, ಬೆಳಿಗ್ಗೆ ಸದನ ನಡೆಯುವಂತಹ ಸಂದರ್ಭದಲ್ಲಿ, ಮಾನ್ಯ ನಾಣಯ್ಯನವರು ಹೇಳಿದಂತಹ ಪ್ರಾವಿಷನ್‌ನ ಬಗ್ಗೆ ಮಾನ್ಯ ಗಣೇಶ್‌ಕಾರ್ಣಿಕ್‌ರವರು ಒಂದು ಪಾಯಿಂಟ್ ಆಫ್ ಆರ್ಡರ್ ಎತ್ತಿದರು. ಅದಕ್ಕೆ ತಾವು ಮೊದಲು ರೂಲಿಂಗ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ತಾವು, ಈ ಕುರಿತು ಚರ್ಚೆ ಮಾಡುವುದಕ್ಕೆ ಬರುವುದಿಲ್ಲ, ಕೆಳಮನೆಯ ಸದಸ್ಯರ ಬಗ್ಗೆ ಮಾತನಾಡುವುದಕ್ಕೆ ಅವಕಾಶವಿಲ್ಲ ಎಂದು ತಿಳಿಸಿದ್ದೀರಿ. ಇದರ ಬಗ್ಗೆ clarify ಆಗದೇ, ಒಂದು ಕಡೆ ಧರಣಿಯನ್ನೂ ಮಾಡಿ ಇನ್ನೊಂದು ಕಡೆ clarification ಕೇಳುವುದು ಸರಿಯಲ್ಲ.

**ಸಭಾಪತಿಯವರು:–** ಧರಣಿಯನ್ನು ಅವರು ವಾಪಸ್ಸು ತೆಗೆದುಕೊಂಡು, ಅವರವರ ಸ್ಥಾನದಲ್ಲಿ ಕುಳಿತು ಸದನ ನಡೆಯುವುದಕ್ಕೆ ಅನುವು ಮಾಡಿಕೊಟ್ಟರೆ, ಅಂತಹ ವಾತಾವರಣ ನಿರ್ಮಾಣ ಮಾಡಿದರೆ ಆಗ ವಿರೋಧ ಪಕ್ಷ ಎತ್ತಿರುವ ಒಂದು clarification ಕೇಳುವುದಕ್ಕೆ ಅಧಿಕಾರ ಇದೆ. . .

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಗಳೇ, ಅದಕ್ಕಿಂತ ಪೂರ್ವದಲ್ಲಿ ನಿಯಮ 324ರ ಕೆಳಗೆ ಸ್ಟೇಟ್‌ಮೆಂಟ್ ಮಾಡಿದರು. ಅದರ ಬಗ್ಗೆ clarification ಕೇಳಬೇಕು . . .

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೂ ಕೂಡ ಅದನ್ನೇ ಕೇಳುತ್ತಿದ್ದಾರೆ. ನಾನು, ಈ ಕುರಿತು ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ, clarification ಕೇಳಬಹುದು ಎಂದು ಹೇಳಿದ್ದನ್ನು ತಾವು ಗಮನಿಸಿದ್ದೀರಿ. ಈಗ ಮಾನ್ಯ ಸುದರ್ಶನ್‌ರವರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಹೆಚ್ಚು–ಕಡಿಮೆ ಒಂದೇ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮುಖ್ಯಮಂತ್ರಿಗಳು ಸ್ಟೇಟ್‌ಮೆಂಟ್ ಮಾಡಿದ್ದಾರೆ, ಮೂರು ಜನ ಸಚಿವರು ರಾಜೀನಾಮೆ ಕೊಟ್ಟಿದ್ದಾರೆ, ಏಕೆ ಕೊಟ್ಟಿದ್ದಾರೆ ಎಂದು . . .

(ಗೊಂದಲ)

**ಶ್ರೀ ಬಸವರಾಜ ಬೊಮ್ಮಾಯಿ:–** ಅದರ ಬಗ್ಗೆ ಮಾನ್ಯ ಕಾಗೇರಿಯವರು ಹೇಳಿದ್ದಾರೆ. ಕೇವಲ ಸ್ಟೇಟ್‌ಮೆಂಟ್ ಅಲ್ಲ, ಅದರ ಬಗ್ಗೆ ಹೇಳಿದ್ದಾರೆ. . .

**ಸಭಾಪತಿಯವರು:–** ಧರಣಿಯಲ್ಲಿರುವ ಸದಸ್ಯರು ತಮ್ಮ ತಮ್ಮ ಸ್ಥಾನಕ್ಕೆ ತೆರಳಬೇಕು. ಚರ್ಚೆ ಮಾಡಲು ಅನುಕೂಲಕರ ವಾತಾವರಣ ನಿರ್ಮಾಣವಾದಾಗ ಖಂಡಿತವಾಗಿ ನಾನು ಸರ್ಕಾರಕ್ಕೆ ತನ್ನ ನಿಲುವನ್ನು ಹೇಳುವುದಕ್ಕೆ, ತನ್ನ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ. ಸದನದಲ್ಲಿ ಒಳ್ಳೆಯ ವಾತಾವರಣ ಮೂಡುವುದಕ್ಕೆ ಎಲ್ಲರೂ ಅನುವು ಮಾಡಿಕೊಡಬೇಕು. ಆಮೇಲೆ ಬೇರೆ ವಿಷಯ ಚರ್ಚೆ ಮಾಡೋಣ. ದಯಮಾಡಿ ಎಲ್ಲರೂ ತಮ್ಮ ತಮ್ಮ ಸ್ಥಾನಕ್ಕೆ ತೆರಳಬೇಕು.

**ಶ್ರೀ ವಿ.ಆರ್. ಸುದರ್ಶನ್:-** ಅಂತಹ ವಾತಾವರಣ ನಿರ್ಮಾಣವಾಗಬೇಕಾದರೆ ಅದಕ್ಕೆ ಸರ್ಕಾರವೂ ಸಹಕಾರ ಮಾಡಬೇಕಾಗುತ್ತದೆ. ಸರ್ಕಾರ ಮೊಂಡುತನ ಮಾಡಿದರೆ ಆಗುವುದಿಲ್ಲ. ಈ ರಾಜ್ಯದ ಜನರಿಗೆ ಮತ್ತು ಈ ಸದನದ ಸದಸ್ಯರಿಗೆ ತಿಳಿದುಕೊಳ್ಳುವ ಹಕ್ಕಿದೆ. ಯಾವ ಕಾರಣಕ್ಕಾಗಿ. .

**ಶ್ರೀ ಎಸ್.ಎ. ರಾಮದಾಸ್:-** ಮೊಂಡುತನವನ್ನು ಯಾರು ಮಾಡುತ್ತಿದ್ದಾರೆ? ಸದನವನ್ನು order ಗೆ ತರಲು ಪ್ರಯತ್ನಿಸುತ್ತಿರುವಾಗ ಅವರೇ ಮೊಂಡುತನವನ್ನು ಮಾಡುತ್ತಿದ್ದಾರೆ. They are not going back to their seats. (ಗೊಂದಲ) ಸರ್ಕಾರ suo moto statement ಮಾಡಿದೆ. (ಗೊಂದಲ) ಸಚಿವರುಗಳು ರಾಜೀನಾಮೆ ಕೊಟ್ಟಿದ್ದಾರೆ, ಈ ಕುರಿತ ಎಲ್ಲಾ ಪ್ರಕ್ರಿಯೆಗಳು ಜರುಗಿವೆ. We are clear. (ಗೊಂದಲ) ನಾವೇನು ಹೇಳುತ್ತಿದ್ದೇವೆಂದರೆ ಸದನವು order ಗೆ ಬರಲಿ. Let them go back to their seats.

**ಶ್ರೀಮತಿ ಮೋಟಮ್ಮ:-** ಸರ್ಕಾರ ಏಕೆ ಭಂಡಾಟ ಆಡುತ್ತಿದೆ . . .

(ಗೊಂದಲ)

**ಸಭಾಪತಿಯವರು:-** ಧರಣಿಯಲ್ಲಿರುವ ಸದಸ್ಯರಿಗೆ ವಾಪಸ್ಸು ಹೋಗುವುದಕ್ಕೆ ಒಂದು ಅವಕಾಶ ಕೊಡಿ. ಅವರವರ ಸ್ಥಾನಕ್ಕೆ ತೆರಳಬೇಕೆಂದು ಹೇಳಿದ್ದೇನೆ. ಬಾವಿಯಲ್ಲಿ ನಿಂತು ಮಾತನಾಡುವುದು ಯಾವುದೂ ದಾಖಲಾಗತಕ್ಕದ್ದಲ್ಲ.

**ಶ್ರೀ ವಿ.ಆರ್. ಸುದರ್ಶನ್:-** ನಾವು clarification ಕೇಳುತ್ತಿದ್ದೇವೆ . . .

**ಸಭಾಪತಿಯವರು:-** ಸರ್ಕಾರ clarification ಕೊಡುತ್ತದೆ. . .

(ಗೊಂದಲ)

**ಶ್ರೀ ವಿ.ಆರ್. ಸುದರ್ಶನ್:-** ನಿಯಮಾನುಸಾರ ಸರ್ಕಾರ clarification ಕೊಡಬೇಕು.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಗಳೆ, placard ಪ್ರದರ್ಶನ ಮಾಡುವುದಕ್ಕೆ ಯಾವ ಕಾನೂನಿನಲ್ಲಿ ಅವಕಾಶ ಇದೆ . . .

**ಸಭಾಪತಿಯವರು:–** ಅದನ್ನು ನಾನು ಗಮನಿಸಿದ್ದೇನೆ . . .

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ಸದನದೊಳಗೆ ಮೊಬೈಲ್ ತೆಗೆದುಕೊಂಡು ಹೋಗುವುದಕ್ಕೆ ಅವಕಾಶ ಇದೆಯೇ? . . .

(ಗೊಂದಲ)

**ಶ್ರೀಮತಿ ಮೋಟಮ್ಮ:–** ಮೊಬೈಲ್‌ನ್ನು ಇಲ್ಲಿ ಯಾರೂ ಆನ್ ಇಟ್ಟಿರಬಾರದು. ಮೊಬೈಲ್‌ನ್ನು ಆಫ್ ಮಾಡಬೇಕು ಎಂಬ ನಿಯಮಗಳನ್ನು ನಾವುಗಳು ಪಾಲನೆ ಮಾಡುತ್ತೇವೆ. ಆದರೆ ಸಚಿವರು ಇದನ್ನು ಪಾಲನೆ ಮಾಡಬಾರದೇ? ಸಚಿವರುಗಳು ಮೊಬೈಲ್ ಆನ್ ಮಾಡಿಕೊಂಡು ಮಜಾ ಮಾಡಬಹುದೇ: . . .

**ಸಭಾಪತಿಯವರು:–** ಧರಣಿ ಕುಳಿತಿರುವವರು ದಯವಿಟ್ಟು ತಮ್ಮ ತಮ್ಮ ಸ್ಥಾನಕ್ಕೆ ತೆರಳಿ ಸದನ ನಡೆಸುವುದಕ್ಕೆ ಅನುವು ಮಾಡಿಕೊಡಬೇಕೆಂದು ವಿನಂತಿಸುತ್ತೇನೆ. (ಗೊಂದಲ) ಧರಣಿ ಕುಳಿತಿರುವ ಸದಸ್ಯರು ತಮ್ಮ ಸ್ಥಾನಗಳಿಗೆ ಹೋಗಬೇಕೆಂದು ಮತ್ತೊಮ್ಮೆ ಹೇಳುತ್ತಿದ್ದೇನೆ. ದಯಮಾಡಿ ವಾಪಸ್ಸು ಹೋಗಿ. ಆಮೇಲೆ ಮಾತನಾಡೋಣ. ಧರಣಿಯಲ್ಲಿ ನಿರತರಾಗಿರುವವರು ಮಾತನಾಡುವುದು ಸರಿಯಲ್ಲ.

**ಶ್ರೀ ವಿ.ಆರ್. ಸುದರ್ಶನ್:–** ಮುಖ್ಯಮಂತ್ರಿಗಳು ಅಥವಾ ಸಭಾನಾಯಕರನ್ನು ಸದನದಲ್ಲಿ ಬರುವುದಕ್ಕೆ ಹೇಳಿ, ತಾವು ಆದೇಶ ಕೊಡಿ.

**ಶ್ರೀ ಎಸ್.ಎ. ರಾಮದಾಸ್:–** ಮಾನ್ಯ ಸಭಾಪತಿಗಳೆ, ಸದನ order ಗೆ ಬರಲಿ. When the House is not in order, ನಾವು ಹೇಗೆ ಅದನ್ನು ತೆಗೆದುಕೊಳ್ಳಲು ಸಾಧ್ಯವಿದೆ?

(ಗೊಂದಲ)

**ಸಭಾಪತಿಯವರು:-** ಮನಸ್ಸುಗಳು ತಿಳಿಯಾಗಲಿ, ಸಮಾಧಾನವಾಗಲಿ ಎನ್ನುವ ಕಾರಣಕ್ಕೆ ಸದನವನ್ನು 4.30 ಗಂಟೆಯ ತನಕ ಮುಂದೂಡುತ್ತಿದ್ದೇನೆ.

(3 ಗಂಟೆ 25 ನಿಮಿಷಗಳಲ್ಲಿ ಮುಂದೂಡಲ್ಪಟ್ಟ ಸದನವು ಪುನಃ 4 ಗಂಟೆ 54 ನಿಮಿಷಗಳಿಗೆ ಸಮಾವೇಶಗೊಂಡಿತು. ಮಾನ್ಯ ಸಭಾಪತಿಯವರು ಸಭಾ ಪೀಠವನ್ನಲಂಕರಿಸಿದ್ದರು)

(ಈ ಹಂತದಲ್ಲಿ ಕಾಂಗ್ರೆಸ್ ಮತ್ತು ಜೆ.ಡಿ.ಎಸ್. ಪಕ್ಷದ ಬಹುತೇಕ ಸದಸ್ಯರು ಸದನದ ಬಾವಿಯಲ್ಲಿ ನಿಂತಿದ್ದರು.)

**ಸಭಾಪತಿಯವರು:-** ಈಗ ತಾವುಗಳು ತಮ್ಮ ಭಾವನೆಗಳನ್ನು ವ್ಯಕ್ತ ಮಾಡಿದ್ದು ಆ ಮೂಲಕ ಸಾಕಷ್ಟು ವಿಷಯಗಳನ್ನು ತಿಳಿಸಿದ್ದೀರಿ. ನಾನು ಮತ್ತೆ ತಮ್ಮನ್ನು ವಿನಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ವಿರೋಧ ಪಕ್ಷದ ನಾಯಕರು ಗೌರವಾನ್ವಿತ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ತೆರಳಬೇಕೆಂದು ವಿನಂತಿಸುತ್ತೇನೆ. ಮತ್ತು ಬೇರೇನಾದರೂ ವಿಷಯಗಳಿದ್ದರೆ ಪ್ರಸ್ತಾಪ ಮಾಡಿ ಸರ್ಕಾರಕ್ಕೆ ತಿಳಿಸುತ್ತೇನೆ. ಚರ್ಚೆಗೆ ಅವಕಾಶ ಕೊಡುತ್ತೇನೆ. ಅಂದರೆ ತಾವು ಹೇಳಿದಂತಹ ವಿಷಯ ನನ್ನ ಮಿತಿಯೊಳಗೆ ಇದ್ದರೆ ಖಂಡಿತವಾಗಿ ಹೇಳುತ್ತೇನೆ. ಸರ್ಕಾರಕ್ಕೂ ಏನು ಹೇಳಬೇಕೋ ಅದನ್ನು ಹೇಳುತ್ತೇನೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-** ಮಾನ್ಯ ಸಭಾಪತಿಯವರೆ, ನಾನೂ ಸಹ ತಮ್ಮ ಮಾತಿಗೆ ದನಿಗೂಡಿಸುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಗೌರವಾನ್ವಿತ ಎಲ್ಲಾ ವಿರೋಧ ಪಕ್ಷದ ಸದಸ್ಯರುಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ತಾವುಗಳು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ ಸದನದ ಕಾರ್ಯಕಲಾಪವನ್ನು ಮುಂದುವರಿಸಬೇಕಾದ ಅಗತ್ಯತೆ ಇರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ನಾವು ಇಲ್ಲಿ ಏನು ಚರ್ಚೆ ಮಾಡುತ್ತಿದ್ದೇವೆಂದು ಹೊರಗಡೆ ಇರುವಂತಹ ಜನರು ಕೂಡ ನೋಡುತ್ತಿದ್ದಾರೆ. ಜನರು ಕೂಡ ಕಾಯುತ್ತಿದ್ದಾರೆ. ಆ ಹಿನ್ನೆಲೆಯಲ್ಲಿ ಎಲ್ಲ ಸದಸ್ಯರೂ ಕೂಡ ತಮ್ಮ ಸ್ವಸ್ಥಾನಕ್ಕೆ ಬಂದು ಸದನದ ಸುಗಮ ಕಲಾಪವನ್ನು ನಡೆಸಿಕೊಡುವುದಕ್ಕೆ ಅನುವು ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

(ಗೊಂದಲ)

**ಸಭಾಪತಿಯವರು:–** ನೀವು ಏನು ಹೇಳುತ್ತೀರೆಂದು ಕೇಳುವುದಕ್ಕೆ ಅವರು ತಯಾರಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಏನೋ ಮಾತನಾಡುತ್ತಿದ್ದಾರೆ ಒಂದು ನಿಮಿಷ ಎಲ್ಲರೂ ಸುಮ್ಮನೆ ಇರಿ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ಇದು ಸರಿಯೋ ತಪ್ಪೋ ನನಗೆ ಗೊತ್ತಿಲ್ಲ. ಒಂದು ದುರಂತ ಎಂದು ಹೇಳುವುದಾದರೆ, ನನಗೆ ಬಂದ ಮಾಹಿತಿಯ ಪ್ರಕಾರ ನಿನ್ನೆ ಕೂದಲೆಳೆಯ ಅಂತರದಲ್ಲಿ ಕೆಲವು ಸಚಿವರು ತಪ್ಪಿಸಿಕೊಂಡಿದ್ದಾರೆ. ಸಧ್ಯ ಒಳ್ಳೆಯದಾಯಿತು.

**ಸಭಾಪತಿಯವರು:–** ಯಾರು ಇಲ್ಲಿ ಬಾವಿಯಲ್ಲಿ ಇರುವವರಾ? . . . . .

**ಶ್ರೀ ಗಣೇಶ್ ಕಾರ್ಣಿಕ್:–** ಕಾರ್ಯಕಲಾಪದ ಪಟ್ಟಿಯ ಪ್ರಕಾರ ಪ್ರಶ್ನೋತ್ತರ ಕಲಾಪವನ್ನು ತೆಗೆದುಕೊಳ್ಳಬೇಕು.

**ಸಭಾಪತಿಯವರು:–** ಕೆಲವು ಸಲ ನಾವು ಸೀರಿಯಸ್ ಆಗಿ ತೆಗೆಕೊಳ್ಳಬೇಕಾಗುತ್ತದೆ. . .

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಕೆಳಮನೆ ನಡೆಯುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಬರಲಿ ಎಂದು . . . .

**ಸಭಾಪತಿಯವರು:–** ಕೆಳಮನೆ ಕಲಾಪ ನಡೆಯುತ್ತಿದೆ, ನಾನು ದೂರದರ್ಶನದಲ್ಲಿ ನೋಡಿಕೊಂಡು ಬಂದೆ. ಮಾನ್ಯ ಮುಖ್ಯ ಮಂತ್ರಿಗಳು ಅಲ್ಲಿ ಒಂದು ಹೇಳಿಕೆಯನ್ನು ಮಾಡುತ್ತಿದ್ದಾರೆ. ಕೆಳಮನೆ ನಡೆಯುವುದನ್ನು, ಅಲ್ಲಿ ಕಲಾಪ ಶುರು ಮಾಡಿದ್ದನ್ನು ನೋಡಿ ನಾನು ಇಲ್ಲಿ ತಕ್ಷಣ ಬೆಲ್ ನಿಲ್ಲಿಸುವುದಕ್ಕೆ ಹೇಳಿದೆ. ನಮ್ಮ ಸದನದ ಸದಸ್ಯರೆಲ್ಲರೂ ಸಹಕಾರ ನೀಡಿದ್ದೇ ಆದರೆ ನಾವೂ ಕೂಡ ಮೇಲ್ಮನೆ ಕಲಾಪವನ್ನು ನಡೆಸಬಹುದು, ಸ್ವಲ್ಪ ಹೆಚ್ಚು ಹೊತ್ತು ಬೆಲ್ ಹೊಡೆದರೂ ಕೂಡ ನಾವೂ ಸದನಕ್ಕೆ ಹೋಗಿ ಸದನವನ್ನು ನಡೆಸೋಣ ಎಂದು ಹೇಳಿದೆ.

**ಶ್ರೀಮತಿ ಮೋಟಮ್ಮ:–** ಕೆಳಮನೆಯಲ್ಲಿ ವಿರೋಧ ಪಕ್ಷದ ನಾಯಕರು ಮಾತನಾಡುವುದಕ್ಕೆ ಮಾನ್ಯ ಸಭಾಧ್ಯಕ್ಷರು ಅವಕಾಶವನ್ನು ಮಾಡಿಕೊಟ್ಟಿದ್ದರು. ಅದರಂತೆ ವಿರೋಧ ಪಕ್ಷದ ನಾಯಕರು ಮಾತನಾಡಲು ಎದ್ದು ನಿಂತ ಕೂಡಲೇ, ಆಡಳಿತ ಪಕ್ಷದವರೆಲ್ಲರೂ ಎದ್ದು ನಿಂತು ಗದ್ದಲ ಮಾಡುವುದಕ್ಕೆ ಶುರು ಮಾಡಿದರು.

**ಸಭಾಪತಿಯವರು:–** ನಾನೂ ಅವಕಾಶ ಕೊಟ್ಟಿದ್ದೇನಲ್ಲಮ್ಮಾ?

**ಶ್ರೀಮತಿ ಮೋಟಮ್ಮ:–** ಇಲ್ಲ ತಾವು ಮೊದಲು ಅವಕಾಶವನ್ನು ಕೊಡಲಿಲ್ಲ.

**ಸಭಾಪತಿಯವರು:–** ಆಮೇಲೆ ಅವಕಾಶವನ್ನು ಮಾಡಿಕೊಟ್ಟೆ.

**ಶ್ರೀಮತಿ ಮೋಟಮ್ಮ:–** ತದನಂತರ ಅವಕಾಶವನ್ನು ಮಾಡಿಕೊಟ್ಟಿರಿ. ನಮ್ಮ ಶಿಕ್ಷಣ ಸಚಿವರು ಇಲ್ಲಿ ಒಂದು ಹೇಳಿಕೆಯನ್ನು ಏನು ಮಾಡಿದ್ದಾರೆ ಅದು ಸರಿಯಲ್ಲ. ಮಾನ್ಯ ಮುಖ್ಯಮಂತ್ರಿಗಳು ಇಲ್ಲವೇ ಅವರ ಪರವಾಗಿ ಮಾನ್ಯ ಸಭಾ ನಾಯಕರು ಈ ಹೇಳಿಕೆಯನ್ನು ಕೊಡಬೇಕಾಗಿತ್ತು. ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ಸಭಾ ನಾಯಕರು ಕೊಡಬೇಕಾಗಿತ್ತು. ಆದರೆ, ಮಾನ್ಯ ಕಾಗೇರಿಯವರು ಶಿಕ್ಷಣ ಸಚಿವರಾಗಿ ಇಲ್ಲಿ ಒಂದು ಹೇಳಿಕೆಯನ್ನು ಕೊಟ್ಟ ಹಾಗೆ ಕೊಟ್ಟಿದ್ದಾರೆ. ಅದು ಸರಿಯಲ್ಲ.

**ಶ್ರೀ ಜಿ. ಮಧುಸೂಧನ್:–** ನನ್ನ ಒಂದು ಪ್ರಶ್ನೆಗೆ ಇಲ್ಲಿ ಉತ್ತರದ ಪ್ರತಿ ಬಂದಿದೆ. ಈ ಉತ್ತರವನ್ನು ನೀಡಲು ತುಂಬಾ ಹಣ ಖರ್ಚಾಗಿದೆ. ಇದರ ಬಗ್ಗೆ ಚರ್ಚೆ ಮಾಡಲು ಒಂದು ಅವಕಾಶ ಸಿಗುತ್ತಿಲ್ಲವೆಂದರೆ ಅದು ಸರಿಯಲ್ಲ.

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಸಭಾಪತಿಯವರೆ, ಸದನದ ಬಾವಿಯಲ್ಲಿ ಇರತಕ್ಕಂಥ ಎಲ್ಲಾ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಲ್ಲಿ ಆಸೀನರಾಗಬೇಕೆಂದು ವಿನಂತಿ ಮಾಡುತ್ತೇನೆ. ಪ್ರಶ್ನೋತ್ತರ ಕಲಾಪವನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮ ಮೂಲಕ ವಿನಂತಿಸುತ್ತೇನೆ. ಪ್ರಶ್ನೋತ್ತರ ಕಲಾಪ ಮುಗಿದ ಮೇಲೆ ಅವರು ತಮ್ಮ ವಿಚಾರವನ್ನು ಪ್ರಸ್ತಾಪ ಮಾಡಬಹುದು.

**ಶ್ರೀ ಬಸವರಾಜ ಹೊರಟ್ಟಿ:-** ಇಷ್ಟೆಲ್ಲಾ ಆಗಿದೆ ನಾವು ಕ್ಲಾರಿಫಿಕೇಷನ್ ಕೇಳುತ್ತೇವೆ. ಅವರು ಅದಕ್ಕೆ ಉತ್ತರವನ್ನು ನೀಡಲಿ. ಅದರಲ್ಲಿ ದೊಡ್ಡ ತಪ್ಪೇನು ಇದೆ?

**ಸಭಾಪತಿಯವರು:-** ಕೊಡುತ್ತಾರೆ. ನಾನು ಹೇಳಿದ್ದೇನೆ. ಬಾವಿಯಲ್ಲಿ ಇರುವ ಎಲ್ಲಾ ಸದಸ್ಯರು ಅವರವರ ಸ್ಥಳಗಳಿಗೆ ಹೋಗಿ ಕುಳಿತುಕೊಳ್ಳಿ. ನಾನು ಮಾನ್ಯ ಸಚಿವರಿಗೆ ಈಗಾಗಲೇ ಹೇಳಿದ್ದೇನೆ.

**ಶ್ರೀ ಬಸವರಾಜ ಹೊರಟ್ಟಿ:-** ಇಷ್ಟೆಲ್ಲಾ ಈಗ ನಡೆದಿದೆ. ನಾವು ಏನು ಕೇಳುತ್ತೇವೋ ಅದನ್ನು ಕೇಳುತ್ತೇವೆ. ಅವರು ಉತ್ತರವನ್ನು ಹೇಳಲಿ. ಸಭೆಯನ್ನು ಏಕೆ ಮುಂದೂಡಬೇಕೆಂದು ನನಗೆ ಅರ್ಥವಾಗುತ್ತಿಲ್ಲ. ನಮಗೆ ಅವಕಾಶ ಕೊಡಿ.

**ಸಭಾಪತಿಯವರು:-** ಪುನಃ ಸಭೆಯನ್ನು ಮುಂದೂಡುವುದು ಬೇಡ. ಸಭೆಯನ್ನು ನಡೆಸಬೇಕೆಂದು ನಾನು ಇಲ್ಲಿಗೆ ಬಂದಿದ್ದೇನೆ. ಮಾನ್ಯ ನಾಣಯ್ಯನವರು ಮಾತನಾಡಬೇಕೆಂದಿದ್ದಾರೆ. ಅವರು ಮಾತನಾಡಲಿ.

**ಶ್ರೀ ಎಂ.ಸಿ. ನಾಣಯ್ಯ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಇಂದು ಸದನ ಶುರುವಾದಂತಹ ಸಂದರ್ಭದಲ್ಲಿಯೇ ಈ ಒಂದು ಗಂಭೀರ ಸ್ವರೂಪದ ಪ್ರಕರಣದ ಬಗ್ಗೆ ಚರ್ಚೆ ಮಾಡಿದ್ದೆವು. ಆ ಮೂಲಕ ಎಲ್ಲರ ಗಮನವನ್ನು ಸೆಳೆದಿದ್ದೇವೆ. ಸರ್ಕಾರದಿಂದ ಒಂದು ಹೇಳಿಕೆ ಬಂದಾಗ, 324ನೇ ನಿಯಮದ ಅಡಿಯಲ್ಲಿ ನಿಮ್ಮ ಗಮನವನ್ನು ಸೆಳೆದು, ನಮಗೆ ಮಾಹಿತಿಯನ್ನು ಸರ್ಕಾರದಿಂದ ಬಯಸುವುದಕ್ಕೆ ಅಧಿಕಾರ ಇದೆ ಎಂದು ಹೇಳಿ ನಿಮ್ಮ ಮನವೊಲಿಸಿ ಆದ ಮೇಲೆ ನೀವು ಅದನ್ನು ಕೇಳಿ, ಮತ್ತು ಅವರಿಂದ ಮಾಹಿತಿಯನ್ನು ಬಯಸಿ ಎಂದು ಹೇಳಿ ಅವಕಾಶ ಕೊಟ್ಟಾದ ಮೇಲೆ ಶ್ರೀಮತಿ ಮೋಟಮ್ಮನವರು ಎದ್ದು ಮಾತನಾಡುವುದಕ್ಕೆ ಶುರು ಮಾಡುವ ಸಂದರ್ಭದಲ್ಲಿಯೇ ನಾನು ಒಂದು ಮಾತನ್ನು ವಿರೋಧ ಪಕ್ಷದವರಿಗೆ ಮತ್ತು ಆಡಳಿತ ಪಕ್ಷದವರಿಗೆ ಹೇಳಿದ್ದೆನು. ನಾವು ಇಲ್ಲಿ ಮಾತನಾಡುತ್ತಿರುವ ಸಂದರ್ಭದಲ್ಲಿ, ದಯವಿಟ್ಟು ಯಾರೂ ಯಾವುದೇ ನಿಯಮಾವಳಿಯ ಪುಸ್ತಕವನ್ನು ತೆಗೆದುಕೊಂಡು ಮಾತನಾಡುವುದಕ್ಕೆ ಅಡ್ಡಿ ಮಾಡಬೇಡಿ ಎಂದು ಹೇಳಿದ್ದೆ. ಈ ವಿಷಯದ ಬಗ್ಗೆ ಉತ್ತರವನ್ನು

ಕೊಡಬೇಕಾದ ಜವಾಬ್ದಾರಿ ಸರ್ಕಾರದ್ದಾಗಿರುತ್ತದೆ. ಈ ಸದನವನ್ನು ನಡೆಸುವುದಕ್ಕೆ ಇರುವಂತಹ ಆ ಒಂದು ಜವಾಬ್ದಾರಿಕೆ ನಿಮ್ಮ ಹತ್ತಿರ ಅಂದರೆ ಆಡಳಿತ ಪಕ್ಷದವರ ಬಳಿ ಇದೆಯೇ ಹೊರತು ಆ ಜವಾಬ್ದಾರಿಕೆ ವಿರೋಧ ಪಕ್ಷದವರಾದ ನಮ್ಮ ಬಳಿ ಇಲ್ಲ. ಅದನ್ನು ಹೇಳಿದ ಮೇಲೆ ತಾವು ಶುರು ಮಾಡಿದಿರಿ. ಶುರು ಮಾಡಿ ಆದ ಮೇಲೆ ಮಾನ್ಯ ವಿರೋಧ ಪಕ್ಷದವರು ಮಾತನಾಡುವ ಸಂದರ್ಭದಲ್ಲಿ, ಆಡಳಿತ ಪಕ್ಷದವರು ಯಾವ ರೀತಿ ಮಾಡಿದರು ಎಂಬುದನ್ನು ನಾವೆಲ್ಲರೂ ನೋಡಿದ್ದೇವೆ. ಆಗ ಗದ್ದಲ ಶುರುವಾಯಿತು. ನಂತರ ಅನಿವಾರ್ಯವಾಗಿ ನಾವುಗಳು ಧರಣಿಗೆ ಹೋಗಬೇಕಾದ ಪರಿಸ್ಥಿತಿ ಬಂತು. ಆಗ ತಾವು ಸದನವನ್ನು ಮುಂದೂಡಿದಿರಿ. ಈ ಸದನದಲ್ಲಿನ ವಿರೋಧ ಪಕ್ಷದ ಸದಸ್ಯರು ಸದನದ ಬಾವಿಗೆ ಬಂದು ಧರಣಿ ನಡೆಸುತ್ತಿದ್ದಂಥ ಸಂದರ್ಭದಲ್ಲಿ ಪುನಃ ಸದನವನ್ನು ನಡೆಸುವುದಕ್ಕೆ ಅಗತ್ಯವಾದಂಥ ಪರಿಸ್ಥಿತಿಯನ್ನು ನಿರ್ಮಾಣ ಮಾಡಬೇಕಾದಂಥ ಜವಾಬ್ದಾರಿಕೆ ಆಡಳಿತ ಪಕ್ಷದವರ ಮೇಲೆಯೇ ಇರುತ್ತದೆ. ಆಡಳಿತ ಪಕ್ಷದವರು ತಮ್ಮ ಹತ್ತಿರ ಬಂದು ತಮಗೆ ಪರಿಸ್ಥಿತಿಯನ್ನು ನಿವೇದನೆ ಮಾಡಬೇಕಾಗಿತ್ತು. ಈ ಸದನವನ್ನು ಸುಗಮವಾಗಿ ನಡೆಸಿಕೊಂಡು ಹೋಗುವ ಸಲುವಾಗಿ ಆ ಸಂದರ್ಭದಲ್ಲಿ ನಮ್ಮನ್ನು ಕೂಡ ಕರೆದು ನಮ್ಮಗಳ ಜೊತೆಯಲ್ಲಿ ಚರ್ಚೆ ಮಾಡಬೇಕಾಗಿತ್ತು. ಮತ್ತು ಈ ವಿಷಯವನ್ನು ಯಾವ ಮಟ್ಟಕ್ಕೆ ತೆಗೆದುಕೊಂಡು ಹೋಗಬೇಕೆಂದು ಹೇಳುವುದಕ್ಕೆ ನಮಗೂ ಕೂಡ ಒಂದು ರೀತಿ ನೀತಿ ಇದೆ. ನಮಗೂ ಕೂಡ ಒಂದು ಜವಾಬ್ದಾರಿಕೆ ಇದೆ. ಮತ್ತು ಅದು ನಮಗೆ ಗೊತಿದೆ. ಆದರೆ ಇಂದು ಅದ್ಯಾವುದಕ್ಕೂ ಅವಕಾಶವನ್ನು ಕೊಡದೆ ತಮ್ಮ ಕೊಠಡಿಯಲ್ಲಿ ಆ ವಿಷಯದ ಬಗ್ಗೆ ಚರ್ಚೆ ಮಾಡದೇ ಇರುವುದು ಮತ್ತು ನಮ್ಮ ವಿರೋಧ ಪಕ್ಷದ ನಾಯಕರನ್ನು ಕರೆದು ಈ ಬಗ್ಗೆ ಮುಂದೆ ಯಾವ ರೀತಿಯ ಹೆಜ್ಜೆಯನು ಹಾಕಬೇಕೆಂಬ ಬಗ್ಗೆ ಆಡಳಿತ ಪಕ್ಷದವರಿಂದ ಯಾವುದೇ ತರಹದ ಇನಿಷಿಯೇಟ್ ಏನು ಮಾಡಬೇಕಾಗಿತ್ತು ಅದು ಅವರಿಂದ ಬಂದಿಲ್ಲ. ಪುನಃ ನೀವು ಎರಡನೇ ಬಾರಿ ಮುಂದೂಡಿದಿರಿ.

(5.00 ಗಂಟೆ)

ಮತ್ತೆ ಸದನವನ್ನು ನೀವು ನಾಲ್ಕುವರೆ ಗಂಟೆಯವರೆಗೆ ಮುಂದೂಡಿದ್ದೀರಿ. ನಾವು ಅಲ್ಲಿಯವರೆಗೆ ಕಾದು ಕುಳಿತಿದ್ದೇವೆ. ಬೇರೆ ಬೇರೆ ಬೇಕಾದಷ್ಟು ವಿಚಾರಗಳು ಇರುವುದರಿಂದ ಅಧಿಕಾರಿಗಳು ಕೂಡ ಅಲ್ಲಿಯವರೆಗೆ ಕುಳಿತಿರುತ್ತಾರೆ. ಅವರ ಕಛೇರಿಗಳಲ್ಲಿ ಅವರು ಕೂಡ ಕೆಲಸವನ್ನು ಮಾಡುವ ಹಾಗಿಲ್ಲ. ಒಂದು ಕಡೆ ನಮ್ಮ ಮಾಧ್ಯಮ ಮಿತ್ರರಿದ್ದಾರೆ. ಅವರ ಕೆಲಸ ಕೂಡ ಆಗಲಿಲ್ಲ. ನಾವು ಇಲ್ಲಿಗೆ ಬಂದಿದ್ದೇವೆ. ನಮಗೂ ಏನೂ ಕೆಲಸ ಆಗಲಿಲ್ಲ. ಅದೆಲ್ಲವುದರ ಪರಿಣಾಮ ಏನಾಯಿತು? ಸುಮ್ಮನೆ ಇದನ್ನು ಮಾಡುವುದಕ್ಕಿಂತ ಸರ್ಕಾರ ಸ್ಪಷ್ಟವಾಗಿ ನಿಮ್ಮ ಚಿಂತನೆ ಏನೆಂದು ಹೇಳಿ. ಬಹುಶಃ ನೀವು ಇದರಲ್ಲಿ ಮುಜುಗರಕ್ಕೆ ಒಳಗಾಗಿದ್ದೀರಿ. ನಾವೇನೋ ಪ್ರಶ್ನೆ ಕೇಳಿ, ಅದಕ್ಕೆ ನೀವೇನೋ ಉತ್ತರ ಕೊಟ್ಟು ಅದರಿಂದ ಇನ್ನೇನಾದರು ಆದೀತು, ಆದ್ದರಿಂದ ಈ ಸದನವನ್ನು ಇವೊತ್ತಿಗೆ ಮೊಟಕುಗೊಳಿಸಿ ಅನಿರ್ಧಿಷ್ಟಕಾಲದವರೆಗೆ ಮುಂದೂಡಬೇಕೆಂದು ನಿಮ್ಮ ಸರ್ಕಾರದ ನೇರವಾದ ಚಿಂತನೆಯಾದರೆ..

(ಗೊಂದಲ)

**ಶ್ರೀ ಗೋವಿಂದ ಎಂ ಕಾರಜೋಳ್:-** ಮಾನ್ಯ ಸಭಾಪತಿಯವರೆ, ಸದನ ನಡೆಯಬೇಕೆಂದು ಸರ್ಕಾರದ ನೇರವಾದ ಚಿಂತನೆ ಇದೆ.

(ಗೊಂದಲ)

**ಸಭಾಪತಿಯವರು:-** ಮೊದಲು ಅವರು ಮಾತುಗಳನ್ನು ಮುಕ್ತಾಯ ಮಾಡಲಿ ನಂತರ ಬೇರೆಯವರು ಮಾತನಾಡಿ. ಮೊದಲು ಮಾನ್ಯ ನಾಣಯ್ಯನವರು ಮಾತುಗಳನ್ನು ಮುಕ್ತಾಯ ಮಾಡಲಿ.

**ಶ್ರೀ ಎಂ.ಸಿ. ನಾಣಯ್ಯ:-** ಮಾನ್ಯ ಸಭಾಪತಿಯವರೆ, ಆಡಳಿತ ಪಕ್ಷದ ಮಂತ್ರಿಗಳಾಗಿರತಕ್ಕಂಥ ಕಾರಜೋಳ್‌ರವರು, ಶ್ರೀಮಾನ್ ಬಚ್ಚೇಗೌಡರು ನಾವೆಲ್ಲರೂ ಕೂಡ ಒಟ್ಟಿಗೆ ಕೆಲಸ ಮಾಡಿದವರು. ಅವರು ಸದನದಲ್ಲಿ ಬಹಳ ಹಿರಿಯರಾಗಿ ಕೆಲಸ ಮಾಡಿರತಕ್ಕಂಥವರು. ವಿರೋಧ ಪಕ್ಷದವರು ಮಾತನಾಡುವಾಗ ಆಡಳಿತ ಪಕ್ಷದವರು ಸ್ವಲ್ಪ ಸಹನೆಯಿಂದ ಕೇಳಬೇಕು.

(ಗೊಂದಲ)

**ಶ್ರೀ ಬಿ.ಎನ್. ಬಚ್ಚೇಗೌಡ:–** ಮಾನ್ಯ ಸಭಾಪತಿಯವರೆ, ನಾವು ಸುಮ್ಮನೆ ಕುಳಿತಿದ್ದರೆ ಅಪರಾಧ ಎಂದು ಹೇಳಿದರೆ ಹೇಗೆ? ನಾವು ಮೌನವಾಗಿಯೇ ಕುಳಿತಿದ್ದೆವು. ಆದರೆ ಅವರು ಏನು ಬೇಕಾದರು ಮಾತನಾಡಿದರೆ ನಾವು ಅದಕ್ಕೆ react ಮಾಡಲೇಬೇಕಲ್ಲ. ನಮಗೆ ತಮ್ಮ ಬಗ್ಗೆ ಅಪಾರ ಗೌರವ ಇದೆ. ನೀವು ಹೇಳಿದ್ದಕ್ಕೆ ಮಾತ್ರ ಉತ್ತರವನ್ನು ನೀಡುತ್ತಿದ್ದೇವೆ. ಸುಮ್ಮನೆ ಕುಳಿತಿದ್ದರೆ ಏನಾಗುತ್ತದೆ ಗೊತ್ತಾ? **"ಮೌನಂ ಸಮ್ಮತಿ ಲಕ್ಷಣಂ"** ಎಂದು ಆಗುತ್ತದೆ. ನಿಮಗೆ ಅದೇ ಬೇಕಾಗಿದೆ, ನಾವು ಅದನ್ನೇ ಹೇಳಬೇಕಾಗಿದೆ. ಚರ್ಚೆಯಾಗಲಿ, ನಾವು ಉತ್ತರ ಕೊಡುತ್ತೇವೆ. We are capable to answer. ತಾವು ಮುಖ್ಯಮಂತ್ರಿಗಳು, ಸಭಾನಾಯಕರು ಉತ್ತರ ಕೊಡಬೇಕೆಂದು ಹೇಳಿದ್ದೀರಿ. ಅವರು ಇಲ್ಲದಿದ್ದರೆ ಯಾರಾದರು ಉತ್ತರವನ್ನು ಕೊಡುತ್ತಾರೆ. ತಾವು ಸಭಾಪತಿಯವರ ಕೊಠಡಿಯಲ್ಲಿ ಮಾತನಾಡಬೇಕಾಗಿತ್ತು ಎಂದು ಹೇಳಿದ್ದೀರಿ. ಹೌದು ಅದು ಆಗಬೇಕಾಗಿತ್ತು. ಅದು ಆಗಿಲ್ಲ. ಅದು ತಪ್ಪಾಗಿದೆ. ಅದನ್ನೆಲ್ಲವನ್ನು ನಾವು ಒಪ್ಪಿಕೊಳ್ಳೋಣ.

(ಗೊಂದಲ)

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೆ, ಆ ಕೆಲಸ ಅವರಿಂದ ಆಗಲಿಲ್ಲವಲ್ಲ.

(ಗೊಂದಲ)

**ಶ್ರೀ ಬಿ.ಎನ್. ಬಚ್ಚೇಗೌಡ:–** ಮಾನ್ಯ ಸಭಾಪತಿಯವರೆ, ಹೌದು ಅದು ತಪ್ಪಾಗಿದೆ ಎಂದು ಒಪ್ಪಿಕೊಳ್ಳುತ್ತಿದ್ದೇನೆ. ತಾವು ಹೇಳುತ್ತಿರುವುದು ಸರಿ ಇದೆ.

(ಗೊಂದಲ)

**ಶ್ರೀ ಎಂ.ಸಿ ನಾಣಯ್ಯ:-** ಮಾನ್ಯ ಸಭಾಪತಿಯವರೆ, ಅವರು ಆಡಳಿತ ಪಕ್ಷದವರು ಮೊದಲು ಸಹನೆಯಿಂದ ಕುಳಿತು ಕೇಳುವುದನ್ನು ಕಲಿತುಕೊಳ್ಳಬೇಕು. ನಾವು ಮಾತನಾಡಿಯಾದ ಮೇಲೆ ಅವರು ಮಾತನಾಡಲಿ. ನಾನು ಬಹಳ ಜವಾಬ್ದಾರಿಕೆಯಿಂದ ಮಾತನಾಡುತ್ತಿದ್ದೇನೆ. ನಾನು ಸಂಸತ್ತಿನ ಚೌಕಟ್ಟಿನ ಹೊರಗಡೆ ಮಾತನಾಡುತ್ತಿಲ್ಲ. ನಿಮ್ಮ ಮೇಲೆ ಯಾವುದಾದರು ಬೇಜವಾಬ್ದಾರಿತನದ ಟೀಕೆಯನ್ನು ಮಾಡಲಿಲ್ಲ. ವಿಚಾರವನ್ನು ನಿಮ್ಮ ಮುಂದೆ ಹೇಳಿದ್ದೇನೆ. ಆ ವಿಚಾರಕ್ಕೆ ಉತ್ತರವನ್ನು ಹೇಳುವುದಕ್ಕೆ ನಮ್ಮ ಮುಂದೆ ಬರಲಿ. ಬಹುಶಃ ಇವೊತ್ತು ಸಭಾನಾಯಕರು ಬಂದಿಲ್ಲ. ಅವರು ಇಂದು ಕೆಳಗಿನ ಮನೆಯಲ್ಲಿ ಇರಲಿಕ್ಕೂ ಸಾಕು. ಯಾರಾದರು ಉತ್ತರವನ್ನು ಹೇಳಲಿ. ನಮಗೆ ಬೇಸರವಿಲ್ಲ. ಆದರೆ ನಾವು ಹೇಳುವುದನ್ನೇ ಕೇಳುವ ಸಹನೆ ಇಲ್ಲದೆ ನಾವು ಎದ್ದು ಮಾತನಾಡುವಾಗ ನೀವು ಕೂಡ ಮಧ್ಯ ಎದ್ದು ನಾವು ಮಾತನಾಡತಕ್ಕಂಥ ವಿಚಾರವನ್ನೇ ನೀವು ಮೊಟಕು ಮಾಡಬೇಡಿ. You are under issue, not we. ನೀವು ಆ ಸ್ಥಾನದಲ್ಲಿದ್ದೀರಿ. ಆ ಹಿನ್ನೆಲೆಯಲ್ಲಿ ನಾನು ಮಾತನಾಡುತ್ತಿದ್ದೇನೆ. ಇವೊತ್ತು ಬೆಳಿಗ್ಗೆ ಚರ್ಚೆ ಆಗಲಿಲ್ಲ. ಈಗ ನಾಲ್ಕುವರೆ ಗಂಟೆಯಾಯಿತು. ಪುನಃ ಈಗ ಇದರ ಬಗ್ಗೆ ಚರ್ಚೆಯಾಗಬೇಕಲ್ಲ. ಅದರ ಜೊತೆಗೆ ಒಂದು ವಿಚಾರವನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದೇನೆಂದರೆ ಸರ್ಕಾರ ಇದರ ಬಗ್ಗೆ ಒಂದು ಹೇಳಿಕೆಯನ್ನು ಮಾಡಿದೆ. ಆ ಹೇಳಿಕೆಯನ್ನು ಮಾಡಬೇಕೆಂದು ನಾವು ವಿರೋಧ ಪಕ್ಷದವರು ಸರ್ಕಾರವನ್ನು ಕೇಳಿಲ್ಲ. ಆ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಲು ಮಾನ್ಯ ಸಭಾಪತಿಯವರ ಕೊಠಡಿಯಲ್ಲಿ ಚರ್ಚೆ ಮಾಡಿರುವುದು ಸರ್ಕಾರದವರು. ನೀವು ಸದನದಲ್ಲಿ ಇದರ ಬಗ್ಗೆ ಹೇಳಿಕೆ ಮಾಡುತ್ತೇವೆ ಅದಕ್ಕೆ ಅವಕಾಶವನ್ನು ನೀಡಿ ಎಂದು ಸಭಾಪತಿಯವರಲ್ಲಿ ವಿನಂತಿಯನ್ನು ಮಾಡಿಕೊಂಡಿದ್ದೀರಿ ಎನ್ನುವ ವಿಚಾರವನ್ನು ಮಾನ್ಯ ಸಭಾಪತಿಯವರು ಸದನದಲ್ಲಿ ಹೇಳಿದ್ದಾರೆ. ಆಗ ಸಭಾಪತಿಯವರು ನೀವು ಹೇಳಿಕೆಯನ್ನು ಈಗಲೇ ಕೊಡುವುದಾದರೆ ಕೊಡಿ ಅಥವಾ ಪ್ರಶ್ನೋತ್ತರ ವೇಳೆಯಾದ ನಂತರ ತಾವು ಹೇಳಿಕೆಯನ್ನು ಕೊಡಿ ಎಂದು ಮಾನ್ಯ ಸಭಾಪತಿಯವರು ತಮ್ಮನ್ನು ಕೇಳಿದರು. ನೀವು ಆ

ಸಂದರ್ಭದಲ್ಲಿ ಪ್ರಶ್ನೋತ್ತರ ವೇಳೆಗಿಂತ ಮುಂಚೆಯೇ ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಸರ್ಕಾರದ ಪರವಾಗಿ ಹೇಳಿಕೆಯನ್ನು ಸದನದಲ್ಲಿ ಮಾಡಿದರು. ಅವರು ಹೇಳಿಕೆಯನ್ನು ಕೊಟ್ಟಾದ ಮೇಲೆ ನಾನು ಆ ಸಂದರ್ಭದಲ್ಲಿ ನೀವು ಹೇಳಿಕೆಯನ್ನು ನಿಯಮ 324ರಡಿಯಲ್ಲಿ ಕೊಡುತ್ತಿದ್ದೀರಿ, ಸಾರ್ವಜನಿಕ ಮಹತ್ವದ ವಿಚಾರದಲ್ಲಿ ಸರ್ಕಾರ ಒಂದು ಹೇಳಿಕೆಯನ್ನು ಕೊಡಬಯಸಿದರೆ ಒಬ್ಬ ಮಂತ್ರಿಯವರಿಗೆ ಆ ಹೇಳೀಕೆಯನ್ನು ಕೊಡುವ ಅಧಿಕಾರ ಇದೆ. ಆ ಸಂದರ್ಭದಲ್ಲಿ ನಾನು ಹೇಳಿಕೆಯನ್ನು ಕೊಟ್ಟಾದ ಮೇಲೆ ವಿರೋಧ ಪಕ್ಷದವರಿಗೆ ಸರ್ಕಾರದಿಂದ ಮಾಹಿತಿಯನ್ನು ಕೇಳಲಿಕ್ಕೆ ಅಧಿಕಾರ ಇದೆ. ಅದನ್ನು ನಾವು ಸಂಪೂರ್ಣವಾಗಿ ಬಯಸಬಹುದು ಎಂದು ಹೇಳಿದ್ದೇನೆ.

ಇದು ತಾತ್ವಿಕವಾದಂಥ ವಿಚಾರಕ್ಕಿಂತ ಹೆಚ್ಚಿಗೆ ಮಂತ್ರಿಯವರನ್ನು ನೇಮಕ ಮಾಡುವುದು ಯಾರು? ಮಂತ್ರಿಯವರನ್ನು ನೇಮಕ ಮಾಡುವುದು ಮುಖ್ಯಮಂತ್ರಿಗಳು. ಯಾವುದೇ ಒಬ್ಬ ಮಂತ್ರಿಯವರ ರಾಜೀನಾಮೆಯನ್ನು ಪಡೆಯುವಂಥ ಅಧಿಕಾರ ಇರುವುದು ಮುಖ್ಯಮಂತ್ರಿಯವರಿಗೆ ಮಾತ್ರ ಇದೆ. ಮಂತ್ರಿಯವರು ರಾಜೀನಾಮೆಯನ್ನು ಕೊಡುವುದು ಕೂಡ ಮುಖ್ಯಮಂತ್ರಿಯವರಿಗೆ. ಆ ರಾಜೀನಾಮೆಯನ್ನು ಶಿಫಾರಸ್ಸು ಮಾಡಬೇಕೋ, ಬೇಡವೋ ಎನ್ನುವ ಅಧಿಕಾರ ಕೂಡ ಇರತಕ್ಕಂಥದ್ದು ಮಾನ್ಯ ಮುಖ್ಯಮಂತ್ರಿಯವರಿಗೆ. ಮುಖ್ಯಮಂತ್ರಿಗಳೇ ಅವರ ರಾಜಿನಾಮೆಯನ್ನು ಶಿಫಾರಸ್ಸು ಮಾಡಿ ಮಾನ್ಯ ಗೌರವಾನ್ವಿತ ರಾಜ್ಯಪಾರಲರಿಗೆ ಕಳುಹಿಸುತ್ತಾರೆ. ಆದ್ದರಿಂದ ಸಾರ್ವಜನಿಕ ಮಹತ್ವದ ವಿಷಯ ಯಾರಿಗೆ ಸಂಬಂಧಪಟ್ಟದ್ದು? ಅದು ಕೂಡ ಮಾನ್ಯ ಮುಖ್ಯಮಂತ್ರಿಗಳಿಗೆ ಮಾತ್ರ ಸಂಬಂಧಪಟ್ಟದ್ದು. ಆದ್ದರಿಂದ ಹೇಳಿಕೆಯನ್ನು ಮಾನ್ಯ ಮುಖ್ಯಮಂತ್ರಿಗಳು ಕೊಡಬೇಕು. ಆದರೆ ನೀವು ಮುಖ್ಯಮಂತ್ರಿಗಳ ಪರವಾಗಿ ಹೇಳಿಕೆಯನ್ನು ಕೊಡಬಹುದು.

(ಗೊಂದಲ)

**ಶ್ರೀ ಬಿ.ಎನ್. ಬಚ್ಚೇಗೌಡ:-** ಬೆಳಿಗ್ಗೆ ತಾವು ಅದು ಜಂಟಿ ಜವಾಬ್ದಾರಿ ಎಂದು ಹೇಳಿದ್ದೀರಿ.

(ಗೊಂದಲ)

**ಶ್ರೀ ಎಂ.ಸಿ. ನಾಣಯ್ಯ:-** ಮಾನ್ಯ ಸಭಾಪತಿಯವರೆ, I will come to that.

**ಶ್ರೀ ವಿ.ಆರ್. ಸುದರ್ಶನ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಹೇಳಿಕೆ ಮಾಡಬಹುದು. ಆದರೆ ಇದಕ್ಕೆ ಸಹಿಯನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕು.

**ಶ್ರೀ ಎಂ.ಸಿ. ನಾಣಯ್ಯ:-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಕೆಳಗಿನ ಮನೆಯಲ್ಲಿ ಇರಬಹುದು. ಆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯನ್ನು ಮಾನ್ಯ ಸಭಾನಾಯಕರು ಇಲ್ಲಿ ಮಾಡುವ ಜವಾಬ್ದಾರಿಯನ್ನು ಹೊಂದಿದ್ದಾರೆ. ಅವರು ಇಲ್ಲದೆಹೋದರೆ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಇನ್ನಾವುದಾದರು ಸಚಿವರು ಹೇಳಿಕೆಯನ್ನು ಮಾಡಬಹುದು. ಆದರೆ ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರಿಗೆ ಅವರ ಸಹಿಯಲ್ಲಿ ಕೊಡತಕ್ಕಂಥ ಅಧಿಕಾರ ಇಲ್ಲ. ಅವರಿಗೆ ಅಧಿಕಾರ ಇಲ್ಲ ಎಂದು ಖಂಡಿತವಾಗಿ ಹೇಳುತ್ತೇನೆ. The resignations are given to the Chief Minister, acceptance or rejections is by the Chief Minister. How Mr.Kargeri can give the statement before this House?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-** ಮಾನ್ಯ ಸಭಾಪತಿಯವರೇ,

**ಶ್ರೀ ಎಂ.ಸಿ. ನಾಣಯ್ಯ:-** ಮಾನ್ಯ ಸಭಾಪತಿಯವರೆ, ನಾನು ಅದನ್ನು ಹೆಚ್ಚು ಎಳೆದುಕೊಂಡು ಹೋಗುವುದಿಲ್ಲ. ಆ ವಿಷಯವನ್ನು ನಾನು ಅಲ್ಲಿಯೇ ನಿಲ್ಲಿಸುತ್ತೇನೆ. ಇನ್ನು ಮುಂದಕ್ಕೆ ಈ ತರಹದ ಸಂವಿಧಾನಿಕವಾದ ಎಡವಟ್ಟನ್ನು ತಾವು ಮಾಡಬೇಡಿ. ಈ ಸಮಯದಲ್ಲಿ ನಾವು ಚರ್ಚೆಗೆ ಅವಕಾಶವನ್ನು ಕೇಳಿದ್ದೆವು. ತಾವು ಚರ್ಚೆಗೆ ಅವಕಾಶವನ್ನು ಕೊಟ್ಟಿದ್ದೀರಿ.

(ಗೊಂದಲ)

**ಶ್ರೀ ಬಿ.ಎನ್. ಬಚ್ಚೇಗೌಡ:–** ಮಾನ್ಯ ಸಭಾಪತಿಯವರೆ, ತಾವು ಮಾನ್ಯ ಕಾಗೇರಿಯವರಿಗೆ ಅವಕಾಶವನ್ನು ಮಾಡಿಕೊಟ್ಟಾಗ ಅವರು ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಹೇಳಿಕೆಯನ್ನು ಮಾಡಿದ್ದಾರೆ.

(ಗೊಂದಲ)

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೆ, ಅವರು ಹೇಳಿಕೆಯನ್ನು ಮಾಡಬಹುದು ಆದರೆ ಅವರು ಸಹಿ ಮಾಡುವುದಕ್ಕೆ ಆಗುತ್ತದೆಯೇ?

(ಗೊಂದಲ)

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೆ, ನಾನು ಇದನ್ನು ಹೇಳಿಯಾದ ಮೇಲೆ ಈ ಹೇಳಿಕೆಯನ್ನು ಹಿಂದಕ್ಕೆ ಪಡೆಯಿರಿ ಎಂದು ನಾನು ಹೇಳುವುದಿಲ್ಲ. ಆದರೆ ಇದು ನಿಮಗೆ ಒಂದು ಎಚ್ಚರಿಕೆ. ನಿಯಮಗಳಡಿಯಲ್ಲಿ ಸಂವಿಧಾನಕ್ಕನುಗುಣವಾಗಿ ಮಾಡಬೇಕಾಗಿರತಕ್ಕಂಥ ಕೆಲಸವನ್ನು ನಮಗೆ ತಿಳುವಳಿಕೆ ಬಂದಿರತಕ್ಕಂಥ ಹಿನ್ನೆಲೆಯಲ್ಲಿ ತಮಗೆ ಈ ವಿಚಾರವನ್ನು ಹೇಳಿದ್ದೇನೆ. ಆದರೆ ಇದನ್ನು ಹಿಂದಕ್ಕೆ ಪಡೆಯಿರಿ ಎಂದು ನಾವು ವಿರೋಧ ಪಕ್ಷದಿಂದ ಹೇಳಲಿಕ್ಕೆ ಹೋಗಲಿಲ್ಲ. ಆದರೆ ಈಗ ನೀವು ಈ ವಿಷಯವನ್ನು ಚರ್ಚೆಗೆ ಬಿಟ್ಟಾಗಿದೆ. ಆದ್ದರಿಂದ ನಾನು ತಮಗೆ ಕೇಳಿಕೊಳ್ಳುವುದೇನೆಂದರೆ ತಾವು ದಯಮಾಡಿ ಸಂಪೂರ್ಣವಾಗಿ ಚರ್ಚೆಗೆ ಅವಕಾಶವನ್ನು ಕೊಡಿ. ನಾವು ತಮ್ಮಿಂದ ಮಾಹಿತಿಯನ್ನು ಬಯಸುತ್ತೇವೆ. ನಾವು ಎಲ್ಲಾ ರೀತಿಯ ಮಾಹಿತಿಯನ್ನು ಬಯಸಬಹುದು. ಆ ಮಾಹಿತಿ ಏನೆಂದು ನಾವು ಇಲ್ಲಿ ಬಂದು ಕುಳಿತಾದ ಮೇಲೆ ನಿಮ್ಮನ್ನು ಕೇಳುತ್ತೇವೆ. ಉತ್ತರ ಹೇಳುವವರು ಯಾರು ಎಂದು ನನಗೆ ಇನ್ನು ಕೂಡ ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಬರುತ್ತಾರೋ, ಸಭಾನಾಯಕರು ಬರುತ್ತಾರೋ, ಗೋವಿಂದ ಕಾರಜೋಳ್‌ರವರು ಹೇಳುತ್ತಾರೋ, ಬಚ್ಚೇಗೌಡರು ಹೇಳುತ್ತಾರೋ ಯಾವುದು ಗೊತ್ತಿಲ್ಲ. ಏಕೆಂದರೆ ನೀವು ಎಲ್ಲರೂ ಎದ್ದುನಿಂತುಬಿಟ್ಟರೆ ಮುಖ್ಯಮಂತ್ರಿಗಳ ಪರವಾಗಿ

ನಿಮ್ಮ ಹೇಳಿಕೆಯನ್ನು ಮಾಡಿ ಆ ಮುಖ್ಯಮಂತ್ರಿಗಳಿಗೆ ಮುಜಗರ ಮಾಡಿಬಿಡಬೇಡಿ. ಅದರ ಬಗ್ಗೆ ಯಾರಾದರೊಬ್ಬರು ಜವಾಬ್ದಾರಿಕೆಯನ್ನು ವಹಿಸಿಕೊಳ್ಳಬೇಕಾಗುತ್ತದೆ. ಈಗಾಗಲೇ ಅವರಿಗೆ ನಿಮ್ಮಿಂದ ಮುಜಗರ ಆಗಿಬಿಟ್ಟಿದೆ. ಆದ್ದರಿಂದ ತಮ್ಮನ್ನು ವಿನಯಪೂರ್ವಕವಾಗಿ ಕೇಳಿಕೊಳ್ಳುವುದೇನೆಂದರೆ, ಸರ್ಕಾರ ಮುಂದಕ್ಕೆ ಬಂದು ತಮ್ಮ ಕೊಠಡಿಯಲ್ಲಿ ಯಾವ ರೀತಿ ಚರ್ಚೆಗಳನ್ನು ಮಾಡಬೇಕೆಂದು ವಿಧಿ ವಿಧಾನಗಳನ್ನು ಮಾಡಿ ಒಮ್ಮತದಿಂದ ಮಾಡಬೇಕಾದಂಥ ಕೆಲಸವನ್ನು ಸರ್ಕಾರ ಮಾಡಲಿಲ್ಲ. ಆದ್ದರಿಂದ ನಿಮಗೆ ಬಹುಶಃ ಚರ್ಚೆ ಬೇಕಾಗಿಲ್ಲ ಎನ್ನುವಂಥ ಆಪಾದನೆಯನ್ನು ಮಾಡಿದ್ದೇನೆ. ಅದರಲ್ಲಿ ತಪ್ಪೇನು ಇಲ್ಲ. ಮಾನ್ಯ ಸಭಾಪತಿಯವರೆ, ಇದು ನಿಮ್ಮ ಪರಮೋಚ್ಚ ಅಧಿಕಾರ. ದಯಮಾಡಿ ತಾವು ಸರ್ಕಾರ ಮಾಡಿರತಕ್ಕಂಥ ನಿಯಮ 324ರಡಿಯ ಹೇಳಿಕೆಗೆ ವಿರೋಧ ಪಕ್ಷದಲ್ಲಿರತಕ್ಕಂಥ ನಮಗೆಲ್ಲರಿಗೂ ಸರ್ಕಾರದಿಂದ ಈ ಒಂದು ಸಾರ್ವಜನಿಕ ಮಹತ್ತರವಾದಂಥ ವಿಚಾರ, ನನಗೆ ತಿಳಿದ ಮಟ್ಟಿಗೆ ಇದಕ್ಕಿಂತ ಮಹತ್ತರವಾದಂಥ ವಿಚಾರ ಇನ್ನೊಂದಿಲ್ಲ. ನಮ್ಮ ಮುಂದೆ ಇರತಕ್ಕಂಥ ಎಲ್ಲಾ ವಿಚಾರಗಳನ್ನು ಕೂಡ ನಾಳೆಗೆ ಮುಂದೂಡಿ, ನಾಡಿದ್ದಿಗೆ ಮುಂದೂಡಿ, ಬೇಕಾದರೆ ಮುಂದಿನ ಅಧಿವೇಶನದಲ್ಲಿ ತೆಗೆದುಕೊಳ್ಳೋಣ, ಆದರೆ ಇದಕ್ಕಿಂತ ಮಹತ್ತರವಾದಂಥ ವಿಚಾರ ಇನ್ನೊಂದು ಇಲ್ಲದೆ ಇರುವುದರಿಂದ ಸರ್ಕಾರದ ಸ್ನೇಹಿತರು ನಾವು ಹೇಳುವುದನ್ನೆಲ್ಲವನ್ನು ಕೇಳಲಿ. ಮಾನ್ಯ ಕಾರಜೋಳರವರು ಅಥವಾ ಯಾರಿಗೆ ನೀವು ಅಧಿಕಾರವನ್ನು ಕೊಡುತ್ತೀರಿ ಅವರು ಉತ್ತರವನ್ನು ನೀಡಲಿ. ಉತ್ತರ ನಮಗೆ ಸಮಾಧಾನ ಆಗದೆಹೋದರೆ ಮುಂದಕ್ಕೆ ನಾವು ಏನು ತೀರ್ಮಾನವನ್ನು ತೆಗೆದುಕೊಳ್ಳಬೇಕೋ ಆ ತೀರ್ಮಾನವನ್ನು ನಮಗೆ ಬಿಡಿ. ದಯಮಾಡಿ ಅದಕ್ಕಿರತಕ್ಕಂಥ ಅವಕಾಶವನ್ನು ಮಾಡಿಕೊಡಿ ಎಂದು ನಾನು ತಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ.

(ಗೊಂದಲ)

**ಶ್ರೀ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೆ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ. ಇಂದು ಮುಂಜಾನೆ ಕೂಡ ನಾನು ಒಂದು ವಿಚಾರವನ್ನು ಹೇಳಿದ್ದೇನೆ. ಮಾನ್ಯ ನಾಣಯ್ಯನವರು ನಿಯಮ 324ರ ಬಗ್ಗೆ ಹೇಳಿದ್ದಾರೆ.

(ಗೊಂದಲ)

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಪಾಯಿಂಟ್ ಆಫ್ ಆರ್ಡರ್ ಬೇಡ. ಸ್ವಲ್ಪ ಹೊತ್ತು ಸುಮ್ಮನೆ ಕುಳಿತುಕೊಳ್ಳಲಿ.

(ಗೊಂದಲ)

**ಶ್ರೀ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೆ, ಅವರು ಮಾತನಾಡುವಾಗ ನಾನು ಸುಮ್ಮನೆ ಕುಳಿತುಕೊಂಡಿದ್ದೆ. ನಾನು ಮಾತನಾಡುವಾಗ ಅವರು ಕೂಡ ಸುಮ್ಮನೆ ಕುಳಿತುಕೊಳ್ಳಬೇಕು.

(ಗೊಂದಲ)

**ಸಭಾಪತಿಯವರು:-** ಮಾನ್ಯ ನಾಣಯ್ಯನವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಮಾತನಾಡಿರುವಂಥ ವಿಷಯಕ್ಕೆ ಸರ್ಕಾರ ಯಾವ ರೀತಿ ಸ್ಪಂದಿಸಬೇಕೆಂದು ಕೇಳಬೇಕೆಂದು ಅವರು ಹೇಳಿದ್ದಾರೆ. ಅದನ್ನು ಏನು ಮಾಡಬೇಕೆಂದು ನಾನು ಹೇಳುವವನಿದ್ದೇನೆ. ಅದಕ್ಕಿಂತ ಮುಂಚೆ ಸದನದಲ್ಲಿ ಏನಾದರು ಚರ್ಚೆಯಾಗಬೇಕು, ವಾದ, ಪ್ರತಿವಾದ ಆಗಬೇಕು, ಹೇಳಿಕೆ, ಪ್ರತಿ ಹೇಳಿಕೆ ಆಗಬೇಕೆನ್ನುವುದಾದರೆ, ತಾವುಗಳು ಸದನದ ಬಾವಿಯನ್ನು ಬಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಂಡರೆ, ನಾನು ತೀರ್ಮಾನವನ್ನು ಮಾಡಿ ಏನು ಮಾಡಬೇಕೆಂದು ಹೇಳುತ್ತೇನೆ. ನೀವುಗಳು ತಮ್ಮ ಸ್ಥಾನದಲ್ಲಿ ಹೋಗಿ ಕುಳಿತುಕೊಳ್ಳದೇ ತೀರ್ಮಾನ ಮಾಡಿ ಎಂದರೆ ನಾನೇನು ತೀರ್ಮಾನವನ್ನು ಮಾಡಲಿ? ಚರ್ಚೆ ಮಾಡಬೇಕೆಂದು ಹೇಳಿದ್ದೀರಿ. ಚರ್ಚೆ ಮಾಡಬೇಡಿ ಎಂದು ಯಾರು ಹೇಳಿದರು? ಈಗ ನಾನು ಏನು ಮಾಡಬೇಕೆಂದು ನಿಮ್ಮಗಳ ಅಭಿಪ್ರಾಯ ಹೇಳಿ.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ನೀವು ಏನು ಮಾಡಬೇಕೆಂದರೆ, ಈಗ ಮಾನ್ಯ ಸಚಿವರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಏನೆಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ ಅವರು ಮೊದಲೇ ಸ್ಟೇಟ್‌ಮೆಂಟ್ ಮಾಡಿರುವುದು ತಪ್ಪಾಗಿದೆ ಎಂದು ಮಾನ್ಯ ಎಂ.ಸಿ. ನಾಣಯ್ಯನವರು ಹೇಳಿದ್ದಾರೆ. ನಾವು ಕೂಡ ಹೇಳಿದ್ದೇವೆ.

**ಸಭಾಪತಿಯವರು:–** ನಾನು ಅದರ ಬಗ್ಗೆ ತೀರ್ಮಾನವನ್ನು ಹೇಳಿಲ್ಲ.

**ಶ್ರೀಮತಿ ಮೋಟಮ್ಮ:–** ಇದರಲ್ಲಿ ಏನಿದೆ ಎಂದು ಚರ್ಚೆ ಮಾಡಬೇಕಲ್ಲವೇ? ನೀವು ನಮಗೆ ಪ್ರಾರಂಭದಲ್ಲಿಯೇ ಚರ್ಚೆಯನ್ನು ಮಾಡುವುದಕ್ಕೆ ಬಿಡಲಿಲ್ಲ. ಮೊದಲು ನಮಗೆ ಚರ್ಚೆಗೆ ಅವಕಾಶ ಕೊಡಬೇಕಾಗಿತ್ತು. ನಂತರ ಸರ್ಕಾರ ಒಂದು ಸ್ಟೇಟ್‌ಮೆಂಟ್ ಮಾಡಬೇಕಾಗಿತ್ತು. ನಾನು ಪ್ರಾರಂಭದಲ್ಲಿ ಅರ್ಧ ಮಾತನಾಡಿದೆ, ಅರ್ಧದಲ್ಲಿಯೇ ಗಲಾಟೆಯಾಯಿತು.

**ಸಭಾಪತಿಯವರು:–** ಮಾನ್ಯ ಎಂ.ಸಿ. ನಾಣಯ್ಯನವರು ಹೇಳಿದ್ದು ಅವರ ಅಭಿಪ್ರಾಯವೇ ಹೊರತು ಇದು ಪೀಠದಿಂದ ಬಂದಿರುವಂತಹ ತೀರ್ಮಾನವಲ್ಲ. ಆ ಅಭಿಪ್ರಾಯ ಸರಿಯೋ ತಪ್ಪೋ, ಮತ್ತೊಂದೋ ಮಗದೊಂದೋ ಚರ್ಚೆ ಮಾಡುವುದಕ್ಕೆ ಸರ್ಕಾರದ ಪರವಾಗಿ ಹೇಳುವುದಕ್ಕೆ, ಮಾಡುವುದಕ್ಕೆ ನಾನು ಆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಮನಸ್ಸಿನಲ್ಲಿದೆ. ಆದರೆ ನಿವು ವಾತಾವರಣವನ್ನೇ ನಿರ್ಮಾಣ ಮಾಡದಿದ್ದರೆ ನಾನು ಹೇಗೆ ಚರ್ಚೆಯನ್ನು ಮಾಡುವುದಕ್ಕೆ ಅವಕಾಶ ಕೊಡಲಿ? ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ ಚರ್ಚೆ ಮಾಡೋಣ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ಏಕೆ ವಾತಾವರಣ ಸರಿಯಾಗುತ್ತಿಲ್ಲವೆಂದರೆ, ಈ ಹೇಳಿಕೆಯಲ್ಲಿ ಏನಿದೆ ಹೇಳಿ. ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಸಚಿವ ಸಂಪುಟದ ಮೂರು ಜನ ಮಂತ್ರಿಗಳು ರಾಜೀನಾಮೆ ಪತ್ರವನ್ನು ಮುಖ್ಯಮಂತ್ರಿಯವರಿಗೆ ಕೊಟ್ಟರು, ಮಾನ್ಯ ಮುಖ್ಯಮಂತ್ರಿಗಳು ರಾಜ್ಯಪಾಲರಿಗೆ ಕಳುಹಿಸಿಕೊಟ್ಟರು ಎಂದಷ್ಟೇ ಹೇಳಿದ್ದಾರೆ. ಆದರೆ ಯಾವ ಕಾರಣಕ್ಕೆ ರಾಜೀನಾಮೆಯನ್ನು ಕೊಟ್ಟರು ಎಂದು ಹೇಳಬೇಕಲ್ಲವೇ?

**ಸಭಾಪತಿಯವರು:–** ಅದನ್ನು ಕೇಳಿ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ನೆನ್ನೆಯ ದಿವಸ ನಡೆದಂತಹ ದುರ್ಘಟನೆಯೋ, ಏನೆಂದು ಹೇಳಿಯೇ ಇಲ್ಲ. .

**ಸಭಾಪತಿಯವರು:–** ನೀವು ಅದನ್ನು ಕೇಳಬೇಕಲ್ಲವೇ? ಮಾನ್ಯ ಸಚಿವರು ಹೇಳಿಕೆಯನ್ನು ಕೊಟ್ಟಿದ್ದಾರೆ. ಹೇಳಿಕೆ ಮೇಲೆ ನೀವು ಪ್ರಶ್ನೆ ಕೇಳಬೇಕು. ನಿಮಗೆ ಪ್ರಶ್ನೆ ಕೇಳುವ ಅಧಿಕಾರ ಇದೆ. ನೀವು ಪ್ರಶ್ನೆ ಕೇಳಿದಾಗ ಸರ್ಕಾರದವರು ಉತ್ತರವನ್ನು ಕೊಡಬೇಕು. ಎರಡು ಆಗಬೇಕು. ಆದರೆ ನೀವುಗಳೆಲ್ಲರೂ ನಿಮ್ಮ ನಿಮ್ಮ ಸ್ಥಾನಕ್ಕೆ ಹೋಗದೇ ಹೋದರೆ, ನೀವು ಪ್ರಶ್ನೆಯನ್ನು ಕೇಳುವುದಕ್ಕೂ ಬರುವುದಿಲ್ಲ. ಅವರು ಉತ್ತರವನ್ನು ಹೇಳುವುದಕ್ಕೂ ಕೂಡ ಬರುವುದಿಲ್ಲ, ಎರಡೂ ಆಗುವುದಿಲ್ಲ. ನೀವುಗಳೆಲ್ಲರೂ ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗುವ ವರೆಗೆ ಬೇರೆ ವಿಷಯದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ನೀವುಗಳು ನಿಮ್ಮ ಸ್ಥಾನಕ್ಕೆ ಹೋದರೆ ಏನು ಬೇಕಾದರು ಚರ್ಚೆಯನ್ನು ಮಾಡೋಣ. ನಾನು ಸಾಕಷ್ಟು ವಿಷಯಗಳಿಗೆ allow ಮಾಡುತ್ತೇನೆ. ದಯಮಾಡಿ ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ.

**Sri B.N. BACHE GOWDA (Hon'ble Minister for Labour):-** Let the House be in order.

**ಸಭಾಪತಿಯವರು:–** ಹೌದು. ಮೊದಲು ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಲಿ. ಆಮೇಲೆ ತೀರ್ಮಾನ ಮಾಡೋಣ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ನಾವು ನಿಮ್ಮ ಮಾತಿಗೆ ಗೌರವವನ್ನು ಕೊಟ್ಟು ಕುಳಿತುಕೊಳ್ಳುತ್ತೇವೆ. ಸದಸ್ಯರುಗಳು ತಮ್ಮ ಸ್ಥಾನಕ್ಕೆ ಬಂದು ಕುಳಿತುಕೊಂಡ ಮೇಲೆ ನೀವು ಅವಕಾಶ ಕೊಡದೇ, ಆಡಳಿತ ಪಕ್ಷದ ಸದಸ್ಯರುಗಳೆಲ್ಲರೂ ಎದ್ದು ಉತ್ಸವವನ್ನು ಮಾಡುತ್ತಾರೆ. ಹೊರಗಡೆ ರಾಜ್ಯದ ಎಲ್ಲೆಡೆ ಉತ್ಸವಗಳು ಮತ್ತೆ ಇಲ್ಲಿ ಇನ್ನೊಂದು ರೀತಿಯಲ್ಲಿ ಉತ್ಸವವನ್ನು ನಡೆಸುವುದಕ್ಕೆ ನಾವು ಒಪ್ಪುವುದಿಲ್ಲ. ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇವೆಂದರೆ ಮಾತ್ರ ಬರುತ್ತೇವೆ.

**ಸಭಾಪತಿಯವರು:–** ನಾನು ಭರವಸೆಯನ್ನು ಕೊಡುವುದಕ್ಕೆ ಬರುವುದಿಲ್ಲ. ನನ್ನ ಕೆಲಸ ಬರಿ ಸದನವನ್ನು ನಡೆಸುವುದಷ್ಟೇ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಎಂ.ಸಿ. ನಾಣಯ್ಯನವರು ಅವರ ಅಪಾರವಾದಂತಹ ಅನುಭವ ಮತ್ತು ಅವರು ವಿರೋಧ ಪಕ್ಷದ ನಾಯಕರಾಗಿ, ಸಭಾ ನಾಯಕರಾಗಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾಗಿ ಕೆಲಸ ಮಾಡಿದ್ದಾರೆ. ಈ ಎಲ್ಲಾ ಅನುಭವಗಳ ಮೂಲಕ ಇಂತಹ ಸಮಸ್ಯೆ ಉದ್ಭವವಾದಾಗ ಏನು ಮಾಡಬೇಕು ಎನ್ನುವುದರ ಬಗ್ಗೆ ತಮಗೆ ವಿನಂತಿ ಮಾಡಿಕೊಂಡಿದ್ದಾರೆ. ಈಗ ಇಲ್ಲಿ ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಕೊಟ್ಟಿರುವಂತಹ ಹೇಳಿಕೆ ಇದೆ. ಅದರಲ್ಲಿ ಯಾವ ಕಾರಣಕ್ಕೆ ರಾಜೀನಾಮೆಯನ್ನು ಕೊಟ್ಟಿದ್ದಾರೆಂದು ಇದರಲ್ಲಿ ಇಲ್ಲ. ಸರ್ಕಾರದ ಹೇಳಿಕೆಯನ್ನು ನೋಡಿದರೆ ಪಾಪ ಮೂರು ಮಂದಿ ಏಕೆ ರಾಜೀನಾಮೆಯನ್ನು ಕೊಟ್ಟರು, ಕಾರಣವೇನು? ಸುಮ್ಮನೆ ರಾಜೀನಾಮೆಯನ್ನು ಕೊಟ್ಟಿದ್ದಾರೆಯೇ? ಈ ರೀತಿಯಾಗಿ ಉತ್ತರವನ್ನು ಕೊಟ್ಟರೆ ಯಾರು ಒಪ್ಪುತ್ತಾರೆ. ಅದಕ್ಕೋಸ್ಕರವಾಗಿ ಇದರ ಬಗ್ಗೆ ಚರ್ಚೆಗೆ ಅವಕಾಶ ಕೊಡಿ. ಈಗಾಗಲೇ ನಮ್ಮ ವಿರೋಧ ಪಕ್ಷದ ನಾಯಕರಾದ ಶ್ರೀಮತಿ ಮೋಟಮ್ಮನವರು ಮಾತನಾಡಿದ್ದಾರೆ. ದಯಮಾಡಿ ಚರ್ಚೆಗೆ ಅವಕಾಶ ಕೊಡಿ.

**ಸಭಾಪತಿಯವರು:–** ನಿಮ್ಮ ನಿಮ್ಮ ಸ್ಥಾನಕ್ಕೆ ಮೊದಲು ಬನ್ನಿ.

**ಶ್ರೀಮತಿ ಮೋಟಮ್ಮ:–** ಮೊದಲು ಚರ್ಚೆಗೆ ಅವಕಾಶವನ್ನು ಕೊಡುತ್ತೇನೆಂದು ಹೇಳಿ.

**ಸಭಾಪತಿಯವರು:–** ಕೊಡುತ್ತೇನೆ ಅಥವಾ ಇಲ್ಲ ಎಂದು ಎರಡು ಹೇಳುವುದಿಲ್ಲ. ಮೊದಲು ನಿಮ್ಮ ನಿಮ್ಮ ಸ್ಥಾನಗಳಿಗೆ ಬನ್ನಿ. ದಯಮಾಡಿ ನಿಮ್ಮ ನಿಮ್ಮ ಸ್ಥಾನಕ್ಕೆ ಬನ್ನಿ.

**(ಈ ಹಂತದಲ್ಲಿ ಸದನದಲ್ಲಿದ್ದ ಎಲ್ಲಾ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ಬಂದು ಕುಳಿತುಕೊಂಡರು)**

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೆ, ಹಿರಿಯ ಸದಸ್ಯರಾದಂತಹ ಶ್ರೀ ಎಂ.ಸಿ. ನಾಣಯ್ಯನವರು ಮತ್ತು ಶ್ರೀ ವೀರಣ್ಣ ಮತ್ತಿಕಟ್ಟಿಯವರು ಇಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಹೇಳಿಕೆ ಕೊಟ್ಟಿರುವುದರ ಬಗ್ಗೆ ಅವರದೇ ಆದಂತಹ ಅಭಿಪ್ರಾಯವನ್ನು ಈ ಸದನದಲ್ಲಿ ಪ್ರಸ್ತಾಪಿಸಿದ್ದಾರೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೆ, ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಬಹಳ ವರ್ಷಗಳ ಕಾಲ ವಿಧಾನಸಭೆ ಸದಸ್ಯರಾಗಿ ಕೆಲಸವನ್ನು ಮಾಡಿದ್ದಾರೆ. ನೀವು ಈ ರೀತಿಯಾಗಿ ಹೇಳಿಕೆಯನ್ನು ಕೊಟ್ಟರೆ ಏನಂತಾರೆ?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೆ, ದಯಮಾಡಿ ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ನಾನು ಹೇಳುವುದನ್ನು ಕೇಳಬೇಕು. ಮಾನ್ಯ ಎಂ.ಸಿ. ನಾಣಯ್ಯನವರು ಮತ್ತು ಮಾನ್ಯ ಮತ್ತಿಕಟ್ಟಿಯವರು ಮಾತನಾಡಿ ಮುಗಿಸಿದ ಮೇಲೆ ನಾನು ಹೇಳುವುದಕ್ಕೆ ನಿಂತಿದ್ದೇನೆ. ಬೆಳಿಗ್ಗಿನಿಂದ ಏನಾಯಿತು ಎನ್ನುವುದಕ್ಕೆ ನಾವುಗಳೆಲ್ಲರೂ ಸಾಕ್ಷಿ ಇದ್ದೇವೆ.

**ಶ್ರೀ ವೀರಣ್ಣ ಮತ್ತಿ:–** ಮಾನ್ಯ ಸಭಾಪತಿಯವರೆ, ನೆನ್ನೆಯ ದಿವಸಕ್ಕೂ ಸಾಕ್ಷಿ ಇದ್ದಾರೆಯೇ?

**ಸಭಾಪತಿಯವರು:–** ನೆನ್ನೆಯ ವಿಷಯ ಎಲ್ಲಾ ಮಾತನಾಡುವ ಹಾಗಿಲ್ಲ. ಇವತ್ತಿನದಷ್ಟೇ ಮಾತನಾಡಬೇಕು.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೆ, ಇವತ್ತು ಬೆಳಿಗ್ಗೆ ತಮ್ಮ ಕೊಠಡಿಗೆ ಬಂದು ಘಟನೆಗಳ ಬಗ್ಗೆ ಹೇಳಿಕೆಗಳನ್ನು ಕೊಡುವುದಕ್ಕೆ ಸಿದ್ಧನಿದ್ದೇನೆ. ಏಕೆಂದರೆ ಈ ಸದನದಲ್ಲಿ ಆ ಸದನದ ಸದ್ಯರಾಗಿದ್ದವರು ಸಚಿವರಾಗಿದ್ದವರು ರಾಜೀನಾಮೆ ಕೊಟ್ಟಿರುವಂತಹ ವಿಷಯವನ್ನು ತಿಳಿಸಬೇಕಾದುದ್ದು ಸರ್ಕಾರದ ಒಂದು ಜವಾಬ್ದಾರಿ. ಈ ಜವಾಬ್ದಾರಿಯನ್ನು ನಿರ್ವಹಿಸುವುದಕ್ಕೆ suo moto ಒಂದು ಹೇಳಿಕೆಯನ್ನು

ಸರ್ಕಾರದ ಪರವಾಗಿ ಸದನದಲ್ಲಿ ಕೊಡುತ್ತೇನೆಂದು ವಿನಂತಿಸಿಕೊಂಡಾಗ ತಾವು ಮೊದಲು ಪ್ರಶ್ನೋತ್ತರದ ನಂತರ ಕೊಡಿ ಎಂದು ಹೇಳಲಾಗಿತ್ತು. ಸದನದ ಒಟ್ಟಾರೆ ಚರ್ಚೆಯ ನಂತರದಲ್ಲಿ ಪ್ರಶ್ನೋತ್ತರಕ್ಕಿಂತ ಮೊದಲೇ ಕೊಡುವಂತಹ ಸಂದರ್ಭ ಬಂತು. ತಾವು ಹೇಳಿಕೆಯನ್ನು ಕೊಡಿ ಎಂದು ಹೇಳಿ ಅವಕಾಶ ಕೊಟ್ಟಿದ್ದರಿಂದ ಕೊಟ್ಟಿದ್ದೇನೆ. ನಾನು ಮಾತಿನಲ್ಲಿ ಹೇಳಿರುವಂತಹ ಆ ಹೇಳಿಕೆಯನ್ನು ಎಲ್ಲಾ ಸದಸ್ಯರುಗಳು ಒಪ್ಪಿಕೊಂಡಿದ್ದಾರೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೆ, ನಾವು ಒಪ್ಪಿಕೊಂಡಿದ್ದರೆ ಮತ್ತೇಕೆ ಕೇಳುತ್ತಿದ್ದೋ?

**ಶ್ರೀ ವಿಶ್ವೇಶ್ವರ ಹೆಗ್ಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೆ, ನಾನು ಏನು ಹೇಳಿಕೆಯನ್ನು ಕೊಟ್ಟಿದ್ದೇನೋ ಆ ಹೇಳಿಕೆಯನ್ನು ಎಲ್ಲರೂ ಒಪ್ಪಿಕೊಂಡು ಅದರ ಒಂದು ಪ್ರತಿ ಬೇಕೆಂದು ಕೇಳಿದರು. ಅದಕ್ಕೆ ನೀವುಗಳೆಲ್ಲರೂ ಸಾಕ್ಷಿ ಇದ್ದೀರಿ. ಆ ಪ್ರತಿಯನ್ನು ಕೂಡ ಕೊಡಲಾಯಿತು. ಅದರಲ್ಲಿ ಸ್ಪಷ್ಟವಾಗಿ ನಾನೇನು ಹೇಳಿದ್ದೇನೆ. ಈ ಮೂವರು ಸಚಿವರು ಮಾನ್ಯ ಮುಖ್ಯಮಂತ್ರಿಗಳಿಗೆ ರಾಜೀನಾಮೆಯನ್ನು ಸಲ್ಲಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಸಚಿವರು ಕೊಟ್ಟಂತಹ ರಾಜೀನಾಮೆಯನ್ನು ಅಂಗೀಕರಿಸಬೇಕೆಂದು ಮಾನ್ಯ ರಾಜ್ಯಪಾಲರಿಗೆ ಕಳುಹಿಸಿದ್ದಾರೆ. ರಾಜ್ಯಪಾಲರು ಅದನ್ನು ಅಂಗೀಕರಿಸಿದ್ದಾರೆಂದು ಈ ಸದನಕ್ಕೆ ತಿಳಿಸುತ್ತೇನೆಂದು ಹೇಳಿದ್ದೇನೆ. ಅಂದರೆ ನಾನು ನಮ್ಮ ಮೂರು ಜನ ಸಚಿವರುಗಳು ಅವರು ರಾಜೀನಾಮೆಯನ್ನು ಕೊಡುವವರೆಗೂ ಈ ಸದನಕ್ಕೂ ಜವಾಬ್ದಾರರು. ಆದರೆ ಅವರು ರಾಜೀನಾಮೆ ಕೊಟ್ಟಿರುವಂತಹ ವಿಷಯವನ್ನು ಈ ಸದನದ ಗಮನಕ್ಕೆ ತರಬೇಕಾದದ್ದು ಸರ್ಕಾರದ ಜವಾಬ್ದಾರಿಯುತವಾದಂತಹ ಕರ್ತವ್ಯ. ಹಾಗಾಗಿ ನಾನು ಸರ್ಕಾರದ ಪರವಾಗಿ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮತ್ತು ಮಾನ್ಯ ಸಭಾ ನಾಯಕರ ಪರವಾಗಿ ಅವರೆಲ್ಲರ ಅನುಮತಿಯನ್ನು ಪಡೆದುಕೊಂಡು ನಾನು ಇಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದೇನೆ. ತಾವುಗಳೆಲ್ಲರೂ ಕೇಳಿದ್ದೀರಿ. ಲಿಖಿತವಾಗಿ ಬೇಕೆಂದು ಕೇಳಿದ್ದರಿಂದ ಲಿಖಿತವಾದುದ್ದನ್ನು ಎಲ್ಲಾ ಸದಸ್ಯರುಗಳಿಗೂ ಕಳುಹಿಸಿ ಕೊಟ್ಟಿದ್ದೇನೆ. ಇಲ್ಲಿ

ವಿಷಯ ಇರುವುದು ಇವತ್ತು ವಿರೋಧ ಪಕ್ಷದ ಸದಸ್ಯರುಗಳು ಸದನದಲ್ಲಿ ಧರಣಿ ಮಾಡುತ್ತಿದ್ದನ್ನು ಬಿಟ್ಟು ವಾಪಸ್ಸು ತಮ್ಮ ತಮ್ಮ ಸ್ಥಾನಕ್ಕೆ ಬಂದು ಕುಳಿತು ಸದನವನ್ನು ನಡೆಸುವುದಕ್ಕೆ ಸಹಕಾರಿಸುತ್ತಿರುವುದಕ್ಕೆ ನಾನು ಅವರೆಲ್ಲರನ್ನೂ ಅಭಿನಂದಿಸುತ್ತೇನೆ. ತಾವು ಮೊದಲು ಪ್ರಶ್ನೋತ್ತರವನ್ನು ನಡೆಸಿಕೊಡಬೇಕು. ನಂತರದಲ್ಲಿ ಅವರು ಯಾವ ರೀತಿಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡಬೇಕೆಂದು ಮನವಿಯನ್ನು ಕೊಡುತ್ತಾರೆಯೋ ನಿಯಮಗಳ ಅಡಿಯಲ್ಲಿ ತಾವು ಯಾವ ರೀತಿಯಾಗಿ ಅವಕಾಶ ಮಾಡಿಕೊಡುತ್ತಿರೋ ಅದನ್ನು ಚರ್ಚಿಸಬಹುದು. ನನ್ನ ಪ್ರಕಾರ ತಾವು ಹಿರಿಯರಿದ್ದೀರಿ. ಮಾನ್ಯ ವೀರಣ್ಣ ಮತ್ತಿಕಟ್ಟಿಯವರು, ಶ್ರೀ ಎಂ.ಸಿ. ನಾಣಯ್ಯನವರು, ಶ್ರೀ ವಿ.ಆರ್. ಸುದರ್ಶನ್ ಹಾಗೂ ಇನ್ನು ಅನೇಕ ಹಿರಿಯ ಸದಸ್ಯರುಗಳಾಗಿದ್ದಾರೆ. ಆ ಸಚಿವರುಗಳು ಸಚಿವ ಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟ ನಂತರ ನನ್ನ ತಿಳುವಳಿಕೆ ಪ್ರಕಾರವಾಗಿ ಆ ವಿಚಾರಗಳನ್ನು ಈ ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶಗಳೇ ಇಲ್ಲ. ಅವರುಗಳು ಈ ಮನೆಯ ಸದಸ್ಯರಾಗಿರುವುದಿಲ್ಲ.

(ಗೊಂದಲ)

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ಆ ಮೂರು ಸಚಿವರುಗಳು ಸರ್ಕಾರ ಸರಿ ಇಲ್ಲವೆಂದು ರಾಜೀನಾಮೆಯನ್ನು ಕೊಟ್ಟಿದ್ದಾರೆಯೇ? ಅಥವಾ ಬೇರೆ ಯಾವ ಕಾರಣದಿಂದ ರಾಜೀನಾಮೆಯನ್ನು ಕೊಟ್ಟಿದ್ದಾರೆ ಎನ್ನುವುದು ಗೊತ್ತಾಗಬೇಕಲ್ಲವೇ?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೆ, ಈಗ ಅವರುಗಳು ವಿಧಾಸಭೆ ಸದಸ್ಯರಾಗಿರುವುದರಿಂದ ಈ ವಿಷಯದ ಬಗ್ಗೆ ಏನೆಲ್ಲಾ ನಿರ್ಣಯಗಳನ್ನು ತೆಗೆದುಕೊಳ್ಳಬೇಕೋ ಅದನ್ನು ಆ ಮನೆಯ ಸಭಾಧ್ಯಕ್ಷರು ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಬದ್ದರಿದ್ದಾರೆ. ಈ ವಿಷಯವನ್ನು ಇಲ್ಲಿ ಚರ್ಚಿಸುವುದಕ್ಕೆ ನಿಯಮಾವಳಿಗಳಾಗಲಿ, ನಾವು ಈ ಹಿಂದೆ ಯಾವ ರೀತಿಯಾಗಿ ಸದನದಲ್ಲಿ ಕಾರ್ಯಕಲಾಪಗಳನ್ನು ನಡೆಸಿಕೊಂಡು ಬಂದಿದ್ದೇವೆಯೋ ಆ ಹಿನ್ನೆಲೆಯಲ್ಲಿಯೂ ಅವಕಾಶಗಳಿಲ್ಲವೆಂದು ನಾನು ಭಾವಿಸಿಕೊಂಡಿದ್ದೇನೆ. ತಾವು ಈಗ ಪ್ರಶ್ನೋತ್ತರವನ್ನು ನಡೆಸಿಕೊಡಬೇಕು.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೆ, ಮೂವರು ಸಚಿವರು ಕೊಟ್ಟಿರುವಂತಹ ರಾಜೀನಾಮೆ ಬಗ್ಗೆ ನಮಗೆ ಚರ್ಚೆ ಮಾಡಲು ಅವಕಾಶ ಕೊಡುತ್ತೀರೋ ಇಲ್ಲವೋ ಎನ್ನುವುದನ್ನು ದಯಮಾಡಿ ಹೇಳಿಬಿಡಿ. ಚರ್ಚೆಗೆ ಅವಕಾಶ ಕೊಡುತ್ತೇನೆ ಎನ್ನುವಂತಹ ವಿಚಾರವನನು ವ್ಯಕ್ತ ಮಾಡಿದರೆ ಈ ಸದನವನ್ನು ಪ್ರಾರಂಭ ಮಾಡೋಣ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೆ, point of order.

**ಸಭಾಪತಿಯವರು:-** ಮಾನ್ಯ ಗಣೇಶ್ ಕಾರ್ಣಿಕ್‌ರವರು ಬೆಳಿಗ್ಗೆಯಿಂದ point of order ಎಂದು ಹೇಳುತ್ತಿದ್ದಾರೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೆ, ನಿಯಮ 324 ರಲ್ಲಿ ಚರ್ಚೆಗೆ ಅವಕಾಶ ಇಲ್ಲ. ಕ್ಲಾರಿಫಿಕೇಷನ್‌ಗೆ ಮಾತ್ರ ಅವಕಾಶ ಇದೆ. ಆದುದರಿಂದ ಕ್ಲಾರಿಫಿಕೇಷನ್ ಇದ್ದರೆ ಕೇಳಲಿ.

**ಸಭಾಪತಿಯವರು:-** ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ಆರ್ಮಿಯಲ್ಲಿ ತರಬೇತಿಯನ್ನು ಪಡೆದುಕೊಂಡು ಬಂದವರು. ಸುಲಭಕ್ಕೆ ಆ ಬಡಪಾಯಿ ಒಪ್ಪುವುದಿಲ್ಲ.

(ಗೊಂದಲ)

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಸನ್ಮಾನ್ಯ ಸಭಾಪತಿಯವರೇ, ಆರ್ಮಿಯಲ್ಲಿ ಟ್ರೈನಿಂಗ್ ಆಗಿದ್ದರೆ 'go back' ಎಂದರೆ ಹೋಗಿಬಿಡುತ್ತಾರೆ. ಆರ್ಮಿಯಲ್ಲಿ 'attack' ಅಂದರೆ attack ಮಾಡುತ್ತಾರೆ, 'go back' ಎಂದರೆ ಹೋಗಿಬಿಡುತ್ತಾರೆ.

**ಸಭಾಪತಿಯವರು:-** ನೀವು ಆ ರೀತಿ ಹೇಳಿದರೂ ಅವರು ಸಿಟ್ಟಾಗುವುದಿಲ್ಲ.

**SRI VEERANNA MATTIKATTI:-** You go back.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಮೂವರು ಸಚಿವರು ತಮ್ಮ ಸ್ಥಾನಗಳಿಗೆ ರಾಜಿನಾಮೆ ಕೊಟ್ಟಿರುವುದಾಗಿ ಸರ್ಕಾರ ತಿಳಿಸಿದೆ. ಅವರ ರಾಜಿನಾಮೆಗೆ ಏನು ಕಾರಣ, ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಕಲ್ಪಿಸಿಕೊಡಬೇಕೆಂದು ನಾವು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತಿದ್ದೇವೆ.

(ಗೊಂದಲ)

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ನಿಯಮ 324 ರ ಪ್ರಕಾರ ಈ ವಿಷಯದಲ್ಲಿ ಚರ್ಚೆಗೆ ಅವಕಾಶವಿಲ್ಲ. ಸರ್ಕಾರದ ಪರವಾಗಿ ಹೇಳಿಕೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ಆ ವಿಷಯದಲ್ಲಿ ಮತ್ತೆ ಚರ್ಚೆಗೆ ಅವಕಾಶವಿಲ್ಲ. ಆದ್ದರಿಂದ ದಯಮಾಡಿ ತಾವು ಆ ಬಗ್ಗೆ ರೂಲಿಂಗ್ ಕೊಡಬೇಕು. ಅವರು ಬೇಕಾದರೆ ಸ್ಪಷ್ಟೀಕರಣವನ್ನು ಕೇಳಬಹುದು.

**ಸಭಾಪತಿಯವರು:-** ಈಗ ಸಮಸ್ಯೆ ಏನಿಲ್ಲ, ಸಚಿವರು ರಾಜಿನಾಮೆ ಕೊಟ್ಟಿರುವ ಬಗ್ಗೆ ಅವರು ಸರ್ಕಾರದ ಪರವಾಗಿ ಹೇಳಿಕೆ ಕೊಟ್ಟಿದ್ದಾರೆ. ಸಚಿವರು ಮಾಡಿರುವಂತಹ ಹೇಳಿಕೆಯ ಪ್ರತಿಯನ್ನು ಎಲ್ಲರಿಗೂ ಒದಗಿಸಬೇಕೆಂಬುದಾಗಿ ಕೇಳಿದ್ದರಿಂದ ಅದನ್ನು ಅವರು ಎಲ್ಲರಿಗೂ ಕೊಟ್ಟಿದ್ದಾರೆ. ಈಗ ಒಂದು ಪ್ರಶ್ನೆ, ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಸುದರ್ಶನ್‌ರವರು ಬೆಳಿಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ ಆ ಸಚಿವರುಗಳು ರಾಜೀನಾಮೆಯನ್ನೇಕೆ ಕೊಟ್ಟಿದ್ದಾರೆ ಎಂಬುದನ್ನು ಸರ್ಕಾರ ತಿಳಿಸಬೇಕೆನ್ನುವಂತಹ ಒಂದು ಮಾತನ್ನು ಹೇಳಿದ್ದರು. ಸರ್ಕಾರದ ಪರವಾಗಿ ಅದನ್ನು ಹೇಳುವುದಕ್ಕೆ ತಾವು ತಯಾರಿದ್ದರೆ ಹೇಳಬಹುದು. ಅದು ಸರ್ಕಾರಕ್ಕೆ ಬಿಟ್ಟಂತಹ ವಿಚಾರ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-** ಮಾನ್ಯ ಸಭಾಪತಿಯವರೇ, ಇಲ್ಲಿ ಎರಡು ವಿಷಯಗಳಿವೆ. ಅವರು ಸಚಿವ ಸ್ಥಾನಕ್ಕೆ ರಾಜಿನಾಮೆ ಕೊಟ್ಟಿರುವಂತಹ ವಿಷಯವನ್ನು ಈ ಸದನದ ಗಮನಕ್ಕೆ ತಂದ ನಂತರದಲ್ಲಿ ಆ ಕುರಿತಂತೆ ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ ಎನ್ನುವುದೇ ಸರ್ಕಾರದ ಸ್ಪಷ್ಟವಾದಂತಹ ನಿಲುವು. ಅವರು ಆ ಸದನದ ಸದಸ್ಯರು, ಆ ಮನೆಯ ಸದಸ್ಯರ ಬಗ್ಗೆ ನಾವು ಇಲ್ಲಿ ಹೇಗೆ ಚರ್ಚೆ ಮಾಡುವುದಕ್ಕಾಗುತ್ತದೆ ? ಅವರ ಬಗ್ಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ. ಆ ಸದನದಲ್ಲಿ ಸಭಾಧ್ಯಕ್ಷರೇನಿದ್ದಾರೆ ಅವರು ಆ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತಾರೆ. ಅಲ್ಲಿ ನಿಮ್ಮ ಪಕ್ಷದ ಸದಸ್ಯರೇನಿದ್ದಾರೆ ಅವರು ಚರ್ಚೆ ಮಾಡಲಿ. ಹಾಗಾಗಿ ಆ ವಿಷಯವನ್ನು ಇಲ್ಲಿ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಅವಕಾಶವಾಗುವುದಿಲ್ಲ.

(ಗೊಂದಲ)

**Sri B.N. BACHE GOWDA (Hon'ble Minister for Labour):-** The matter is seized in that House. It is before the Chair in the Legislative Assembly.

(Interruptions)

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾವು ಅವರಿಗೆ ಹೇಳಿದ್ದೇವೆ. ಅವರಿಗೆ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ ಎಂದು ಅವರು suo moto ಒಂದು ನಿರ್ಣಯವನ್ನು ಹೇಳುತ್ತಾರೆ.

(ಗೊಂದಲ)

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೇ, ಇದು ಬಂಡತನ, ಇವರು ಬಹಳ ಬಂಡರಿದ್ದಾರೆ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಸರ್ಕಾರದ ಈ ಮೊಂಡುತನ ಸರಿಯಲ್ಲ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ಅದು ಮೊಂಡುತನವಲ್ಲ ಬಂಡತನ.

(ಗೊಂದಲ)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೇ, ಆ ಸಚಿವರು ಕೆಳಮನೆಯ ಸದಸ್ಯರಾಗಿರುವುದರಿಂದ ಅಲ್ಲಿರುವಂತಹ ಸದಸ್ಯರು ಚರ್ಚೆ ಮಾಡುತ್ತಾರೆ. ಕೆಳಮನೆಯ ಸದಸ್ಯರ ವಿಚಾರದಲ್ಲಿ ಈ ಸದನದ ಸದಸ್ಯರು ಚರ್ಚೆ ಮಾಡಲು ಅವಕಾಶ ಕೊಡಬೇಕೆಂದು ಕೇಳುವುದು ಎಷ್ಟರಮಟ್ಟಿಗೆ ಸರಿಯಾಗುತ್ತದೆ ?

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಆ ಸಚಿವರೇಕೆ ರಾಜೀನಾಮೆ ಕೊಟ್ಟಿದ್ದಾರೆ, ಅವರು ರಾಜೀನಾಮೆ ಕೊಡಲು ಕಾರಣವೇನೆಂಬುದನ್ನು ಹೇಳುವುದಿಲ್ಲ, ಅದನ್ನು ಈ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ ಎಂದರೆ ಹೇಗೆ ?

(ಗೊಂದಲ)

**ಸಭಾಪತಿಯವರು:–** ಈಗ ಒಂದು ಕೆಲಸ ಮಾಡೋಣ. ಮಾನ್ಯ ಮುಖ್ಯಮಂತ್ರಿಯವರಿಗೆ ಈ ಸದನಕ್ಕೆ ಹಾಜರಾಗುವಂತೆ ನಾನು ಹೇಳಿಕಳುಹಿಸುತ್ತೇನೆ.

(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು)

(ಗೊಂದಲ)

**ಸಭಾಪತಿಯವರು:–** ಸದನದಲ್ಲಿ ಈ ರೀತಿ ಘೋಷಣೆಗಳನ್ನು ಕೂಗುವುದು ಹೇಗೆ ಸರಿಯಾಗುತ್ತದೆ ? ನಾನು ಹೇಳುವುದನ್ನು ಕೇಳಿ, ಈ ಸದನಕ್ಕೆ ಮುಖ್ಯಮಂತ್ರಿಗಳು ಬಂದರೆ ಒಳ್ಳೆಯದು ಎಂದು ತಾವು ಹೇಳಿರುವಂತಹ ಹಿನ್ನೆಲೆಯಲ್ಲಿ ನಾನು ಮುಖ್ಯಮಂತ್ರಿಗಳಿಗೆ ಹೇಳಿಕಳುಹಿಸುತ್ತೇನೆ.

ಸಭಾನಾಯಕರು ಕೆಳಮನೆಯಲ್ಲಿದ್ದಾರೆಯೋ ಏನೋ ನಾನು ವಿಚಾರಿಸುವುದಕ್ಕೆ ಹೋಗಿಲ್ಲ. ಮುಖ್ಯಮಂತ್ರಿಯವರಿಗೆ ನಾನು ಸುದ್ದಿ ಕಳುಹಿಸಿದ್ದೇನೆ. ನಾನು ಸದನದಕ್ಕೆ ಬರುತ್ತೇನೆ ಎನ್ನುವಂತಹ ಮಾಹಿತಿಯನ್ನು ಅವರು ನನಗೆ ಕೊಟಿದ್ದಾರೆ. ಹಾಗಾಗಿ ಮುಖ್ಯಮಂತ್ರಿಯವರು ಈ ಸದನಕ್ಕೆ ಬರುತ್ತಾರೆ. ಅಲ್ಲಿಯವರೆಗೆ ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಬೇರೆ ಯಾವುದಾದರೂ ವಿಷಯವನ್ನು ಚರ್ಚೆ ಮಾಡೋಣ.

(ಗೊಂದಲ)

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ದಯವಿಟ್ಟು ಕೇಳಿ. ಇಷ್ಟು ಬಂಡತನ ಎಂದು ಹೇಳಿದರೆ ಕೋಮುವಾದವನ್ನೂ ಸಮರ್ಥನೆ ಮಾಡಿಕೊಳ್ಳುವುದು, ಕಾಮವಾದವನ್ನೂ ಸಮರ್ಥನೆ ಮಾಡಿಕೊಳ್ಳುವುದು, ಈ ರೀತಿ ನಡೆದುಕೊಳ್ಳುವುದರಲ್ಲಿ ಅರ್ಥವಿದೆಯೇ ?

(ಗೊಂದಲ)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೇ, ತಾವು ಪ್ರಶ್ನೋತ್ತರಗಳನ್ನು ನಡೆಸಿ. ಪ್ರಶ್ನೋತ್ತರ ಕಲಾಪದಲ್ಲಿ ಭಾಗವಹಿಸಲು ನಾವು ಸಿದ್ಧರಿದ್ದೇವೆ.

(ಗೊಂದಲ)

(ಈ ಹಂತದಲ್ಲಿ ವಿರೋಧ ಪಕ್ಷಗಳ ಸದಸ್ಯರು ಮತ್ತೊಮ್ಮೆ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು)

(ಗೊಂದಲ)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೇ, ತಾವು ಪ್ರಶ್ನೋತ್ತರ ಕಲಾಪವನ್ನು ನಡೆಸಿಕೊಡಬೇಕಾಗಿ ವಿನಂತಿಸುತ್ತೇವೆ.

(ಗೊಂದಲ)

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ನಮಗೆ ನ್ಯಾಯ ಬೇಕು.

(ಈ ಹಂತದಲ್ಲಿ ವಿರೋಧ ಪಕ್ಷಗಳ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಲೇ ಇದ್ದರು)

(ಗೊಂದಲ)

**ಸಭಾಪತಿಯವರು:–** ನಾನು ಈಗಾಗಲೇ ತಿಳಿಸಿದಂತೆ ಈ ಸದನಕ್ಕೆ ಮುಖ್ಯಮಂತ್ರಿಗಳು ಬಂದಿದ್ದಾರೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮುಖ್ಯಮಂತ್ರಿಗಳು ನನಗೆ ಮಾಹಿತಿ ಕಳುಹಿಸಿದ್ದಾರೆ, ಅವರೇ ಈ ಸದನಕ್ಕೆ ಬರುತ್ತಿದ್ದಾರೆ ಎಂದು ನಾನೇನು ತಿಳಿಸಿದ್ದೆ ಆ ಬಗ್ಗೆ ನನಗೆ ಬಂದಂತಹ ಮಾಹಿತಿ ಸರಿಯಿತ್ತು. ಆ ಮಾಹಿತಿಯಂತೆ ಸನ್ಮಾನ್ಯ ಮುಖ್ಯಮಂತ್ರಿಯವರು ಈ ಸದನಕ್ಕೆ ಬಂದಿದ್ದಾರೆ. ದಯಮಾಡಿ ಎಲ್ಲರೂ ತಮ್ಮ ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಂಡು ತಾವು ಪ್ರಸ್ತಾಪಿಸಬೇಕೆಂದಿರುವ ವಿಷಯವನ್ನು ಪ್ರಸ್ತಾಪಿಸಿ. ಆ ವಿಚಾರಕ್ಕೆ ಸಂಬಂಧಿಸಿದಂತೆ ಅವರು ಏನು ಹೇಳುತ್ತಾರೆಯೊ ಕೇಳೋಣ.

(ಗೊಂದಲ)

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ಈಗಾಗಲೇ ನಮಗೆ ಸರ್ಕಾರದ ಬಂಡತನ ಗೊತ್ತಾಗಿಬಿಟ್ಟಿದೆ.

**ಸಭಾಪತಿಯವರು:–** ಹಾಗಾದರೆ ತಾವು ಮುಖ್ಯಮಂತ್ರಿಗಳ ಮಾತನ್ನು ಸಹ ಕೇಳುವುದಿಲ್ಲವೆ ?

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ಮುಖ್ಯಮಂತ್ರಿಗಳ ಮಾತನ್ನು ಕೇಳುತ್ತೇವೆ. ಆದರೆ ಇವರು ನಮಗೆ ವಾದಕ್ಕೆ ಅವಕಾಶ ಮಾಡಿಕೊಡುತ್ತಿಲ್ಲ, ಬರೀ ಮೊಂಡುತನ, ಭಂಡತನವನ್ನು ತೋರಿಸುತ್ತಿದ್ದಾರೆ. ಮೊನ್ನೆಯೆಲ್ಲಾ ಇವರು ಕೋಮುವಾದವನ್ನು ಸಮರ್ಥನೆ ಮಾಡಿಕೊಂಡರು, ಇಮೊತ್ತು ಕಾಮವಾದವನ್ನು ಸಮರ್ಥನೆ ಮಾಡಿಕೊಂಡರೆ ನಾವು ಏನು ಮಾತನಾಡುವುದು ? ಏನು ಹೇಳುತ್ತಾರೆ ಇವರು ?

**ಸಭಾಪತಿಯವರು:–** ಈಗ ನಾನು ಮುಖ್ಯಮಂತ್ರಿಯವರಿಂದ ಹೇಳಿಕೆ ಕೊಡಿಸಲೋ ಬೇಡವೋ? ಮುಖ್ಯಮಂತ್ರಿಗಳು ಹೇಳಿಕೆ ಕೊಡಬೇಕೋ ಬೇಡವೋ ?

**ಶ್ರೀಮತಿ ಮೋಟಮ್ಮ:–** ಅಗತ್ಯ ಇಲ್ಲವೆನಿಸುತ್ತಿದೆ, ಏಕೆಂದರೆ ಈಗಾಗಲೇ ಶಿಕ್ಷಣ ಸಚಿವರು ಹೇಳಿಕೆಯನ್ನು ಕೊಟ್ಟಿದ್ದಾರೆ. ಶಿಕ್ಷಣ ಸಚಿವರು ಸರ್ಕಾರದ ಪರವಾಗಿ ಉತ್ತರವನ್ನು ಕೊಟ್ಟಮೇಲೆ ಮುಖ್ಯಮಂತ್ರಿಗಳು ಉತ್ತರ ಕೊಡುವುದಕ್ಕೇನಿದೆ?

(ಗೊಂದಲ)

**ಶ್ರೀಮತಿ ವಿಮಲಾಗೌಡ (ಉಪ ಸಭಾಪತಿಯವರು:–** ಮಾನ್ಯ ಸಭಾಪತಿಯವರೇ, ಮುಖ್ಯಮಂತ್ರಿಯವರು ಹೇಳಿಕೆ ಕೊಡಬೇಕೆಂದು ಹೇಳಿದಿರಿ, ಈಗ ಅದರ ಅಗತ್ಯವಿಲ್ಲ ಎಂದು ಹೇಳುತ್ತಿದ್ದೀರಿ. ಈ ರೀತಿ ಮಾತನಾಡಿದರೆ ಹೇಗೆ?

(ಗೊಂದಲ)

**ಶ್ರೀ ಮತ್ತಿಕಟ್ಟೆ ವೀರಣ್ಣ:–** ಮಾನ್ಯ ಸಭಾಪತಿಯವರೇ, ಈ ವಿಚಾರವಾಗಿ ಚರ್ಚೆ ನಡೆಯಲಿ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಈ ವಿಷಯದಲ್ಲಿ ಚರ್ಚೆಗೆ ಅವಕಾಶವಿಲ್ಲ. ತಾವು ಹಿರಿಯರಿದ್ದೀರಿ, ಅನುಭವಿಗಳಿದ್ದೀರಿ, ಈ ವಿಷಯದಲ್ಲಿ ಹೇಗೆ ಚರ್ಚೆಗೆ ಅವಕಾಶವಿದೆ ಎಂಬುದನ್ನು ತಾವೇ ಹೇಳಿ. ಯಾವ ಪ್ರಕಾರ ಚರ್ಚೆಗೆ ಅವಕಾಶವಿದೆ? ನೀವು ಮಾನ್ಯ ಸಭಾಪತಿಯವರಿಗೆ ಚರ್ಚೆಗೆ ಅವಕಾಶ ಕೋರಿ ಯಾವುದೇ ರೀತಿಯ ನೋಟೀಸ್ ಕಳುಹಿಸಿಕೊಟ್ಟಿಲ್ಲ. ಯಾವುದೇ ರೀತಿಯ ಮಾಹಿತಿ ಇಲ್ಲ. ಹೀಗಿರುವಾಗ ಯಾವ ನಿಯಮದ ಅಡಿಯಲ್ಲಿ, ಯಾವ ರೂಪದಲ್ಲಿ ಈ ವಿಷಯವನ್ನು ಚರ್ಚೆ ಮಾಡಲು ಅವಕಾಶ ಕೇಳುತ್ತಿದ್ದೀರಿ ಎಂಬುದನ್ನು ತಾವು ಸ್ಪಷ್ಟವಾಗಿ ತಿಳಿಸಬೇಕಾಗುತ್ತದೆ.

(ಗೊಂದಲ)

**ಸಭಾಪತಿಯವರು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಸದನದಲ್ಲಿ ಮಾಡಲೇಬೇಕಾದಂತಹ ನನ್ನದೊಂದು ಕರ್ತವ್ಯವಿದೆ. ಸದನದ ಗಮನಕ್ಕೆ ಒಂದು ಪ್ರಕಟಣೆ ಇದೆ. ಮಾನ್ಯ ಸಭಾಧ್ಯಕ್ಷರಿಂದ ನನಗೆ ಈ ಮುಂದಿನ ಸಂದೇಶ ಬಂದಿರುತ್ತದೆ.

## 3. ಪ್ರಕಟಣೆ

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗು ನಡವಳಿಕೆಯ ನಿಯಮಗಳ 120ನೇ ನಿಯಮದ ಮೇರೆಗೆ ವಿಧಾನಸಭೆಯು ದಿನಾಂಕ: 07.02.2012 ರಂದು ಕರ್ನಾಟಕ ಪುರಸಭೆಗಳು ಮತ್ತು ಇತರ ಕೆಲವು ಕಾನೂನು (ತಿದ್ದುಪಡಿ) ವಿಧೇಯಕ 2011ನ್ನು ತಿದ್ದುಪಡಿಯೊಂದಿಗೆ ಅಂಗೀಕರಿಸಿತೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಹೌಸ್ ಆರ್ಡರ್‌ನಲ್ಲಿಲ್ಲ, ಆದರೂ ತಾವು ಪ್ರಕಟಣೆ ಮಾಡಿದಿರಿ.

**ಸಭಾಪತಿಯವರು:–** ಇಲ್ಲ, ನಾನು ಪ್ರಕಟಣೆ ಮಾಡುವುದಕ್ಕೆ ಏನೂ ತೊಂದರೆ ಇಲ್ಲ. ಹೌಸ್ ಆರ್ಡರ್‌ನಲ್ಲಿದೆಯೋ ಇಲ್ಲವೋ ಎಂಬುದನ್ನು ನಾನು ತೀರ್ಮಾನ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಬಂದಿದ್ದಾರೆ, ದಯಮಾಡಿ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ. ಅದೇನು ಕೇಳಬೇಕೆಂದುಕೊಂಡಿದ್ದೀರೋ ಅದನ್ನು ಕೇಳಿ. ಅವರು ಉತ್ತರ ಕೊಡುತ್ತಾರೆಯೋ, ಬಿಡುತ್ತಾರೆಯೋ ಅದು ಅವರಿಗೆ ಬಿಟ್ಟದ್ದು.

(ಗೊಂದಲ)

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ಚರ್ಚೆ ಮುಗಿದ ಮೇಲೆ ಅವರು ಉತ್ತರ ಕೊಡಲಿ.

(ಗೊಂದಲ)

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಯವರು ಮಾತನಾಡಲು ಎದ್ದುನಿಂತಿದ್ದಾರೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಡಿ.ವಿ. ಸದಾನಂದಗೌಡ (ಮಾನ್ಯ ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ತಮ್ಮ ಮುಖಾಂತರ ನಾನು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ...

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೇ, ಇದೀಗ ಸನ್ಮಾನ್ಯ ಸಚಿವರಾದ ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಮಾತನಾಡುವಾಗ ಆ ಮೂರು ಜನ ಸಚಿವರು ರಾಜೀನಾಮೆ ಕೊಟ್ಟರು, ನಿಮಗೆ ಇಲ್ಲಿ ಉಳಿದುದನ್ನು ಮಾತನಾಡುವುದಕ್ಕೆ ಅಧಿಕಾರ ಇಲ್ಲ ಎಂದರು. ನಮಗೆ ಎರಡೂ ಸದನಗಳಲ್ಲಿ ಈ ರಾಜ್ಯದಲ್ಲಿ ನಡೆಯತಕ್ಕಂತಹ ಘಟನೆಗಳ ಬಗ್ಗೆ ಮಾತನಾಡಲಿಕ್ಕೆ ಮತ್ತು ತಿಳಿದುಕೊಳ್ಳಲಿಕ್ಕೆ ಅಧಿಕಾರವಿದೆ. ಇದನ್ನು ಮೊದಲು ತಾವು ಒಪ್ಪಿಕೊಳ್ಳಬೇಕು. ತಾವು ಇದನ್ನು ಮಾನ್ಯ ಸಚಿವರಿಗೆ ತಿಳಿಸಿ ಹೇಳಬೇಕು. ಈ ಸದನದ ಮಹತ್ವವನ್ನು ನಿರ್ಲಕ್ಷಿಸುವುದು ಸರಿಯಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ನಿಯಮಾನುಸಾರ ಹಕ್ಕಿದೆ. ನಿಯಮಗಳ ಅಡಿಯಲ್ಲಿ, ನಿಯಮಗಳ ಪ್ರಕಾರ ಚರ್ಚೆ ಮಾಡುವುದಕ್ಕೆ ಸದಸ್ಯರಿಗೆ ಹಕ್ಕಿದೆ. ನಿಯಮಗಳನ್ನು ಬಿಟ್ಟು ಚರ್ಚೆ ಮಾಡುವುದಕ್ಕೆ ಅಧಿಕಾರ ಇಲ್ಲ. ಯಾವ ನಿಯಮದ ಅಡಿಯಲ್ಲಿ ತಾವು ಚರ್ಚೆಗೆ ಅವಕಾಶ ಕೋರುತ್ತಿದ್ದೀರಿ ಎಂಬುದನ್ನು ತಾವು ಮೊದಲು ತಿಳಿಸಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಿಯಮ 324ರ ಅಡಿಯಲ್ಲಿ ಈ ವಿಷಯದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆಯುವ ಉದ್ದೇಶಕ್ಕಾಗಿ ಸ್ಪಷ್ಟೀಕರಣ ಕೇಳಲು ತಾವು ನಮಗೆ ಅವಕಾಶ ನೀಡಬೇಕಾಗುತ್ತದೆ.

**ಸಭಾಪತಿಯವರು:–** ಬಾವಿಯಲ್ಲಿ ನಿಂತಿರುವವರು ಮತ್ತು ಕುಳಿತಿರುವವರ ಬಗ್ಗೆ ಅವರು ಕೇಳುವ, ಎತ್ತುವ ಯಾವುದೇ ಮಾತುಗಳು ದಾಖಲೆಗೆ ಹೋಗುವುದಿಲ್ಲ. ನನ್ನ ದೃಷ್ಟಿಯಲ್ಲಿ ಅವರು ಮಾತನಾಡಿಲ್ಲ ಎಂದು ಅರ್ಥ. ಅವರು ಬಾವಿಯಲ್ಲಿ ಧರಣಿಯಲ್ಲಿರುವಾಗ ಮಾತನಾಡಕೂಡದು, ಅಕಸ್ಮಾತ್ ಅವರು ಮಾತನಾಡಿದರೆ ಯಾರೂ ಅದನ್ನು ಗಣನೆಗೆ ತೆಗೆದುಕೊಳ್ಳಬಾರದು. ಅದು ನಿಮಗೆ ಮಾತ್ರವಲ್ಲ, ನಮ್ಮ ಅಧಿಕಾರಿಗಳಿಗೆ ಸಹ ಹೇಳುತ್ತಿದ್ದೇನೆ, ಮಾಧ್ಯಮ ಮಿತ್ರರಿಗೂ ಸಹ ಹೇಳುತ್ತಿದ್ದೇನೆ. ಬಾವಿಯಲ್ಲಿ ಕುಳಿತಿರುವವರು ಮಾತನಾಡಬಾರದು, ಮಾತನಾಡಿದರೆ ಅವರು ಮಾತನಾಡಿದ್ದು ನಮಗೆ ಕೇಳಿಸಿಲ್ಲ ಎಂದು ಅಂದುಕೊಳ್ಳಬೇಕು. ಅಷ್ಟರಮೇಲೂ ಕೇಳಿಸಿದ್ದರೆ ಅದರ ಮೇಲೆ ಬೇರೆಯವರು react ಮಾಡಬಾರದು.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ಇವರು ಅರ್ಧ ಬಾವಿಯಲ್ಲಿ ಇನ್ನರ್ಧ ಹೊರಗಡೆ ನಿಂತು ಮಾತನಾಡುತ್ತಿದ್ದಾರೆ.

(ಈ ಹಂತದಲ್ಲಿ ವಿರೊಧ ಪಕ್ಷದ ಮಾನ್ಯ ಸದಸ್ಯರುಗಳು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು)

(ಗೊಂದಲ)

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಈ ರೀತಿ ಘೋಷಣೆಗಳನ್ನು ಕೂಗಿದರೆ ಅದನ್ನು ನಾವು ಸಹಿಸುವುದಕ್ಕಾಗುವುದಿಲ್ಲ. Placard...

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ನಾನು ಮಾತನಾಡಿ ಮುಗಿಸುತ್ತೇನೆ. ನಾನು ಮಾತನಾಡುತ್ತಿದ್ದಾಗ ಸನ್ಮಾನ್ಯ ಬಸವರಾಜ ಬೊಮ್ಮಾಯಿಯವರು ಮಧ್ಯಪ್ರದೇಶ ಮಾಡಿದರು. ಹೀಗಾಗಿ ನನ್ನ ಮಾತುಗಳನ್ನು ಪೂರ್ಣಗೊಳಿಸುವುದಕ್ಕಾಗಲಿಲ್ಲ. ಮಾನ್ಯ ಬಸವರಾಜ ಬೊಮ್ಮಾಯಿಯವರು ಈ ಸದನದ ಸದಸ್ಯರಾಗಿ ಈ ಸದನದ ಮಹತ್ವ ಏನು, ಇದರ ಪಾತ್ರವೇನು ಎಂಬುದನ್ನು ಹಲವಾರು ಸಂದರ್ಭಗಳಲ್ಲಿ ನಮಗೂ ಸಹ ತಿಳಿಸಿದ್ದಾರೆ. ಅವರು ಉತ್ತಮವಾದ lawyer ಆಗಬೇಕಾಗಿತ್ತು, ಆದರೆ ಇಂಜಿನಿಯರ್ ಆದರು. ಅದಕ್ಕೋಸ್ಕರ ಅವರ ಕೇಸ್ ಬಹಳ bad ಆಗಿದೆ. ದಯಮಾಡಿ ಹೇಳುತ್ತಿದ್ದೇನೆ, ಇವೊತ್ತು ...

**ಸಭಾಪತಿಯವರು:–** ಅವರು bad ಅಡ್ವೋಕೇಟೋ ಅಥವಾ bad ಇಂಜಿನಿಯರ್ರೋ?

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಅವರು bad advocate, ಒಳ್ಳೆಯ ಇಂಜಿನಿಯರ್. ಅದರ ಬಗ್ಗೆ ಎರಡು ಮಾತಿಲ್ಲ. He is a good industrialist also.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):–** ಅದಕ್ಕೆ ಈಗ ಅವರು double role play ಮಾಡುತ್ತಿದ್ದಾರೆಯೇ?

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಇಲ್ಲ, ಇಲ್ಲ, ಇರಲಿ ಮೇಡಂ.

(5.30 ಗಂಟೆ)

**ಶ್ರೀಮತಿ ಮೋಟಮ್ಮ:–** ಅದಕ್ಕೆ ಈಗ ತಾವು ಡಬಲ್ ರೋಲ್ ಪ್ಲೇ ಮಾಡುತ್ತಿದ್ದೀರಾ? ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಉಪಸ್ಥಿತರಿರುವಾಗಲೆಲ್ಲಾ ತಾವೇ ಎದ್ದು ನಿಂತು ಮಾತನಾಡುತ್ತೀರಲ್ಲ ಏಕೆ?

(ಗೊಂದಲ)

**ಶ್ರೀ ಬಸವರಾಜ ಬೊಮ್ಮಾಯಿ:–** ಬೆಳಿಗ್ಗೆ ಮಾತನಾಡುವಾಗಲೂ ಸಹ objection ಮಾಡಿದಿರಿ. ಈಗ ಮಾತನಾಡಿದರೂ ಸಹ objection ಮಾಡುತ್ತಿದ್ದೀರಿ.

(ಗೊಂದಲ)

**ಶ್ರೀಮತಿ ಮೋಟಮ್ಮ:–** ಹಾಗಾದರೆ ಇದೇನು ಡಬಲ್ ರೋಲಾ?

**SRI BASAVARAJ BOMMAI:-** I am playing only one role. ಅದು ನಿಮ್ಮ ಕಾಂಗ್ರೆಸ್ ಪಕ್ಷದಲ್ಲಿ ಇರಬಹುದು. ನಮ್ಮ ಪಕ್ಷದಲ್ಲಿ ಆ ಪದ್ಧತಿ ಇಲ್ಲ. ನಮಗೆ ಅದರ ಅವಶ್ಯಕತೆ ಇಲ್ಲ. ನಾವು ಶ್ರೀ ಎಸ್.ಎಂ. ಕೃಷ್ಣಾರವರ ಕಾಲದಲ್ಲಿ ನಿಮ್ಮನ್ನು ನೋಡಿದ್ದೇವೆ. ಅವರು ಇಲ್ಲದೆ ಇರುವಂತಹ ಸಮಯದಲ್ಲಿ ಸುಮ್ಮನೆ ಕುಳಿತುಕೊಳ್ಳುತ್ತಿದ್ದೀರಿ, ಅವರು ಬಂದಾಗ ಜಿಗಿ ಜಿಗಿದು ಮಾತನಾಡುತ್ತಿದ್ದಿರಿ. ನಿಮ್ಮ ಅನುಭವವನ್ನು ಇಲ್ಲಿ ಹೇಳುತ್ತಿದ್ದೀರಾ? ನಾವು ನೋಡಿದ್ದೇವೆ, ನೋಡಿದವರ ಮುಂದೆ ಏಕೆ ಈ ರೀತಿ ಮಾತನಾಡುತ್ತಿದ್ದೀರಿ.

(ಗೊಂದಲ)

**ಸಭಾಪತಿಯವರು:–** ಒಂದು ಪ್ರಶ್ನೆಗೆ ಇಷ್ಟು ದಪ್ಪ ಉತ್ತರವನ್ನು ನನಗೆ ಕಳುಹಿಸಿ ಕೊಟ್ಟಿದ್ದಾರೆ. ನೀವು ಪ್ರಶ್ನೆ ಕೇಳುವುದಕ್ಕಾಗಲಿ, ಉತ್ತರ ಹೇಳುವುದಕ್ಕಾಗಲಿ ಅವಕಾಶವನ್ನೇ ಕೊಡುವುದಿಲ್ಲವೆಂದರೆ ಹೇಗೆ? ನಾನು ಬೆಳಿಗ್ಗೆಯಿಂದಲೂ ಇದನ್ನು ಓದಬೇಕೆಂದು ಪ್ರಯತ್ನ ಮಾಡುತ್ತಿದ್ದೇನೆ, ಆದರೆ ಓದುವುದಕ್ಕೇ ಆಗುತ್ತಿಲ್ಲ. ದಯಮಾಡಿ ಅಲೋ ಮಾಡಿ. ಪ್ರಶ್ನೋತ್ತರವನ್ನು ನಡೆಸೋಣ. ಆಮೇಲೆ ಉಳಿದಂತಹ ವಿಷಯಗಳನ್ನು ಚರ್ಚೆ ಮಾಡೋಣ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅವರ ಪರವಾಗಿ ಅಲ್ಲ, ಕಾನೂನು ರೀತಿಯಲ್ಲಿ ಅವರೇ ಸಹಿ ಮಾಡಿ ಕೊಟ್ಟಿದ್ದಾರೆ. ಇದರಲ್ಲಿ ಸನ್ಮಾನ್ಯ ಶ್ರೀ ಲಕ್ಷ್ಮಣ ಸಂಗಪ್ಪ ಸವದಿ, ಮಾನ್ಯ ಸಹಕಾರಿ ಸಚಿವರು ಮತ್ತು ಕೃಷಿ ಮಾರುಕಟ್ಟೆ ಸಚಿವರು, ಶ್ರೀ ಸಿ.ಸಿ. ಪಾಟೀಲ್, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಹಾಗೂ ಶ್ರೀ ಜೆ. ಕೃಷ್ಣಪಾಲೇಮಾರ್ ಮಾನ್ಯ ಬಂದರು, ಒಳನಾಡು ಜಲಸಾರಿಗೆ, ಜೀವಶಾಸ್ತ್ರ ಸಚಿವರುಗಳು ತಮ್ಮ ಸಚಿವ ಸ್ಥಾನಕ್ಕೆ ಮಾನ್ಯ ಮುಖ್ಯಮಂತ್ರಿಗಳಿಗೆ ಮಾನ್ಯ ಸಚಿವರು ಇಂದು ಬೆಳಿಗ್ಗೆ ರಾಜಿನಾಮೆಯನ್ನು ಸಲ್ಲಿಸಿದರು. ಮಾನ್ಯ ಮುಖ್ಯಮಂತ್ರಿಗಳು ರಾಜಿನಾಮೆ ಪತ್ರವನ್ನು ಸನ್ಮಾನ್ಯ ಗೌರವಾನ್ವಿತ ರಾಜ್ಯಪಾಲರಿಗೆ ಕಳುಹಿಸಿದ್ದು, ಅದನ್ನು ಅವರು ಅಂಗೀಕರಿಸಿದ್ದಾರೆಂದು ತಿಳಿಸಿದ್ದಾರೆಂದು ಸದನದ ಗಮನಕ್ಕೆ ತರಬಯಸುತ್ತೇನೆಂದು ತಿಳಿಸಿದರು. ಆದರೆ ರಾಜಿನಾಮೆಯನ್ನು ನೀಡಲಾಗಿದೆ ಎಂದು ಕಾರಣವನ್ನೇ ತಿಳಿಸಿಲ್ಲ, ಈ ಸದನ ಎಂದರೆ ಏನೆಂದು ತಿಳಿದಿದ್ದಾರೆ? ಇಲ್ಲಿ ಒಂದು ಒಳ್ಳೆಯ ಪರಂಪರೆ ಇದೆ. ಇದನ್ನೆಲ್ಲಾ ಗಾಳಿಗೆ ತೂರಿದ್ದಾರೆ. ಈ ರೀತಿ ಮಾಡಿರುವುದು ತಪ್ಪು. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ಈಗ ಕೊಟ್ಟಿರುವಂತಹದ್ದು ತಪ್ಪು ಉತ್ತರ.

**ಶ್ರೀ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, I have a Point of Order.

(ಗೊಂದಲ)

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಗಣೇಶ್ ಕಾರ್ಣಿಕ್‌ರವರು ಬೆಳಿಗ್ಗೆಯಿಂದಲೂ ಆ ಪುಸ್ತಕ ತೆಗೆದು ಹೇಳುತ್ತಿದ್ದಾರೆ. ನಾವು ಆಗಲೇ ಹೇಳಿದ್ದೇವೆ, ಈ ಘಟನೆ ಸಂವಿಧಾನಬದ್ಧವಾಗಿ ಯಾವುದೇ ರೂಲ್ಸ್ ಅಂಡ್ ರೆಗ್ಯುಲೇಶನ್ ಇಲ್ಲದೆ ಚರ್ಚೆ ತೆಗೆದುಕೊಳ್ಳುವುದರಿಂದ ಹಗಲೆಲ್ಲಾ ಹೇಳುವಂತಹ ಅವಶ್ಯಕತೆ ಇಲ್ಲ.

(ಗೊಂದಲ)

**ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು):–** ಮಾನ್ಯ ವೀರಣ್ಣಮತ್ತಿಕಟ್ಟಿಯವರು ಸಹ ಸಭಾಪತಿ ಆಗಿ ಕೆಲಸ ನಿರ್ವಹಿಸಿದ್ದಾರೆ. ಯಾವ ಸೂಚನೆಯ ಮೇಲೆ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ತಿಳಿಸಬೇಕು. ತಾವು ಯಾವ ನೋಟೀಸ್ ಕೊಟ್ಟಿದ್ದೀರಿ?

(ಗೊಂದಲ)

ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಕೊಟ್ಟಿರುವುದು ಒಂದು ಹೇಳಿಕೆ. ಆ ಹೇಳಿಕೆ ಮೇಲೆ ಚರ್ಚೆ ಮಾಡಬೇಕೆ, ಅಥವಾ ಯಾವುದಕ್ಕೆ ಚರ್ಚೆ ಮಾಡುವುದು? ಮೇಡಂ, ಯಾವ ನೊಟೀಸನ್ನು ಕೊಟ್ಟಿದ್ದೀರಿ?

(ಗೊಂದಲ)

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಯಾವ ವಿಷಯದ ಸಲುವಾಗಿ ಚರ್ಚೆಗೆ ತೆಗದುಕೊಳ್ಳಬೇಕೆಂದು ಈಗಾಗಲೆ ತಿಳಿಸಿದ್ದೇವೆ. ಆದರೂ ಮತ್ತೊಮ್ಮೆ ಹೇಳಬೇಕೇ ಹೇಳಿ.

**ಶ್ರೀಮತಿ ಮೋಟಮ್ಮ:–** ಏಕೆ ಈ ರೀತಿ ವರ್ತಿಸುತ್ತಿದ್ದೀರಿ ಎಂದು ಜನ ಮಾತನಾಡಿಕೊಳ್ಳುತ್ತಿದ್ದಾರೆ. ಇದು ಸಾರ್ವಜನಿಕರ ಪ್ರಶ್ನೆಯಾಗಿದೆ.

**ಶ್ರೀ ಬಿ.ಎನ್. ಬಚ್ಚೇಗೌಡ:–** ಯಾವ ನೋಟೀಸ್ ಕಳಿಸಿಲ್ಲ, ಯಾವುದೇ ಸೂಚನೆಯೂ ನಮಗೆ ಇಲ್ಲವೆಂದು ಮಾನ್ಯ ಸಭಾಪತಿಯವರೇ ಹೇಳಿದರು. ಯಾವ ವಿಷಯಕ್ಕೆ ಚರ್ಚೆ ಆಗಬೇಕು? ಹೇಳಿಕೆ ಮೇಲೆ ಚರ್ಚೆಯೇ?

(ಗೊಂದಲ)

**ಸಭಾಪತಿಯವರು:–** ಸದನದ ಬಾವಿಯಲ್ಲಿ ನಿಂತವರು ಯಾರು ಮಾತನಾಡಬಾರದು.

(ಗೊಂದಲ)

**ಶ್ರೀ ವೀರಣ್ಣ ಮತ್ತಿಕಟ್ಟಿ:–** ದಯಮಾಡಿ ಇಲ್ಲಿ ಕೇಳಿ, ಬೆಳಿಗ್ಗೆ ನೀವು ಇರಲಿಲ್ಲ. ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಇದ್ದರು, ಇನ್ನುಳಿದ ಸಚಿವರು ಇದ್ದರು. ಮಾನ್ಯ ಉಮೇಶ್‌ಕತ್ತಿಯವರು ಇರಲಿಲ್ಲ, ಅವರು ಉಳಿದುಕೊಂಡರು.

(ಗೊಂದಲ)

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಈ ವಿಚಾರ ಏಕೆ ಚರ್ಚೆಗೆ ತೆಗೆದುಕೊಂಡರು ಎಂದು ಮಾನ್ಯ ಬಚ್ಚೇಗೌಡರನ್ನು ಕೇಳಿ. ಏಕೆ ಸ್ಟೇಟ್‌ಮೆಂಟ್ ಮಾಡುವುದಕ್ಕೆ ಹೇಳಿದರು ಎಂಬುದರ ಬಗ್ಗೆ ಅಮೂಲಾಗ್ರವಾಗಿ ಚರ್ಚೆ ಆಗಿ ಮಾನ್ಯ ಸಭಾಪತಿಯವರು ನಿರ್ಧಾರ ತೆಗೆದುಕೊಂಡು ಸರ್ಕಾರದ ಪರವಾಗಿ ...

(ಗೊಂದಲ)

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರು ಮಾನ್ಯ ಕಾಗೇರಿಯವರಿಗೆ ಈಗಾಗಲೇ ಹೆಳಿದ್ದಾರೆ. ಮಾನ್ಯ ನಿರಾಣಿಯವರು ಇದ್ದರು, ಮಾನ್ಯ ಗಣೇಶ್ ಕಾರ್ಣಿಕ್ ಇದ್ದರು, ಎಲ್ಲರೂ ಇದ್ದರು. ಅದಕ್ಕೋಸ್ಕರ ಇದರ ಬಗ್ಗೆ ಸಂಪೂರ್ಣ ಚರ್ಚೆಯಾಗಿ ಈ ವಿಚಾರವಾಗಿ ಚಿಂತನೆಗೆ ಅವಕಾಶ ಕೊಟ್ಟಿದ್ದರು.

(ಗೊಂದಲ)

**ಶ್ರೀ ವೀರಣ್ಣ ಮತ್ತಿಕಟ್ಟಿ:–** ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಈ ಉತ್ತರವನ್ನು ಮರಳಿ ಪಡೆದು ಉತ್ತರ ಕೊಡಲಿ.

(ಗೊಂದಲ)

**ಸಭಾಪತಿಯವರು:–** ಈಗ ಚರ್ಚೆಗೆ ಬಿಟ್ಟಿಲ್ಲ. ಚರ್ಚೆಗೆ ಬಿಡುವುದಕ್ಕೂ ಮುಂಚೆ ರೂಲಿಂಗ್ ಕೊಟ್ಟು ಮಾಡುತ್ತೇನೆ. ಇದು ಚರ್ಚೆಯೇ ಪ್ರಾರಂಭ ಆಗಿಲ್ಲ. ನಾನು ರೂಲಿಂಗ್ ಕೊಡಬೇಕೆಂದು ಕೆಲವರು ಕೇಳುತ್ತಿದ್ದಾರೆ. ಸರ್ಕಾರಕ್ಕೆ ಚರ್ಚೆಗೆ ಅವಕಾಶ ಕೊಡಬೇಕೆಂದು ವಿರೋಧ ಪಕ್ಷದ ಸದಸ್ಯರುಗಳು ಕೇಳುತ್ತಿದ್ದಾರೆ. ತಾವೆಲ್ಲರೂ ಪ್ರಸ್ತಾಪ ಮಾಡಿರುವಂತಹ ಎಲ್ಲಾ ವಿಷಯಗಳ ಬಗ್ಗೆ ರೂಲಿಂಗ್ ಕೊಡಬೇಕೆಂದು ಕೇಳುತ್ತಿದ್ದೀರಿ. ರೂಲಿಂಗ್ ಕೊಡಬೇಕೆಂದರೆ ತಾವೆಲ್ಲರೂ ತಮ್ಮ ತಮ್ಮ ಸ್ಥಾನದಲ್ಲಿ ಕುಳಿತುಕೊಂಡರೆ ಖಂಡಿತ ನಾನು ಒಂದು ರೂಲಿಂಗ್ ಕೊಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗಲಾದರೂ ತಾವು ಕುಳಿತುಕೊಂಡರೆ ಒಳ್ಳೆಯದು, ಅವರವರ ಸ್ಥಾನದಲ್ಲಿ ಕುಳಿತುಕೊಂಡರೆ ನಾನು ಎಲ್ಲದಕ್ಕೂ ರೂಲಿಂಗ್ ಕೊಡುತ್ತೇನೆ.

(ಗೊಂದಲ)

**ಸಭಾಪತಿಯವರು:–** ಬಾವಿಯಲ್ಲಿ ಧರಣಿ ಕುಳಿತಾಗಲೂ ಸದನ ನಡೆಯಬಹುದು ಎಂದು ತೀರ್ಮಾನಗಳಾಗಿವೆ. ಒಂದು ವಿಷಯವನ್ನು ಸದನದ ಗಮನಕ್ಕೆ ತರಬಯಸುತ್ತೇನೆ. ಈ ಹಿಂದೆ ಬಹಳ ದೊಡ್ಡ ದೊಡ್ಡ ರೂಲಿಂಗ್‌ಗಳು ಆಗಿವೆ, ಸದಸ್ಯರುಗಳು ಅವರವರ ಸ್ಥಾನದಲ್ಲಿರುವುದೇ ಸರಿ. ಆದರೆ ಯಾವುದೋ ಕಾರಣಕ್ಕೆ ಸದನದ ಬಾವಿಯಲ್ಲಿ ಬಂದು ನಿಂತಾಗ ಸದನ ನಡೆಯಬಹುದೆ, ಬೇಡವೇ ಎಂದು ಬಂದಾಗ ಸದನ ನಡೆಯಬಹುದು ಎಂಬ ತೀರ್ಮಾನಗಳು ಈ ಹಿಂದೆ ಆಗಿವೆ. ಆದರೆ ನಾನು ಅದರೊಳಗೆ ಆಶ್ರಯ ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ದಯಮಾಡಿ ತಮ್ಮ ತಮ್ಮ ಸ್ಥಾನಗಳಿಗೆ ಬನ್ನಿ. ಮಾನ್ಯ ಮುಖ್ಯಮಂತ್ರಿಗಳು ಏನೋ ಮಾತನಾಡಬೇಕೆಂದು ಇದ್ದಾರೆ. ಸ್ವಾಭಾವಿಕವಾಗಿ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತೇನೆಂದು ಹೇಳಿದಾಗ ನಾನು ಅವರಿಗೆ ಆದ್ಯತೆ ಕೊಡಬೇಕಾಗುತ್ತದೆ. ಅವರಿಗೆ ನಾನು ಅವಕಾಶ ಕೊಡುತ್ತೇನೆ. ಈಗ ಸನ್ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾರೆ.

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯ ಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ನನಗೆ ಮಾನ್ಯ ಸದಸ್ಯರುಗಳನ್ನು ಬಾವಿಯಲ್ಲಿ ನಿಲ್ಲಿಸಿ ಉತ್ತರ ಕೊಡುವುದು ಅಷ್ಟು ಸರಿ ಎನಿಸುವುದಿಲ್ಲ.

(ಗೊಂದಲ)

**ಸಭಾಪತಿಯವರು:–** ಸದನದ ಬಾವಿಯಲ್ಲಿ ನಿಂತು ಯಾರೂ ಮಾತನಾಡಬೇಡಿ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ನಾನು ಕೊಟ್ಟ ಉತ್ತರದಿಂದ ಮಾನ್ಯ ಸದಸ್ಯರು ತೃಪ್ತರಾಗದಿದ್ದರೆ ಅವರು ಪುನಃ ಬಾವಿಗೆ ಬರಬಹುದು. ನನ್ನದೇನು ಅಭ್ಯಂತರವಿಲ್ಲ. ಆದಕಾರಣ ನಾನು ಉತ್ತರ ಕೊಡುವಾಗ ಮುಖ್ಯಮಂತ್ರಿಯಾಗಿ ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುವುದೇನೆಂದರೆ, ದಯವಿಟ್ಟು ಮಾನ್ಯ ಸದಸ್ಯರೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಲಿ. ಐದು ನಿಮಿಷಗಳ ಕಾಲ ನಾನು ಇದರಲ್ಲಿ ಬಾಕಿ ಇರುವಂತಹ ಕ್ಲಾರಿಫಿಕೇಶನ್ ಏನು ಕೊಡಬೇಕು ಅದನ್ನು ಕೊಡುತ್ತೇನೆ. ಒಂದು ವೇಳೆ ಅವರ ಮನಸ್ಸಿಗೆ ಸರಿಯಾಗಲಿಲ್ಲವೆಂದು ಹೇಳಿದರೆ ಪುನಃ ಮುಂದುವರೆಸಬೇಕೆಂದು ಹೇಳಿದರೆ ಬಾವಿಯಲ್ಲಿ ಈಜಾಡುವುದಕ್ಕೆ ನನ್ನದೇನು ಅಭ್ಯಂತರವಿಲ್ಲ. ಆದರೆ ಈಗ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಕ್ಕೆ ಹೋಗಬೇಕೆಂದು ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ.

**ಸಭಾಪತಿಯವರು:–** ಈಗ ಮಾನ್ಯ ಮುಖ್ಯಮಂತ್ರಿಯವರು ಮಾತನಾಡುತ್ತಾರೆ, ದಯಮಾಡಿ ಮಾನ್ಯ ಸದಸ್ಯರೆಲ್ಲರೂ ತಮ್ಮ ತಮ್ಮ ಸ್ಥಾನಕ್ಕೆ ಬಂದು ಕುಳಿತುಕೊಳ್ಳಬೇಕು.

(ಈ ಹಂತದಲ್ಲಿ ಸದನದ ಬಾವಿಯಲ್ಲಿ ನಿಂತಿದ್ದಂತಹ ಮಾನ್ಯ ಸದಸ್ಯರುಗಳೆಲ್ಲರೂ ತಮ್ಮ ತಮ್ಮ ಸ್ಥಾನಕ್ಕೆ ತೆರಳಿದರು)

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯ ಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೆಲ್ಲರೂ ತಮ್ಮ ತಮ್ಮ ಸ್ಥಾನದಲ್ಲಿ ಕುಳಿತುಕೊಂಡ ಮೇಲೆ ನನಗೆ ಈಗ ಅರ್ಧ ಉತ್ತರ ಕೊಟ್ಟಂತೆ ಆಗಿದೆ. ಏಕೆಂದರೆ, ಒಂದು ಸಣ್ಣ ಗೊಂದಲವಿತ್ತು. ಮಂತ್ರಿಗಳು ಕೊಟ್ಟಂತಹ ಉತ್ತರ, ಅದರ ಬಗ್ಗೆ ಏನು ಎಂದು ಹೇಳುವುದಿತ್ತು. ನಾನು ಆ ಹೇಳಿಕೆಯ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಏಕೆಂದರೆ ನಾನು ಕೆಳಗಿನ ಮನೆಯಲ್ಲಿದ್ದೆ. ಇದೊಂದು ಗಂಭೀರವಾದಂತಹ ವಿಚಾರ. ತಾವು ಕೂಡ ವಿಷಯವನ್ನು ಪ್ರಸ್ತಾಪ ಮಾಡುತ್ತೀರೆಂದು ತಿಳಿದ ಕಾರಣ ನಾನು ಕೆಳಗಿನ ಮನೆಯಲ್ಲಿ ಇರುವ ಕಾರಣ ನೀವು ಮೇಲ್ಮನೆಯಲ್ಲಿ ಒಂದು ಸಣ್ಣ ಹೇಳಿಕೆಯನ್ನು ಮಾಡಿ ಎಂದು ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರಿಗೆ ಆದೇಶ ಮಾಡಿದ್ದೆ. ಅದೂ ತಮ್ಮ ಅನುಮತಿಯನ್ನು ತೆಗೆದುಕೊಂಡು ಮಾಡಿ ಎಂದು ಹೇಳಿದ್ದೆ. ತಾವು ಅನುಮತಿ ನೀಡಿದ ಹಿನ್ನೆಲೆಯಲ್ಲಿ ಅವರು ಹೇಳಿಕೆಯನ್ನು ಮಾಡಿದ್ದಾರೆ. ಸನ್ಮಾನ್ಯ ಸಭಾಪತಿಯವರೇ, ಆದ ಕಾರಣ ಅದರಲ್ಲಿ ಏನಾದರೂ ಸ್ವಲ್ಪ ವ್ಯತ್ಯಾಸಗಳಿದ್ದರೆ ದಯವಿಟ್ಟು ಅದನ್ನು ಬಿಟ್ಟುಬಿಡಬೇಕು ಮತ್ತು ಅದರ ಬಗ್ಗೆ ಸ್ಪಷ್ಟೀಕರಣವನ್ನು ಮಾನ್ಯ ವಿರೋಧ ಪಕ್ಷದ ಸ್ನೇಹಿತರು ಕೇಳಿದರೆ ಕೊಡುವುದಕ್ಕೆ ನಾನು ತಯಾರಿದ್ದೇನೆ. ಈಗಾಗಲೇ ನಿನ್ನೆ ನಡೆದಂತಹ ವಿದ್ಯಮಾನ, ಪತ್ರಿಕಾ ಮಾಧ್ಯಮಗಳಲ್ಲಿ ಮತ್ತು ದೃಶ್ಯ ಮಾಧ್ಯಮಗಳಲ್ಲಿ ಇಡೀ ದೇಶದಲ್ಲಿ ಪ್ರಸಾರವಾಗಿರುವುದು ಎಲ್ಲರಿಗೂ ನೋವನ್ನುಂಟು ಮಾಡಿದೆ. ನಿಜ, ಸದನದಲ್ಲಿ ಈ ರೀತಿ ನಡೆದಿರುವ ಬಗ್ಗೆ ಸಾಕಷ್ಟು ವಿಶ್ಲೇಷಣೆಗಳು ಸದನದ ಹೊರಗಡೆ ಮತ್ತು ಒಳಗಡೆ ನಡೆದಿರುವುದನ್ನು ನಾವು ಕಂಡಿದ್ದೇವೆ. ಈ ವಿಚಾರಗಳು ಗೊತ್ತಾದ ಕೂಡಲೇ ನಾನು ಸಂಬಂಧಪಟ್ಟ ಮೂರು ಜನ ಮಂತ್ರಿಗಳನ್ನು ಕರೆಯಿಸಿ ಮಾತನಾಡುವಂತಹ ಪ್ರಯತ್ನಗಳನ್ನು ಮಾಡಿದೆ. 'ನಮ್ಮ ಕಡೆಯಿಂದ ಯಾವುದೂ ಅಂತಹ ದೊಡ್ಡ ತಪ್ಪುಗಳು ಆಗಿಲ್ಲ. ಆದರೆ, ಇದೊಂದು ಸದನದ ಗೌರವಕ್ಕೆ ಕಪ್ಪುಚುಕ್ಕೆ ಆಗುತ್ತದೆ ಎನ್ನುವುದಾದರೆ ಮತ್ತು ಇದರ ಬಗ್ಗೆ ನಿಷ್ಪಕ್ಷಪಾತವಾದ ತನಿಖೆ ಆಗಬೇಕು. ನಮ್ಮ ಮನಸ್ಸಿನಲ್ಲಿ ನಾವು ನಿರಪರಾಧಿಗಳು

ಎನ್ನುವಂತಹ ಭಾವನೆ ಇದೆ. ಆದ್ದರಿಂದ ನಿರಪರಾಧಿಗಳಾಗಿರುವಂತಹ ನಮಗೂ ನೋವಾಗಿದೆ. ಬೇರೆ ಬೇರೆ ಮಾಧ್ಯಮಗಳಲ್ಲಿ ಬರುತ್ತಿರುವ ಸಂಗತಿಗಳನ್ನು ನೋಡಿ ನಮಗೂ ಬೇಸರವಾಗಿದೆ. ಆದ ಕಾರಣ ಇದರ ಬಗ್ಗೆ ಕೂಲಂಕಷವಾಗಿ ತನಿಖೆ ಮಾಡಬೇಕು. ಆ ತನಿಖೆ ಆಗುವವರೆಗೆ ನಾವು ಆ ಸ್ಥಾನದಲ್ಲಿ ಮುಂದುವರೆಯುವುದಿಲ್ಲ. ಆ ಸ್ಥಾನಕ್ಕೆ ರಾಜೀನಾಮೆಯನ್ನು ನೀಡುತ್ತೇವೆ' ಎಂದು ಅವರೇ, ಸ್ವ-ಇಚ್ಛೆಯಿಂದ ಮತ್ತು ಸ್ವಯಂಪ್ರೇರಿತರಾಗಿ ಈ ಸದನದ ಗೌರವವನ್ನು ಉಳಿಸುವುದಕ್ಕಾಗಿ ರಾಜೀನಾಮೆಯನ್ನು ಕೊಟ್ಟಿದ್ದಾರೆ. ನನಗೆ ಆ ರಾಜೀನಾಮೆ ಬಂದ ತಕ್ಷಣ, ನಾನು ಅದನ್ನು ಮಾನ್ಯ ರಾಜ್ಯಪಾಲರಿಗೆ ಕಳುಹಿಸಿಕೊಟ್ಟೆ, ಕೆಲವೇ ಕ್ಷಣಗಳಲ್ಲಿ ಮಾನ್ಯ ರಾಜ್ಯಪಾಲರು ಅವರುಗಳ ರಾಜೀನಾಮೆಯನ್ನು ಅಂಗೀಕಾರ ಮಾಡುವಂತಹ ಕೆಲಸವನ್ನು ಮಾಡಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಒಂದು ವಿಚಾರದ ಬಗ್ಗೆ ನನ್ನ ಮನಸ್ಸಿಗೆ ತುಂಬಾ ಸಂತೋಷವಾಗಿದೆ. ಒಬ್ಬ ಮಂತ್ರಿ. 'ತಮ್ಮ ಮೇಲೆ ಬಂದಿರುವಂತಹ ಆರೋಪದಿಂದ ಮುಕ್ತರಾಗುವವರೆಗೆ ಆ ಸ್ಥಾನದಲ್ಲಿ ಮುಂದುವರೆಯುವುದಿಲ್ಲ' ಎನ್ನುವಂತಹ ಸಂಪ್ರದಾಯವನ್ನು ಹಾಕಿದ್ದಾರೆ. ಇದು ನಿಜವಾಗಿಯೂ ಪ್ರಜಾತಂತ್ರ ವ್ಯವಸ್ಥೆಗೆ ಗೌರವ ಬರುವಂತಹ ಸಂಗತಿ ಎಂದು ನಾನು ಭಾವಿಸುತ್ತಿದ್ದೇನೆ. ತಾವು ಅನುಮತಿಯನ್ನು ನೀಡುವುದಾದರೆ ಕೆಳಗಿನ ಮನೆಯ ಕೆಲವೊಂದು ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇನೆ.

**ಸಭಾಪತಿಯವರು:-** ಮಾಡಿ.

**ಶ್ರೀ ಡಿ.ವಿ. ಸದಾನಂದಗೌಡ:-** ಸನ್ಮಾನ್ಯ ಸಭಾಪತಿಯವರೇ, ಕೆಳಗಿನ ಮನೆಯಲ್ಲಿ ಈ ಬಗ್ಗೆ ಸುದೀರ್ಘವಾಗಿರುವಂತಹ ಚರ್ಚೆಗಳು ಆಯಿತು. ಈ ಬಗ್ಗೆ ಭಾರಿ ಚರ್ಚೆಗಳ ಅವಶ್ಯಕತೆ ಇರಲಿಲ್ಲ. ನಾನು ಲೋಕಸಭಾ ಸದಸ್ಯನಾಗಿದ್ದಾಗ, ನಮ್ಮ ಲೋಕಸಭೆಯಲ್ಲಿ ಬಹಳ ದೊಡ್ಡ ಹಗರಣ ನಡೆದಿತ್ತು. ಆ ಹಗರಣ ಎಲ್ಲರಿಗೂ ತಿಳಿದಿರುವಂತಹ ಹಗರಣವೇ ಆಗಿದೆ. ಆ ಹಗರಣ ನಡೆದಂತಹ ಸಂದರ್ಭದಲ್ಲಿ ಅಂದಿನ ಲೋಕಸಭೆಯ ಸಭಾಧ್ಯಕ್ಷರು

ಅದ್ಭುತವಾಗಿರುವಂತಹ ಒಂದು ಸಂಪ್ರದಾಯವನ್ನು ಹಾಕಿದ್ದರು. ನಿನ್ನೆ ನಡೆದಂತಹ ಹಗರಣ ಆ ಸದನಕ್ಕೆ ಸಂಬಂಧಪಟ್ಟ ವಿಚಾರವಾದ ಕಾರಣ ಅವರು ಬಾಹ್ಯವಾಗಿ ಆ ಮನೆಯ ಘನತೆ ಗೌರವಗಳನ್ನು ಉಳಿಸಬೇಕು, ಭಾರಿ ದೊಡ್ಡ ರೀತಿಯಲ್ಲಿ ಸದನದ ಒಳಗಾಗಲೀ ಅಥವಾ ಹೊರಗಾಗಲೀ ಚರ್ಚೆ ಮಾಡುವುದರಿಂದ ಎಷ್ಟೋ ವಿಚಾರಗಳು ವಿಸ್ತೃತವಾಗಿ ಹೊರಗೆ ಹೋಗುವುದರಿಂದ ಸದನದ ಘನತೆ ಗೌರವಗಳಿಗೆ ತೊಂದರೆ ಆಗುತ್ತದೆ ಎಂದು ಆ ಸದನದ ಆಡಳಿತ ಪಕ್ಷದ ಮತ್ತು ವಿರೊಧ ಪಕ್ಷದ ಸದಸ್ಯರನ್ನು ಕರೆದು ಸಮಾಲೋಚನೆ ಮಾಡಿದರು, ಅವರ ಜೊತೆಗೆ ಸಮಾಲೋಚನೆಗಳನ್ನು ಮಾಡಿದ ನಂತರ ಯಾವುದೇ ಚರ್ಚೆಗೆ ಲೋಕಸಭೆಯಲ್ಲಿ ಅವಕಾಶವನ್ನು ನೀಡಲಿಲ್ಲ. ಅವರು ಸದನ ಸಮಿತಿಯನ್ನು ರಚನೆ ಮಾಡಿದರು. ಸದನ ಸಮಿತಿಗೆ 10 ದಿನಗಳಲ್ಲಿ ವರದಿಯನ್ನು ಕೊಡಬೇಕೆನ್ನುವ ಆದೇಶವನ್ನು ಮಾಡಿದರು. ಸದನ ಸಮಿತಿಯು 10 ದಿನಗಳಲ್ಲಿ ತನ್ನ ವರದಿಯನ್ನು ಲೋಕಸಭೆಯಲ್ಲಿ ಮಂಡನೆ ಮಾಡಿತು. ಇದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈಗಾಗಲೇ ನಮಗೆ ಒಂದು ಸಂಪ್ರದಾಯವಾಗಿ ನಮ್ಮ ಮುಂದಿದೆ.

ಸನ್ಮಾನ್ಯ ಸಭಾಪತಿಯವರೇ, ಈ ವಿಚಾರ ಮತ್ತು ಚರ್ಚೆ ಒಂದು ರೀತಿಯಲ್ಲಿ ಕೆಳಗಿನ ಮನೆಯ ಆಸ್ತಿಯಾಗಿದೆ ಮತ್ತು ಅದು ಆ ಮನೆಗೆ ಸೀಮಿತವಾಗಿದೆ. ಮಾನ್ಯ ರಾಜ್ಯಪಾಲರು ಅವರುಗಳ ರಾಜೀನಾಮೆಯನ್ನು ಒಪ್ಪಿ ಅಂಗೀಕರಿಸಿದ ಮೇಲೆ, ಅವರು ಮಂತ್ರಿಗಳಾಗಿ ಉಳಿದಿಲ್ಲ. ಈಗ ಕೇವಲ ಶಾಸಕರಾಗಿ ಆ ಸಭೆಗೆ ಮಾತ್ರ ಸೀಮಿತವಾಗಿದ್ದಾರೆ. ಅವರಿಗೆ ಸಂಬಂಧಪಟ್ಟ ವಿಚಾರಗಳನ್ನು ಬೇರೆ ಕಡೆಗಳಲ್ಲಿ ಚರ್ಚೆ ಮಾಡುವುದು ಅಷ್ಟು ಸೂಕ್ತವಲ್ಲ ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಇದು ಇಲ್ಲಿರುವ ಎಲ್ಲ ಸದಸ್ಯರಿಗೂ ತಿಳಿದಿರುವಂತಹ ಸಂಗತಿಯೇ ಆಗಿದೆ. ಏಕೆಂದರೆ, ಇಲ್ಲಿರುವಂತಹ ಹಲವಾರು ಜನ ಸದಸ್ಯರಿಗೆ ಸಭಾಪತಿಯವರ ಪೀಠದಲ್ಲಿ ಕುಳಿತು ಕೆಲಸ ಮಾಡಿರುವಂತಹ ಅನುಭವ ಇದೆ. ಆದ ಕಾರಣ, ಅನೇಕ ಸಂಗತಿಗಳನ್ನು ಹೇಳಿ ನನಗೆ ತುಂಬಾ ಗೊತ್ತಿದೆ ಎನ್ನುವ ರೀತಿಯಲ್ಲಿ ನಾನು ವರ್ತನೆ ಮಾಡುವುದು ಸರಿಯಲ್ಲ. ನನಗಿಂತ ಹೆಚ್ಚು ಸಂಗತಿಗಳು ಅವರಿಗೆ ಗೊತ್ತಿದೆ. ಈಗಾಗಲೇ ಕೆಳಗಿನ

ಮನೆಯಲ್ಲಿ ಇದರ ಬಗ್ಗೆ ಚರ್ಚೆಗಳು ನಡೆದಿವೆ. ಆಗ, ಸತ್ಯಾಂಶಗಳು ಹೊರಗೆ ಬರಬೇಕು ಮತ್ತು ಪ್ರಜಾತಂತ್ರ ಮೌಲ್ಯವನ್ನು ಎತ್ತಿ ಹಿಡಿಯಬೇಕು ಮತ್ತು ಲೋಕಸಭೆಯಲ್ಲಿ ಹಿಂದೆ ಯಾವ ಸಂಪ್ರದಾಯಗಳನ್ನು ಹಾಕಿದ್ದಾರೆ ಅದರ ಅಡಿಯಲ್ಲಿಯೇ ನಾವು ನಡೆಯಬೇಕು' ಎನ್ನುವ ವಿಚಾರವನ್ನು ನಾನು ಕೆಳಗಿನ ಮನೆಯಲ್ಲಿ ಪ್ರಸ್ತಾಪ ಮಾಡಿದ್ದೆ. ಅದನ್ನು ಕೆಳಗಿನ ಮನೆಯ ಸಭಾಧ್ಯಕ್ಷರು ಅಂಗೀಕಾರ ಮಾಡಿ, ಈಗಾಗಲೇ ಸದನ ಸಮಿತಿಯ ರಚನೆಯನ್ನು ಘೋಷಣೆ ಮಾಡಿದ್ದಾರೆ. ಅವರು ಸದನ ಸಮಿತಿಯ ಕಾರ್ಯಾಚರಣೆಗೆ ಬೇಕಾಗಿರುವಂತಹ ವ್ಯವಸ್ಥೆಗಳನ್ನು ಮುಂದಿನ ದಿನಗಳಲ್ಲಿ ಮಾಡುವವರಿದ್ದಾರೆ. ಸಂಬಂಧಪಟ್ಟವರಿಗೆ ಇವತ್ತೇ ನೋಟೀಸ್‌ನ್ನು ಕೊಟ್ಟಿದ್ದಾರೆ. ಆ ಮೂರು ಜನರು 13ನೇ ತಾರೀಖಿನೊಳಗೆ ಆ ನೋಟೀಸ್‌ಗೆ ಉತ್ತರಗಳನ್ನು ಕೊಡಬೇಕು ಎನ್ನುವುದನ್ನು ಆ ಮನೆಯ ಸಭಾಧ್ಯಕ್ಷರು ಸದನದಲ್ಲಿ ಘೋಷಣೆ ಮಾಡಿದ್ದಾರೆ. ಆದ್ದರಿಂದ ಇವತ್ತಿನ ಸರ್ಕಾರ, ಪ್ರಜಾತಂತ್ರ ಮೌಲ್ಯಕ್ಕೆ ಯಾವುದೇ ರೀತಿಯಲ್ಲಿಯೂ ಕಪ್ಪುಚುಕ್ಕೆ ಬರುವುದನ್ನು ಸಹಿಸುವುದಿಲ್ಲ. ನಿರಪರಾಧಿಗಳ ಮೇಲೆ ಆರೋಪಗಳು ಬಂದಾಗ, ಅವರು ನಿರಪರಾಧಿಗಳಾಗಿ ಹೊರಗೆ ಬರುವುದಕ್ಕೆ ಅವಕಾಶಗಳನ್ನು ಕಲ್ಪಿಸಿ ಕೊಡಬೇಕು. ಆ ಮಂತ್ರಿಗಳು ರಾಜೀನಾಮೆಯನ್ನು ಕೊಟ್ಟು ನಾವು ನಿರಪರಾಧಿಗಳೆಂದು ಘೋಷಣೆ ಆಗುವವರೆಗೆ ಮಂತ್ರಿ ಸ್ಥಾನದಲ್ಲಿ ಮುಂದುವರೆಯುವುದಿಲ್ಲ ಎನ್ನುವಂತಹ ಸತ್ಸಂಪ್ರದಾಯ ಹಾಕಿರುವುದನ್ನು ದಾಖಲು ಮಾಡಿಕೊಂಡು ಕೆಳಗಿನ ಮನೆಯಲ್ಲಿ ಈಗಾಗಲೇ ಎಲ್ಲ ವ್ಯವಸ್ಥೆಗಳನ್ನು ಮಾಡಿ ಸಮಿತಿಯನ್ನು ರಚನೆ ಮಾಡಲಾಗಿದೆ. ಆದ ಕಾರಣ, ಯಾವುದೇ ರೀತಿಯ ಚರ್ಚೆಗಳನ್ನು ಮುಂದುವರಿಸುವುದು ಸೂಕ್ತವಲ್ಲ ಸಮಿತಿಯ ವರದಿ ಬಂದ ತಕ್ಷಣ ಕೆಳಗಿನ ಮನೆಯಲ್ಲಿ ಅದಕ್ಕೆ ಬೇಕಾಗಿರುವಂತಹ ಕಾರ್ಯಯೋಜನೆಗಳನ್ನು ಯಾವ ರೀತಿಯಲ್ಲಿ ಹಮ್ಮಿಕೊಳ್ಳಬೇಕು, ಕರ್ನಾಟಕದ ವಿಧಾನ ಮಂಡಲದ ಘನತೆ ಗೌರವಗಳನ್ನು ಎತ್ತಿ ಹಿಡಿಯುವುದಕ್ಕೆ ಏನೇನು ಮಾಡಬೇಕು ಆ ಎಲ್ಲ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಸರ್ಕಾರ ಬದ್ಧವಾಗಿದೆ ಎನ್ನುವ ಭರವಸೆ ವಿಶ್ವಾಸವನ್ನು ಕೊಡುವಂತಹ ಪ್ರಯತ್ನವನ್ನು ಕೆಳಗಿನ ಮನೆಯಲ್ಲಿ

ಮಾಡಿದ್ದೇವೆ. ಅದನ್ನು ಸಕಾರಾತ್ಮಕವಾಗಿ ಮಾನ್ಯ ಸಭಾಧ್ಯಕ್ಷರು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಈ ವಸ್ತು, ಚರ್ಚೆಯ ವಸ್ತುವಲ್ಲ. ಈ ವಸ್ತು ಸದನ ಸಮಿತಿಯ ವಸ್ತುವಾಗಿರುವ ಕಾರಣ ಸದನ ಸಮಿತಿಯ ವರದಿ ಒಂದು ಚರ್ಚೆ ಆಗುವವರೆಗೆ ಯಾವುದೇ ಹಂತದಲ್ಲಿ ಇದರ ಬಗ್ಗೆ ಚರ್ಚೆ ಮಾಡುವುದು ಸೂಕ್ತವಲ್ಲ, ನಮ್ಮ ಪ್ರಜಾತಂತ್ರ ಮೌಲ್ಯಗಳನ್ನು ಎತ್ತಿ ಹಿಡಿಯಬೇಕು. ಈ ರೀತಿಯ ಕೆಲಸ ಕಾರ್ಯಗಳು ನಡೆಯಬಾರದು. ಇದರಿಂದಾಗಿ ಸಾರ್ವಜನಿಕ ವಲಯದಲ್ಲಿ ಜನ ಪ್ರತಿನಿಧಿಗಳು ಒಂದು ರೀತಿಯಲ್ಲಿ ಅಪಹಾಸ್ಯಕ್ಕೆ ಈಡಾಗುತ್ತಾರೆ. ಅಂತಹ ಕೆಲಸ ಆಗಬಾರದು. ಇದರ ಸತ್ಯಾಸತ್ಯತೆಗಳು ಹೊರಗೆ ಬರಬೇಕು ಎನ್ನುವ ಈ ಸದನದ ಹಿರಿಯರ ಮನಸ್ಸಿನ ಭಾವನೆಗಳು ಸರಿಯಾಗಿದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಈಗಾಗಲೇ ಸದನ ಸಮಿತಿಯ ರಚನೆ ಆಗಿರುವ ಕಾರಣ ಮತ್ತು ಅದು ಈಗಾಗಲೇ ಅಸ್ತಿತ್ವಕ್ಕೆ ಬಂದು ಸಂಬಂಧಪಟ್ಟವರಿಗೆ ನೋಟೀಸ್‌ಗಳನ್ನು ಕಳುಹಿಸಿಕೊಟ್ಟಿರುವ ಕಾರಣ, ಮುಂದಿನ ತನಿಖೆಗೆ ತೊಂದರೆ ಆಗುವ ಯಾವುದೇ ರೀತಿಯ ಚರ್ಚೆಗಳು ಯಾವುದೇ ಹಂತದಲ್ಲಿ ನಡೆಯಬಾರದು ಎನ್ನುವ ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡುವುದಕ್ಕೆ ನಾನು ಬಯಸುತ್ತಿದ್ದೇನೆ.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಆ ಭಾಗದ ಸ್ನೇಹಿತರಿಗೆ ನಾನು ಹೇಳುವುದು ಇಷ್ಟೆ. ನಮಗೂ ಈ ಬಗ್ಗೆ ಕಳಕಳಿ ಇದೆ. ಸದನದ ಮರ್ಯಾದೆ ಉಳಿಯಬೇಕು ಮತ್ತು ಈ ರಾಜ್ಯದ ಜನರಿಗೆ ಗೌರವನ್ನು ತರಬೇಕು. ಪ್ರಜಾ ಪ್ರತಿನಿಧಿಗಳಾಗಿರುವ ನಮಗೆ ಕೆಲವೊಂದು ನೀತಿ ನಡವಳಿಕೆಗಳು ಇರುತ್ತವೆ. ಆ ನೀತಿ ನಡವಳಿಕೆಗಳಿಗೆ ತಕ್ಕಂತೆ ನಾವು ನಡೆದುಕೊಂಡಿದ್ದೇವೆಯೇ ಇಲ್ಲವೇ ಎನ್ನುವ ನಿಟ್ಟಿನಲ್ಲಿ ನಾವು ನಮ್ಮ ಆತ್ಮ ಶೋಧನೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ನಿನ್ನೆ ನಡೆದಂತಹ ಘಟನೆಗೆ ಸೀಮಿತವಾಗಿ ನಾವು ಇಲ್ಲಿ ಮಾತನಾಡುವುದು ಸರಿಯಲ್ಲ. ಹಿಂದೆ ಕೂಡ ಈ ರೀತಿಯ ಘಟನೆಗಳು ನಡೆದಂತಹ ಸಂದರ್ಭದಲ್ಲಿ ಸಮಿತಿ ರಚನೆ

ಮಾಡಬೇಕು, ತನಿಖೆ ಆಗಬೇಕು, ಈ ಸದನಕ್ಕೆ ಗೌರವ ಬರಬೇಕು, ಮಂತ್ರಿಗಳಿಗೆ ಗೌರವ ಬರಬೇಕು ಎನ್ನುವ ನಿಟ್ಟಿನಲ್ಲಿ ಈ ಸರ್ಕಾರ ಏತಕ್ಕೋಸ್ಕರ ಚಿಂತನೆ ಮಾಡಲಿಲ್ಲ ಎನ್ನುವುದು ನಮ್ಮ ಪ್ರಶ್ನೆಯಾಗಿದೆ. ಸದನ ಪ್ರಾರಂಭವಾದಾಗಲೇ ಇಂತಹ ಒಂದು ಸಂದೇಶ ಬರಬೇಕಾಗಿತ್ತು. ಈ ಸದನಕ್ಕೆ ಅಪಮಾನವಾಗಿದೆ ಎನ್ನುವುದು ನಮ್ಮ ನೋವಾಗಿದೆ. ಕೆಳಗಿನ ಮನೆಯಾಗಿರಬಹುದು ಅಥವಾ ಮೇಲಿನ ಮನೆಯಾಗಿರಬಹುದು ಈ ಸದನಕ್ಕೆ ವಿಶೇಷವಾಗಿರುವಂತಹ ಸ್ಥಾನಮಾನಗಳಿವೆ ಮತ್ತು ಇತಿಹಾಸವಿದೆ. ನಿನ್ನೆಯವರೆಗೆ ಅವರುಗಳು ಸಚಿವರಾಗಿ ಈ ಸದನದಲ್ಲಿ ಕುಳಿತಿದ್ದರು. ನಿನ್ನೆ ನಾವು ಸೇಂಟ್ ಮೇರಿಸ್‌ನಲ್ಲಿ ನಡೆದಂತಹ ಘಟನೆಯ ಬಗ್ಗೆ ಮತ್ತು ತೊಗರಿಬೇಳೆಯ ಬೆಲೆ ಕಡಿಮೆಯಾಗಿರುವ ಬಗ್ಗೆ ಮತ್ತು ಶ್ರೀಮತಿ ಭಾರತಿ ಶೆಟ್ಟಿಯವರು ಮಾಡಿದಂತಹ ಮಹಿಳೆಯರ ಮೇಲೆ ನಡೆಯುತ್ತಿರುವಂತಹ ಲೈಂಗಿಕ ಕಿರುಕುಳದ ಬಗ್ಗೆ ಪ್ರಸ್ತಾಪ ಮಾಡಿದ್ದರು. ಅದರ ಮೇಲೆ ಬಹಳ ಗಂಭೀರವಾಗಿರುವಂತಹ ಚರ್ಚೆ ನಡೆದಿತ್ತು. ಇಂತಹ ವಿಚಾರಗಳ ಬಗ್ಗೆ ಇಲ್ಲಿ ಚರ್ಚೆಯಾದಾಗ ಈ ಸದನದಲ್ಲಿ ಹಾಜರಿದ್ದು ಉತ್ತರಗಳನ್ನು ಹೇಳಿದಂತಹ ಸಚಿವರು ಕೆಳಮನೆಗೆ ಹೋಗಿ ಆ ರೀತಿ ನಡೆದುಕೊಂಡಿರುವುದು ಸರಿಯೇ ಎನ್ನುವುದು ನಮ್ಮ ಮುಂದಿರುವಂತಹ ಪ್ರಶ್ನೆಯಾಗಿದೆ. ಕೆಳಮನೆಯಲ್ಲಿ ಬರಗಾಲದ ಬಗ್ಗೆ ಚರ್ಚೆ ನಡೆಯುತ್ತಿದ್ದ ಸಂದರ್ಭದಲ್ಲಿ ಒಂದು ಸರ್ಕಾರದ ಜವಾಬ್ದಾರಿಯುತ ಸಚಿವರಾಗಿ ಆ ರೀತಿ ನಡೆದುಕೊಂಡಿರುವುದು ಸರಿಯೇ ಎನ್ನುವುದು ನಮ್ಮ ಪ್ರಶ್ನೆಯಾಗಿದೆ. ವೈಯಕ್ತಿಕವಾಗಿ ನಮಗೆ ಯಾರಿಗೂ ಅವರುಗಳ ಮೇಲೆ ದ್ವೇಷವಿಲ್ಲ.

(ಗೊಂದಲ)

**ಶ್ರೀ ಎಸ್.ಎ. ರಾಮದಾಸ್ (ವೈದ್ಯಕೀಯ ಶಿಕ್ಷಣ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಸ್ಪಷ್ಟೀಕರಣವನ್ನು ಕೇಳುತ್ತಿದ್ದಾರೆಯೇ ಅಥವಾ ಯಾವ ವಿಚಾರದ ಬಗ್ಗೆ ಮಾತನಾಡುತ್ತಿದ್ದಾರೆ? ಸದನ ಸಮಿತಿಯನ್ನು ರಚನೆ ಮಾಡಿ ತನಿಖೆ ಮಾಡಲು ವಹಿಸಿಕೊಟ್ಟ ಮೇಲೆ ಅದರ ಬಗ್ಗೆ ಚರ್ಚೆ ಮಾಡುವುದು ಸೂಕ್ತವಲ್ಲ.

(ಗೊಂದಲ)

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಅವರಿಗೆ ಮಾತನಾಡಲು ಬಿಡಿ. ಅವರು ಮಾತನಾಡುವಾಗ ಯಾಕೆ ಅಡ್ಡಿಪಡಿಸುತ್ತಿದ್ದೀರಿ?

(ಗೊಂದಲ)

**ಶ್ರೀ ಬಸವರಾಜ ಬೊಮ್ಮಾಯಿ:-** ಸನ್ಮಾನ್ಯ ಸಭಾಪತಿಯವರೇ, ಸದನ ಸಮಿತಿ ರಚನೆ ಆಗಿರುವುದರಿಂದ ಅದರ ಬಗ್ಗೆ ವಿಶ್ಲೇಷಣೆ ಮಾಡುವುದು ಸಹ ತಪ್ಪಾಗುತ್ತದೆ.

(ಗೊಂದಲ)

**ಶ್ರೀಮತಿ ಮೋಟಮ್ಮ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳ ಮಾತಿಗೆ ಬೆಲೆ ಕೊಟ್ಟು ನಮ್ಮ ಸ್ಥಾನಗಳಿಗೆ ಮರಳಿದ್ದೇವೆ.

**ಸಭಾಪತಿಯವರು:-** ಆ ವಿಷಯದ ಬಗ್ಗೆ ಅವರು ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ನಮ್ಮ ಆಕ್ಷೇಪವಿದೆ.

(ಗೊಂದಲ)

**ಶ್ರೀಮತಿ ಮೋಟಮ್ಮ:-** ಸನ್ಮಾನ್ಯ ಸಭಾಪತಿಯವರೇ, ನಾವು ಇಲ್ಲಿ ಯಾರ ಮೇಲೂ ಆಪಾದನೆ ಮಾಡಬೇಕು ಅಥವಾ ದ್ವೇಷ ಸಾಧಿಸಬೇಕೆಂದು ಈ ಚರ್ಚೆಗೆ ಅವಕಾಶವನ್ನು ಕೇಳುತ್ತಿಲ್ಲ. ಈ ಸದನದ ಗೌರವ ಮತ್ತು ಪ್ರಜಾಪ್ರತಿನಿಧಿಗಳ ಗೌರವ ಈ ರಾಜ್ಯದಲ್ಲಿ ಉಳಿಯಬೇಕು ನಮ್ಮ ರಾಜ್ಯದ ಆರು ಕೋಟಿ ಜನರು ಇದರ ಬಗ್ಗೆ ಪ್ರಶ್ನೆ ಮಾಡುತ್ತಾರೆ ಮತ್ತು ವಿಚಾರ ಮಾಡುತ್ತಾರೆ ಅದಕ್ಕಾಗಿ ಇದರ ಬಗ್ಗೆ ಚರ್ಚೆ ಆಗಬೇಕೆಂದು ನಾವು ಕೇಳಿಕೊಳ್ಳುತ್ತಿದ್ದೇವೆ. ನಾವು ಪ್ರಸ್ತಾಪ ಮಾಡುವ ಸಂದರ್ಭದಲ್ಲಿ ಯಾಕೆ ಆ ಭಾಗದ ಸದಸ್ಯರು ನಮಗೆ ಅಡೆತಡೆಗಳನ್ನು ಮಾಡಬೇಕು ಎನ್ನುವುದು ನಮ್ಮ ಪ್ರಶ್ನೆಯಾಗಿದೆ.

(ಗೊಂದಲ)

**ಶ್ರೀ ಬಸವರಾಜ ಬೊಮ್ಮಾಯಿ:-** ಸನ್ಮಾನ್ಯ ಸಭಾಪತಿಯವರೇ, ಮಂತ್ರಿಗಳು ರಾಜೀನಾಮೆಯನ್ನು ಕೊಟ್ಟಿದ್ದಾರೆ. ಹಿಂದೆ ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿ ಇದ್ದಾಗಲೂ ಸಹ ಲೈಂಗಿಕ ಹಗರಣಗಳು ನಡೆದಂತಹ ಸಂದರ್ಭದಲ್ಲಿ ಅಂದಿನ ಮಂತ್ರಿಗಳು ರಾಜೀನಾಮೆಯನ್ನು ಕೊಟ್ಟಿದ್ದಾರೆ. ಹೀಗಿರುವಾಗ ಇವರಿಗೆ ಮಾತನಾಡುವುದಕ್ಕೆ ಯಾವ ನೈತಿಕ ಹಕ್ಕಿದೆ ಎನ್ನುವುದು ನಮ್ಮ ಪ್ರಶ್ನೆಯಾಗಿದೆ.

(ಗೊಂದಲ)

**ಶ್ರೀಮತಿ ಮೋಟಮ್ಮ:-** ತಾವು ಉತ್ತರ ಪ್ರದೇಶಕ್ಕೆ ಹೋಗಿ ಕೇಳಿ, ಇಲ್ಲಿ ಕೇಳಬೇಡಿ. ತಪ್ಪು ಮಾಡಿದವರಿಗೆ ಶಿಕ್ಷೆಯಾಗಿದೆ. ಅವರನ್ನು ಪಕ್ಷದಿಂದ ಹೊರಗೆ ಹಾಕಲಾಗಿದೆ. ತಾವು ಉತ್ತರ ಪ್ರದೇಶಕ್ಕೆ ಹೋಗಿ ಮಾತನಾಡಿ. ಇಲ್ಲಿ ಏಕೆ ಮಾತನಾಡುತ್ತೀರಾ?

**ಶ್ರೀ ವೀರಣ್ಣ ಮತ್ತೀಕಟ್ಟಿ:-** ಮಾನ್ಯ ಸಭಾಪತಿಗಳೆ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ನಾವು ಸುಮ್ಮನೆ ಕುಳಿತು ಕೇಳಿದ್ದೇವೆ. ಈಗ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಏಕೆ ಮಧ್ಯೆ ಮಾತನಾಡಬೇಕು. ಇದು ಸರಿಯಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:-** ನಿಮ್ಮವರು ಸಿಕ್ಕಿಹಾಕಿಕೊಂಡು ರಾಜೀನಾಮೆ ಕೊಟ್ಟಿರುವಂತಹ ಉದಾಹರಣೆಗಳೂ ಇವೆ.

**ಶ್ರೀ ಆರ್.ವಿ. ವೆಂಕಟೇಶ್:-** ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಅಷ್ಟು ಇವರಿಗೆ ಕನಿಕರವಿಲ್ಲ.

**ಸಭಾಪತಿಯವರು:-** ಕನಿಕರ ಏನು ಬೇಡ. ಅವರು ವಿರೋಧ ಪಕ್ಷದ ನಾಯಕರು ಅಷ್ಟೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಗಳೆ, I am on a Point of Order. ಇಲ್ಲಿ ಅದನ್ನು ಚರ್ಚೆ ಮಾಡಲು ಅವಕಾಶವೇ ಇಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಗಳೆ, ನಮಗೆ ನೈತಿಕ ಹಕ್ಕು ಇದೆ, ಮೂರು ಜನ ಮಂತ್ರಿಗಳು ರಾಜೀನಾಮೆಯನ್ನು ಕೊಟ್ಟಿದ್ದಾರೆ. ಈ ವಿಷಯವನ್ನು ತನಿಖೆ ಮಾಡಿ ವರದಿ ಕೊಡಲು ಸಭಾಧ್ಯಕ್ಷರು ಸದನ ಸಮಿತಿಯನ್ನು ಮಾಡಿದ್ದಾರೆ. ನಮಗೆ ನೈತಿಕ ಹಕ್ಕು ಇದೆ, ಇವರಿಗೆ ನೈತಿಕ ಹಕ್ಕು ಇಲ್ಲ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಗಳೆ, ಇವರ ವರ್ತನೆ ಬಗ್ಗೆ ಏನು ಹೇಳುತ್ತೀರಿ? ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವ ಸಮಯದಲ್ಲಿ ನಾವು ಶಾಂತವಾಗಿ ಕೇಳಿದ್ದೇವೆ, ಈಗ ವಿರೋಧ ಪಕ್ಷದ ನಾಯಕಿಯವರು ಮಾತನಾಡುವುದನ್ನು ಅವರು ಕೇಳಬೇಕು.

(ಗೊಂದಲ)

**ಶ್ರೀ ಡಿ.ವಿ. ಸದಾನಂದಗೌಡ (ಮಂತ್ರಿಗಳು):-** ಮಾನ್ಯ ಸಭಾಪತಿಗಳೆ, ಪ್ರತಿಪಕ್ಷದ ನಾಯಕರ ಬಗ್ಗೆ ನಮಗೆ ಗೌರವವಿದೆ. ಇದರಲ್ಲಿ ಎರಡು ಮಾತಿಲ್ಲ. ಆದರೆ ವಿಪಕ್ಷ ನಾಯಕರು ನಿನ್ನೆಯ ವಿಚಾರಕ್ಕೆ ಸೀಮಿತವಾಗಿ ಮಾತ್ರ ಮಾತನಾಡಬೇಕು. ಅದನ್ನು ಬಿಟ್ಟು ಹಿಂದಿನದೆಲ್ಲವನ್ನು ತಾವು ಕೆದಕುತ್ತಾ ಹೋದರೆ ಚರ್ಚೆ ಮುಗಿಯುವುದೇ ಇಲ್ಲ. ನನಗೆ ಅನ್ನಿಸಿದ್ದು ನಿನ್ನೆಯ ವಿಚಾರಕ್ಕೆ ಸಿಮೀತವಾಗಿ ಚರ್ಚೆಯನ್ನು ಮಾಡಿದರೆ ಅದು ಸುಲಲಿತವಾಗುತ್ತದೆ. ಆದರೆ ತಾವು ಅದನ್ನು ಹೊರತುಪಡಿಸಿ ಹಿಂದೆ ಸಾವಿರಾರು ವಿದ್ಯಮಾನಗಳು ನಡೆದಿವೆ ಅವೆಲ್ಲವನ್ನು ಚರ್ಚೆಗೆ ತೆಗೆದುಕೊಳ್ಳುತ್ತೀರಾ, ಹಿಂದೆ ನಿಮ್ಮಲ್ಲಿಯು ಘಟನೆಗಳು ನಡೆದಿವೆ. ಅದರ ಎಲ್ಲ ವಿವರ ನನ್ನ ಹತ್ತಿರವಿದೆ. ಇದನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಇದು ನಮ್ಮ ಪ್ರಜಾತಂತ್ರ ವ್ಯವಸ್ಥೆಯ ಗೌರವದ ಪ್ರಶ್ನೆ. ನಡೆದಿರುವುದನ್ನು ಹೇಳಿದರೆ ತಾವು ನಂಬಲಿಕ್ಕಿಲ್ಲ. ನಿನ್ನೆ ರಾತ್ರಿ ನಾನು ಕಾರ್ಯಕ್ರಮದ ನಿಮಿತ್ತ ಕಡೂರಿಗೆ ಹೋಗಿದ್ದೆ. ರಾತ್ರಿ ಹನ್ನೆರಡುವರೆ ಗಂಟೆಗೆ ಬಂದೆ. ರಾತ್ರಿಯೇ ನಡೆದಿರುವ ಎಲ್ಲ ವಿದ್ಯಮಾನಗಳನ್ನು ತಿಳಿದುಕೊಳ್ಳುವ ಪ್ರಯತ್ನಪಟ್ಟೆ. ಬೆಳಗ್ಗೆ ಆರುವರೆ ಗಂಟೆಗೆ ಮಂತ್ರಿಗಳನ್ನು ಕರೆಯಿಸಿದೆ. ಮಂತ್ರಿಗಳು ಬಂದ ತಕ್ಷಣ ಈ ಸಂಬಂಧವಾಗಿ ಏನು ಮಾಡಬೇಕು ಎನ್ನುವ

ವಿಶ್ಲೇಷಣೆ ಮಾಡಿ ಎಂಟು ಗಂಟೆಗೆ ಅವರಿಂದ ರಾಜೀನಾಮೆಯನ್ನು ಪಡೆಯಲಾಯಿತು. ಈ ಪ್ರಜಾತಂತ್ರ ವ್ಯವಸ್ಥೆಗೆ ಗೌರವ ಕೊಡುವಂತಹ ಕೆಲಸಕಾರ್ಯಗಳನ್ನು ನಾನು ನಿನ್ನೆ ಮಾಡಿದ್ದೇನೆ. ಈ ಮಾತನ್ನು ನಾನು ಅಮ್ಮನಿಗೆ ಏಕೆ ಹೇಳುತ್ತಿದ್ದೇನೆ ಎಂದರೆ, ಅವರು ಈ ಚರ್ಚೆಯನ್ನು ಮಾಡಲಿ, ಅವರು ಏನು ಕ್ಲ್ಯಾರಿಫಿಕೇಶನ್ ಕೇಳುತ್ತಾರೆ ಅದನ್ನು ಹೇಳಲು ಸರ್ಕಾರ ಬದ್ಧವಾಗಿದೆ. ಏಕೆಂದರೆ ನಾವು ಪಲಾಯನವಾದ ಮಾಡುವುದಿಲ್ಲ.

ಎರಡನೆಯದಾಗಿ, ಈ ಚರ್ಚೆಯಲ್ಲಿ ಪ್ರಜಾತಂತ್ರ ಮೌಲ್ಯಗಳನ್ನು ಎತ್ತಿಹಿಡಿಯಲು ಬೇಕಾದಂತಹ ವ್ಯವಸ್ಥೆಯನ್ನು ನಾವೆಲ್ಲರು ಸೇರಿ ಮಾಡಬೇಕಾಗಿದೆ. ಇದು ಕೇವಲ ಆಡಳಿತ ಪಕ್ಷ ಮಾಡುವಂತಹದ್ದಲ್ಲ, ವಿರೋಧ ಪಕ್ಷ-ಆಡಳಿತ ಪಕ್ಷದ ಎಲ್ಲರೂ ಸೇರಿ ಕೆಲಸಕಾರ್ಯಗಳನ್ನು ಮಾಡಬೇಕಾಗಿದೆ. ಆದರೆ ಚರ್ಚೆಯ ವ್ಯಾಪ್ತಿ ಸ್ವಲ್ಪ ಹೊರಗೆ ಹೋದಾಗ, ಆ ಚರ್ಚೆ ಕೇವಲ ಯಾವುದನ್ನೊ ಚುಚ್ಚಲು, ಯಾವುದೊ ಒಂದು ರೀತಿ provocation ಮಾಡಲು ಚರ್ಚೆಗಳು ಆಗಬಾರದು. ದಯಮಾಡಿ ಇದೊಂದು ಗೌರವದ ಪ್ರಶ್ನೆಯಾಗಿರುವುದರಿಂದ ಎಲ್ಲರೂ ಸಹಕರಿಸಬೇಕು. ಇಲ್ಲದಿದ್ದರೆ ನಾನು ಪ್ರಾರಂಭದಲ್ಲಿಯೇ ಇದನ್ನು ಚರ್ಚೆ ಮಾಡಲು ಸ್ವೀಕಾರ ಮಾಡುವುದಿಲ್ಲ, ಮಾಡಬಾರದು ಎಂದು ನಾನು ಮಾನ್ಯ ಸಭಾಪತಿಗಳಲ್ಲಿ ಕೇಳುತ್ತಿದೆ. ಇದರ ಚರ್ಚೆ ಅಗತ್ಯವಿಲ್ಲ, ಕ್ಲ್ಯಾರಿಫಿಕೇಶನ್ ಕೇಳುವ ಅಗತ್ಯವಿಲ್ಲ. ಏಕೆಂದರೆ ಕೆಳಮನೆಯಲ್ಲಿ ಇದರ ತನಿಖೆಗೆ ಈಗಾಗಲೇ ಒಂದು ವೇದಿಕೆ ಸಿದ್ಧವಾಗಿದೆ. ತನಿಖೆಗೆ ವೇದಿಕೆ ಸಿದ್ಧವಾದ ಮೇಲೆ ಇದನ್ನು ಚರ್ಚೆ ಮಾಡುವುದು ಎಷ್ಟು ಸೂಕ್ತ ಎಂದು ನಾನು ಪ್ರಶ್ನೆ ಮಾಡಬಹುದಿತ್ತು. ಆದರೆ ನಾನು ಪ್ರಶ್ನೆ ಮಾಡಲಿಲ್ಲ. ಏಕೆಂದರೆ ನಿಮ್ಮಿಂದ ಏನಾದರು ಒಳ್ಳೆಯ ಸಲಹೆಗಳು ಬಂದರೆ ತನಿಖೆ ಸಂದರ್ಭದಲ್ಲಿ ಸಹಕಾರಿಯಾಗಲಿ ಎನ್ನುವ ಸದುದ್ದೇಶದಿಂದ ಆ ಕೆಲಸಕಾರ್ಯಗಳನ್ನು ಮಾಡಿದೆ. ಆದರೆ ಅದನ್ನು ಬಿಟ್ಟು ನಿನ್ನೆ ಮಲ್ಪೆಯಲ್ಲಿ ಹೀಗೆ ನಡೆಯಿತು, ಮೊನ್ನೆ ಅಲ್ಲಿ ಏನೊ ಆಯಿತು ಇದನ್ನೇ ಹೇಳುತ್ತಿದ್ದೀರಿ. ಇವತ್ತು ಬೆಳಗ್ಗೆ ನನಗೆ ಒಂದು ಪಟ್ಟಿಯನ್ನು ತಂದು ಕೊಟ್ಟಿದ್ದಾರೆ. ಅಮ್ಮಾ ನಾನು ಅದನ್ನು ನಿಮಗೆ ತೋರಿಸಲಿಲ್ಲ. ಬೇರೆ-ಬೇರೆ

ಪಕ್ಷಗಳ 22 ಜನರು ಯಾವ-ಯಾವ ಸೆಕ್ಸ್ ಸ್ಕ್ಯಾಂಡಲ್‌ನಲ್ಲಿ ಸಿಕ್ಕು ಹಾಕಿಕೊಂಡಿದ್ದಾರೆ ಅವರಿಗೆ ಏನು ಶಿಕ್ಷೆಯಾಗಿದೆ, ಯಾರ‍್ಯಾರು ಇದರಲ್ಲಿ ಇದ್ದಾರೆ ಎನ್ನುವುದೆಲ್ಲವು ಇದೆ. ಅದನ್ನು ತಮಗೆ ತೋರಿಸಿದರೆ ತಾವು ಸುಮ್ಮನಾಗಬಹುದು. ಆದರೆ ಇದನ್ನು ತೋರಿಸಬಾರದು, ಇದರ ಬಗ್ಗೆ ನಾನು ಮಾತನಾಡಬಾರದು. ನಿಮ್ಮ ಮೇಲೆ ಗೌರವದಿಂದ ನಿನ್ನೆಯ ವಿಚಾರದಲ್ಲಿ ಮನನೊಂದು ಮಾತನಾಡುತ್ತಿದ್ದೇನೆ, ಇದು ಆಗಬಾರದಿತ್ತು. ನಾನು ತಮ್ಮನ್ನು ಕೇಳುತ್ತೇನೆ, ನಿಮ್ಮ ಮೊಬೈಲ್‌ಗೆ ಒಂದು message ಬರುತ್ತದೆ, ಯಾರೇ ಆಗಲಿ message ಬಂದತಕ್ಷಣ ಅದನ್ನು ಓಪನ್ ಮಾಡುತ್ತಾರೆ. ಅದನ್ನು ಓಪನ್ ಮಾಡಿದ ನಂತರವೇ ಅದರಲ್ಲಿ ಏನು ಇದೆ ಎನ್ನುವುದು ಗೊತ್ತಾಗುತ್ತದೆ. ಆದರೆ ಈ ಕೃತ್ಯವನ್ನು ನಾನು ಸಮರ್ಥನೆ ಮಾಡುತ್ತಿದ್ದೇನೆ ಎಂದು ಅಲ್ಲ. ವಿಧಾನಸಭೆಯಲ್ಲಿ ಕುಳಿತುಕೊಂಡು ಆ ರೀತಿ message open ಮಾಡಬಾರದು, ಮೊಬೈಲ್ ಉಪಯೋಗಿಸಬಾರದು ಎನ್ನುವ ಎಲ್ಲ ಅರಿವು ನನಗೆ ಇದೆ. ಆದರೆ ದಾರಿ ತಪ್ಪಿಸುವ ರೀತಿಯಲ್ಲಿ ಈ ಚರ್ಚೆಗಳು ಹೋದರೆ, ನಾನು ಹೇಳುತ್ತೇನೆ ಇದು ಒಂದು ಹಂತವನ್ನು ದಾಟಿ ಹೋಗುತ್ತಿದೆ, ಇದನ್ನು ಚರ್ಚೆ ಮಾಡಲು ಅವಕಾಶಕೊಡುವ ಅವಶ್ಯಕತೆ ಇಲ್ಲ. ಆದರೆ ನಿಯಮಗಳ ಒಳಗೆ ಚರ್ಚೆ ಮಾಡಬಹುದು. ಇವರು ಯಾವುದೇ ನಿಯಮದ ಅಡಿಯಲ್ಲಿ ಚರ್ಚೆಗೆ ಅವಕಾಶವನ್ನು ಕೇಳಿರುವುದಿಲ್ಲ. ಆದರೆ ನಾವು ನಿಯಮದ ವ್ಯಾಪ್ತಿಯನ್ನು ಮೀರಿ ಈ ಪ್ರಜಾತಂತ್ರ ವ್ಯವಸ್ಥೆಯ ಮೌಲ್ಯವನ್ನು, ಕರ್ನಾಟಕ ವಿಧಾನ ಮಂಡಲದ ಗೌರವವನ್ನು ಉಳಿಸಬೇಕು ಎನ್ನುವ ಏಕೈಕ ಉದ್ದೇಶದಿಂದ ಮಾತನಾಡುತ್ತಿದ್ದೇನೆಯೇ ಹೊರತು ಇದರಲ್ಲಿ ಯಾವುದೇ ಅನ್ಯಥಾ ಇಲ್ಲ. ಅಮ್ಮಾ ತಾವು ದಯಮಾಡಿ ಟ್ರ್ಯಾಕ್‌ನಲ್ಲಿ ಏನು ಹೇಳಬೇಕು ಹೇಳಿ. ಅದಕ್ಕೆ ನಾನು ಉತ್ತರ ಕೊಡುತ್ತೇನೆ.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ಮುಖ್ಯಮಂತ್ರಿಗಳು ನಮಗೆ ಅಣ್ಣನಿದ್ದ ಹಾಗೆ. ತಾವು ಹಿರಿಯಣ್ಣನಾಗಿ ಏನು ಹೇಳಿದ್ದೀರಿ ಹಾಗೆ ಟ್ರ್ಯಾಕ್ ಬಿಟ್ಟು ನಾವು ಹೋಗುವುದಿಲ್ಲ. ಏಕೆ ಈ ಮಾತನ್ನು ಹೇಳಿದೆ ಎಂದರೆ, ಸಚಿವರು ಬೆಳಗ್ಗೆ

ಬಂದು ನಮ್ಮಿಂದ ಖಂಡಿತ ದೊಡ್ಡ ತಪ್ಪಾಗಿಲ್ಲ, ಆದರೂ ಕೂಡ ನಾವು ರಾಜೀನಾಮೆಯನ್ನು ಕೊಡುತ್ತೇವೆ ಎಂದು ಹೇಳಿದರು ಎಂದು ಇವರು ಮಾತನಾಡುತ್ತಾ ಹೇಳಿದರು.

(ಗೊಂದಲ)

**ಶ್ರೀ ಬಸವರಾಜ ಬೊಮ್ಮಾಯಿ:–** ಆ ರೀತಿ ಹೇಳಿರುವುದಿಲ್ಲ.

(ಗೊಂದಲ)

**ಶ್ರೀಮತಿ ಮೋಟಮ್ಮ:–** ಅದೇ ರೀತಿ ಹೇಳಿದರು. ಬೇಕಾದರೆ ರೆಕಾರ್ಡ್ಸ್ ತೆಗೆದು ನೋಡಿ. ಅದಕ್ಕಾಗಿಯೇ ನಾನು ಬರೆದುಕೊಂಡಿದ್ದೇನೆ. ಸಚಿವರಾಗಿ ಇವರಿಗೆ ಅಷ್ಟು seriousness ಇಲ್ಲವೆ? ಸದನದಲ್ಲಿ ಬರಗಾಲದ ಬಗ್ಗೆ ಚರ್ಚೆ ಮಾಡುತ್ತಿರುವ ಸಂದರ್ಭದಲ್ಲಿ ಯಾರೋ message ಕಳುಹಿಸಿದರು ಎಂದು ಅದನ್ನು on ಮಾಡಿ ವಿಧಾನಸಭೆಯಲ್ಲಿ ಕುಳಿತು ಅದನ್ನು ನೋಡಬೇಕೇ ಎನ್ನುವುದು ಇಲ್ಲಿ ಇರುವ ಪ್ರಶ್ನೆ. ಇದು ದೊಡ್ಡ ತಪ್ಪಲ್ಲವೇ? ಈ ವಿಷಯಗಳನ್ನು ಮಾತನಾಡಲು ನಮಗೆ ಅವಕಾಶವನ್ನು ಕೊಡಬೇಕು. ಇಂತಹ ಘಟನೆಗಳು ನಡೆಯಬಾರದು ಎನ್ನುವುದೇ ನಮ್ಮ ನಿವೇದನೆ. ಮಾನ್ಯ ಮುಖ್ಯಮಂತ್ರಿಗಳು ದೊಡ್ಡಣ್ಣನಾಗಿ ಉತ್ತರವನ್ನು ಹೇಳಿದ್ದಾರೆ ನಾನು ತಮ್ಮ ಸ್ಪಿರಿಟ್‌ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ.

(ಗೊಂದಲ)

**ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿ:–** ಸರ್ಕಾರವು ಸ್ಪಷ್ಟವಾದ ನಿರ್ಧಾರ ತೆಗೆದುಕೊಂಡಿರುವ ಹಿನ್ನೆಲೆಯಲ್ಲಿ, ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಶ್ನೋತ್ತರ ನಡೆಸಲು ಅವಕಾಶ ಮಾಡಿಕೊಡಬೇಕು. ಸದನವನ್ನು ನಡೆಸಲು ಅವಕಾಶ ಮಾಡಿಕೊಡಿ. ತಾವು ಇದೇ ರೀತಿ ಮಾತುಗಳನ್ನು ಮುಂದುವರೆಸಿದರೆ ಬೇರೆ ಯಾವುದೇ ಉದ್ದೇಶವನ್ನು ಈಡೇರಿಸಿಕೊಳ್ಳಲು ಈ ಸದನವನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ ಎಂದು ಜನ ಅಂದುಕೊಳ್ಳುತ್ತಾರೆ.

(ಗೊಂದಲ)

**ಶ್ರೀಮತಿ ಮೋಟಮ್ಮ:-** ನೀವೇ ಬೆಳಗ್ಗೆ mislead ಮಾಡಿರೋದು. ಯಾವ ಘಟನೆಗಾಗಿ ಮೂರು ಜನ ಸಚಿವರು ರಾಜೀನಾಮೆಯನ್ನು ಕೊಟ್ಟರು ಎನ್ನುವುದನ್ನು ತಾವು ಹೇಳಬೇಕಾಗಿತ್ತು.

(ಗೊಂದಲ)

**ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿ:-** ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಅದರ ಬಗ್ಗೆ ಹೇಳಿದ್ದಾರೆ, ಬೆಳಗ್ಗೆ ಒಂದು ಹೇಳಿಕೆಯನ್ನು ಮಾಡಲಾಗಿದೆ.

(ಗೊಂದಲ)

**Capt. GANESH KARNIK:-** Sir, I am on Point of Order.

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಮಾಡಿದ್ದಾರೆ. ಮತ್ತು ಸದನದಲ್ಲಿ ಒಂದು ಮಾತನ್ನು ಅವರು ಹೇಳಿದರು. ಈ ವಿಷಯದ ಚರ್ಚೆ ಮಾಡಬೇಕು ಎನ್ನುವ ವಿರೋಧ ಪಕ್ಷದ ನಾಯಕರ ಮತ್ತು ಗೌರವಾನ್ವಿತ ಸದಸ್ಯರ ಬೇಡಿಕೆ, ನಾವೇ ಮಾಡಿಕೊಂಡಿರುವಂತಹ Rules and Regulations ನಲ್ಲಿ ಬರುವುದಿಲ್ಲ. ಆದರೂ ವಿಷಯದ ಗಾಢತೆಯನ್ನು ನಾನು ಮನಗಂಡು ಸೀಮಿತವಾಗಿ ಅಷ್ಟೆ ವಿಷಯವನ್ನು ಪ್ರಸ್ತಾಪ ಮಾಡುವುದಾದರೆ, ಅದನ್ನು ಪ್ರಸ್ತಾಪ ಮಾಡಲು ಸಭಾಪತಿಯವರು ಅವಕಾಶ ಕೊಟ್ಟರೆ ಚರ್ಚೆಗೆ ನಾನು ಒಪ್ಪಿಕೊಳ್ಳುತ್ತೇನೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಮಾನ್ಯ ಗಣೇಶ್ ಕಾರ್ಣಿಕ್‌ರವರು ಇದು ಪಾಯಿಂಟ್ ಆಫ್ ಆರ್ಡರ್ ಆಗುತ್ತದೆ ಎಂದು ಹೇಳುತ್ತಿದ್ದಾರೆ. ಅವರು ಹೇಳುವುದು ಸರಿ ಇದೆ. ಈ ಚರ್ಚೆ ಯಾವುದೇ ಕಾನೂನಿನ ಅಡಿಯಲ್ಲಿ ಚರ್ಚೆ ಮಾಡಲು ಬರುವುದಿಲ್ಲ. ನಾನು ಎಲ್ಲಾ ಪುಸ್ತಕವನ್ನು ತಿರುವಿ ಹಾಕಿದ್ದೇನೆ. ಇದಕ್ಕೆ ಎರಡು ಕಾರಣಗಳು, ಒಂದು ನನಗೆ ಯಾವುದೇ ರೀತಿಯ ನೋಟಿಸ್ ಬಂದಿರುವುದಿಲ್ಲ. ನೋಟಿಸ್ ಬಂದಿದ್ದರೆ ಅದರ ಮೇಲೆ ನಾನು ತೀರ್ಮಾನ ಮಾಡಬಹುದಾಗಿತ್ತು. ನಿಯಮ 324 ಇದು ನಾವೇ ಮಾಡಿಕೊಂಡಿರುವಂತಹ ಕಾನೂನು. ಅದರ ಅಡಿಯಲ್ಲಿ

ಮಂತ್ರಿಗಳು ಹೇಳಿಕೆ ಮಾಡಲು ಕೇಳಿದರು. ನಾನು ಅದಕ್ಕೆ ಅನುಮತಿಯನ್ನು ಕೊಟ್ಟಿದ್ದೆ. ಅವರು ಹೇಳಿಕೆ ಮಾಡಿದ್ದಾರೆ. ನಿಯಮ 324ರಲ್ಲಿ ಚರ್ಚೆಗೆ ಅವಕಾಶವಿಲ್ಲ. ಅಲ್ಲಿ ಕ್ಲ್ಯಾರಿಫಿಕೇಶನ್ ಕೇಳಲು ಅವಕಾಶವಿದೆ, ವಿರೋಧ ಪಕ್ಷದ ಇಬ್ಬರು ಸದಸ್ಯರು ಅದನ್ನು ಬೆಳಗ್ಗೆ ಕೇಳಿದ್ದೀರಿ. ಅದಕ್ಕೆ ಉತ್ತರ ಕೊಡಿ ಎಂದು ಮಂತ್ರಿಗಳಿಗೆ ನಾನು ಹೇಳಿದೆ. ಅಷ್ಟಕ್ಕೆ ಅವರು ಉತ್ತರವನ್ನು ಕೊಟ್ಟಿದ್ದಾರೆ. ಅವರು ಹೇಳಿರುವುದು ನನಗೆ ನೆನಪಿದೆ, ಬೇಕಾದರೆ ರೆಕಾರ್ಡ್ಸ್ ತೆಗೆದು ಇನ್ನೊಮ್ಮೆ ನೋಡೋಣ. ವಿರೋಧ ಪಕ್ಷದವರು ಮಂತ್ರಿಗಳು ರಾಜೀನಾಮೆಯನ್ನು ಕೊಟ್ಟಿದ್ದಾರೆ ಎಂದು ಹೇಳಿದ್ದೀರಿ, ಆದರೆ ಏಕೆ ರಾಜೀನಾಮೆಯನ್ನು ಕೊಟ್ಟಿದ್ದಾರೆ ಎನ್ನುವುದನ್ನು ಹೇಳಿ ಎಂದು ಕೇಳಿದ್ದಾರೆ. ಅದಕ್ಕೆ ಸರ್ಕಾರ ಉತ್ತರ ಹೇಳುವುದಾದರೆ ಹೇಳಬಹುದು. ಇಷ್ಟು ಬಿಟ್ಟರೆ ಈ ವಿಷಯದಲ್ಲಿ ಬೇರೆ ಚರ್ಚೆ ಮಾಡಲು ಏನು ಉಳಿದಿರುವುದಿಲ್ಲ. ಸಚಿವರು ಇನ್ನೊಮ್ಮೆ ಹೇಳುವುದಾದರೆ ಹೇಳಬಹುದು, ಹೇಳುವುದಿಲ್ಲ ಎಂದರೆ ಮಾತೇ ಮುಗಿದು ಹೋಯಿತು. ತಮಗೆ ಬಿಟ್ಟ ವಿಚಾರ. ನಾನು ಒಂದು ರೂಲಿಂಗ್ ಕೊಟ್ಟಿದ್ದೇನೆ. ಆ ರೂಲಿಂಗ್ ಹಿನ್ನೆಲೆಯಲ್ಲಿ ತಾವು ಮಾತನಾಡುವುದಾದರೆ ಮಾತನಾಡಿ. ಇಲ್ಲಾ ಅಂದರೆ ಎಲ್ಲರೂ ಒಪ್ಪಿ ಚರ್ಚೆಯನ್ನು ಬಿಟ್ಟರೆ, ಬಿಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಸದನವನ್ನು ನಡೆಸೋಣ, ಮಾನ್ಯ ಮುಖ್ಯಮಂತ್ರಿಗಳು ಬೇರೆ ಸಚಿವರು ಪ್ರಶ್ನೆಗಳಿಗೆ ಉತ್ತರವನ್ನು ಕೊಡಲು ತಯಾರಾಗಿದ್ದಾರೆ. ಈಗ ಪ್ರಶ್ನೋತ್ತರವನ್ನು ನಡೆಸೋಣ.

(ಗೊಂದಲ)

(6.00 ಗಂಟೆ)

**ಶ್ರೀ ವಿ.ಆರ್. ಸುದರ್ಶನ್:–** ಮಾನ್ಯ ಸಭಾಪತಿಗಳೆ, ಮಾನ್ಯ ಮುಖ್ಯಮಂತ್ರಿಗಳು ಸದನದ ಮತ್ತು ವಿಧಾನಮಂಡಲದ ಗೌರವದ ಬಗ್ಗೆ ಮಾತನಾಡಿದ್ದಾರೆ ಅದಕ್ಕಾಗಿ ಅವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಾವು ಕೂಡ ವಿಧಾನಮಂಡಲದ ಗೌರವದ ಹಿನ್ನಲೆಯಲ್ಲಿಯೇ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇವೆ. ಅದರ ಅರಿವಿನಿಂದಲೇ ನಾವು

ಮಾತನಾಡಿದ್ದೇವೆ ಎಂದು ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಹೇಳಬಯಸುತ್ತೇನೆ. About this, Mr. Nanaiah has made it very clear. ಅವರು ಬರಿ ವಿಧಾನಸಭೆಯ ಸದಸ್ಯರಾಗಿದ್ದರೆ ಮಾತನಾಡುತ್ತಿರಲಿಲ್ಲ. ನಾವು ವಿಧಾನಸಭೆಯ ಕಾರ್ಯಕಲಾಪಗಳ ಬಗ್ಗೆ ಚರ್ಚೆ ಮಾಡಲು ಹೊರಟಿಲ್ಲ. ಅದರ ಅರಿವು ನಮಗೆ ಇದೆ. ನಿಯಮಗಳು ಅಂತಹ ಚರ್ಚೆಗೆ ಎಷ್ಟರಮಟ್ಟಿಗೆ ಅವಕಾಶ ಕೊಡುತ್ತವೆ ಎನ್ನುವುದು ಇಲ್ಲಿ ಇರುವ ಪ್ರತಿಯೊಬ್ಬ ಸದಸ್ಯರಿಗೂ ಗೊತ್ತಿದೆ. ಇಲ್ಲಿ ಇರುವ ಪ್ರಶ್ನೆ ಎಂದರೆ, ಮೂರು ಜನ ಸಚಿವರು ರಾಜೀನಾಮೆ ಕೊಟ್ಟಿದ್ದಾರೆ, ಅದನ್ನು ರಾಜ್ಯಪಾಲರಿಗೂ ಕಳುಹಿಸಿ ಸರ್ಕಾರ ಅಂಗೀಕಾರ ಮಾಡಿದೆ. ಈ ಸದನದ ಸದಸ್ಯರಾಗಿ ಆ ಸಚಿವರು ಏಕೆ ರಾಜೀನಾಮೆ ಕೊಟ್ಟಿದ್ದಾರೆ ಎಂದು ಕೇಳುವ ಹಕ್ಕು, ಜವಾಬ್ದಾರಿ ಈ ಸದನದ ಎಲ್ಲಾ ಸದಸ್ಯರಿಗೂ ಇದೆ. ಈ ರಾಜ್ಯದ ಜನರಿಗೆ ಸಂದೇಶವನ್ನು ಕೊಡುವಂತಹ ಜವಾಬ್ದಾರಿ ತಮಗೂ ಕೂಡ ಇದೆ. ಸದನ ಸಮಿತಿ ಮಾಡಲಾಗಿದೆ ಎಂದು ಹೇಳಿದರು, ನಾನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ತಮಗೂ ಗೊತ್ತಿದೆ, ನಾವು ರೂಲ್ಸ್ ಕಮಿಟಿಯನ್ನು ಮಾಡುವ ಸಮಯದಲ್ಲಿ ಒಂದು ಎಥಿಕ್ಸ್ ಸಮಿತಿಯನ್ನು ಮಾಡಿಕೊಳ್ಳಲಾಗಿತ್ತು. ಸದಸ್ಯರ ನಡವಳಿಕೆಗಳು ಸದನದ ಒಳಗೆ ಹೊರಗೆ ಹೇಗಿರಬೇಕು ಎನ್ನುವ ಬಗ್ಗೆ ಇದನ್ನು ರಚಿಸಲಾಗಿತ್ತು. ಲೋಕಸಭೆಯಲ್ಲಿ ಈಗಾಗಲೇ ಎಥಿಕ್ಸ್ ಸಮಿತಿಯನ್ನು ಮಾಡಿಕೊಂಡಿದ್ದಾರೆ. ನಾವು ಆಡಳಿತ ಪಕ್ಷದಲ್ಲಿದ್ದಾಗ, ತಾವು ವಿರೋಧ ಪಕ್ಷದಲ್ಲಿದ್ದ ಸಮಯದಲ್ಲಿ "ಸದಸ್ಯರ ನಡವಳಿಕೆಗಳು ಮತ್ತು ರಿವಾಬ್ದಾರಿಗಳು, ಸದನದ ಒಳಗೆ-ಹೊರಗೆ" ಎಂದು ನಮ್ಮ ಸದನದಲ್ಲಿಯು ನಾವು ಎಥಿಕ್ಸ್ ಸಮಿತಿಯನ್ನು ಮಾಡಿಕೊಂಡಿದ್ದೇವೆ. ವಿಧಾನಸಭೆಯಲ್ಲಿ ಏಕೆ ಇದುವರೆಗೆ ಮಾಡಿಕೊಂಡಿರುವುದಿಲ್ಲ ಎನ್ನುವುದು ನಮಗೆ ಗೊತ್ತಿಲ್ಲ. ಅಲ್ಲಿನ ಜವಾಬ್ದಾರಿ ಗೊತ್ತಿರುವವರು ವಿಚಾರ ಮಾಡಬೇಕು. ಇದೊಂದು pick and choose ಆಗಬಾರದು. ಅಗತ್ಯವಿದ್ದಾಗ ಒಂದು ಸಮಿತಿಯನ್ನು ಮಾಡಿಕೊಳ್ಳುವುದು...

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಇವರು ಯಾವ ನಿಯಮದ ಅಡಿಯಲ್ಲಿ ಚರ್ಚೆ ಮಾಡುತ್ತಿದ್ದಾರೆ? ಇದು ಅನಾವಶ್ಯಕವಾದ ಚರ್ಚೆ.

**ಸಭಾಪತಿಯವರು:-** ಅವರು ಚರ್ಚೆ ಮಾಡುತ್ತಿಲ್ಲ, ವಿಧಿ-ವಿಧಾನಗಳನ್ನು ಹೇಳುತ್ತಿದ್ದಾರೆ.

(ಗೊಂದಲ)

**ಶ್ರೀ ಎ. ರಾಮದಾಸ್:-** ರಾಜೀನಾಮೆ ಏಕೆ ಕೊಟ್ಟಿದ್ದಾರೆ ಎಂದು ಕೇಳಿದರು. ಅಲ್ಲಿ ವಿಧಾನಸಭೆಯಲ್ಲಿ ಅದಕ್ಕಾಗಿ ಒಂದು ಸದನದ ಸಮಿತಿಯನ್ನು ರಚನೆ ಮಾಡಲಾಗಿದೆ. ಇವರು ಅಲ್ಲಿ ಏಕೆ ಎಥಿಕ್ಸ್ ಸಮಿತಿ ಮಾಡಿಕೊಳ್ಳಲಿಲ್ಲ, ಏಕೆ ಎಥಿಕ್ಸ್ ಸಮಿತಿಗೆ ಕೊಡಲಿಲ್ಲ ಎಂದು ಇಲ್ಲಿ ಚರ್ಚೆ ಮಾಡಲು ಆಗುತ್ತದೆಯೇ? ಕೆಳಮನೆಯಲ್ಲಿ ಮಾಡಿರುವ ನಿರ್ಣಯವನ್ನು ಇಲ್ಲಿ ಚರ್ಚೆ ಮಾಡಲು ಆಗುತ್ತದೆಯೇ?

**ಶ್ರೀಮತಿ ಮೋಟಮ್ಮ:-** ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇದ್ದಾರೆ. ಅವರು ಉತ್ತರವನ್ನು ಕೊಡಲಿ.

(ಗೊಂದಲ)

**ಶ್ರೀ ಎ. ರಾಮದಾಸ್:-** ಅಲ್ಲಿ ನಡೆದಿರುವುದನ್ನು ಇಲ್ಲಿ ಮುಖ್ಯಮಂತ್ರಿಗಳು ಹೇಳಲು ಸಾಧ್ಯವಿಲ್ಲ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಗಳೆ, ಇಲ್ಲಿ ಚರ್ಚೆ ಮಾಡಲು ಅವಕಾಶವಿಲ್ಲ ಎಂದು ತಾವು ರೂಲಿಂಗ್ ಕೊಡಬೇಕು.

**ಶ್ರೀ ವಿ.ಆರ್. ಸುದರ್ಶನ್:-** ಇಲ್ಲಿ ಮಾನ್ಯ ಮುಖ್ಯಮಂತ್ರಿಗಳಿದ್ದಾರೆ. ಅವರು ಸರ್ಕಾರದ ಪರವಾಗಿ ಉತ್ತರ ಹೇಳಲು ಸಮರ್ಥರಾಗಿದ್ದಾರೆ. ನಾವು ನಿಯಮ 340ರ ಅಡಿಯಲ್ಲಿ ಸಹಿ ಮಾಡಿ ಒಂದು ನೋಟೀಸ್‌ನ್ನು ತಮಗೆ ಕಳುಹಿಸಿದ್ದೇವೆ. ಅದನ್ನು ತಾವು ಪರಿಗಣಿಸಬೇಕಾಗುತ್ತದೆ. ನಿಯಮ 340 ಏನು ಹೇಳುತ್ತದೆ ಎಂದರೆ,

> **"340. Suspension of Rules:-** Any member may, with the consent of the Chairman move that any rule may be suspended in its application to a particular motion before

the Council and if the motion is carried, the rule in question shall be suspended for the time being."

ದಯಮಾಡಿ ತಾವು ಅದನ್ನು consider ಮಾಡಬೇಕು. ಚರ್ಚೆಗೆ ಅವಕಾಶವನ್ನು ಕೊಡಬೇಕು. ಇದು ಈ ಸದನದ ಗೌರವದ ಪ್ರಶ್ನೆ. ವಿಧಾನಮಂಡಲದ ಮಹತ್ವದ ಪ್ರಶ್ನೆ, ನಮ್ಮ ಪರಂಪರೆಗಳ ಪ್ರಶ್ನೆಯಾಗುತ್ತದೆ. ಇದು ಬಹಳ ಹಗುರವಾಗಿ ತೆಗೆದುಕೊಳ್ಳುವಂತಹದಲ್ಲ. ನಮಗೆ ಕಳುಹಿಸಿ ಕೊಟ್ಟಿರುವ ಕಾರ್ಯಕಲಾಪಗಳ ಪಟ್ಟಿ ಪ್ರಕಾರ ಶುಕ್ರವಾರದವರೆಗೆ ಸದನ ನಡೆಯಬೇಕಾಗಿದೆ. ಆದರೆ ನಮಗೆ ಬಂದ ಮಾಹಿತಿ ಪ್ರಕಾರ ವಿಧಾನ ಸಭೆಯನ್ನು ಈಗಾಗಲೇ ಅನಿರ್ದಿಷ್ಟ ಕಾಲ ಮುಂದೂಡಲಾಗಿದೆ ಎಂದ ಮೇಲೆ ವಿಧಾನ ಪರಿಷತ್ತನ್ನು ಅನಿರ್ದಿಷ್ಟ ಕಾಲ ಮುಂದೂಡುವ ಉದ್ದೇಶ ಸರ್ಕಾರಕ್ಕೆ ಇದೆಯೇ? ಇದೇ ಸಂದೇಶವನ್ನು ಜನರಿಗೆ ಕೊಡುತ್ತೀರಾ?

**ಶ್ರೀ ಎ. ರಾಮದಾಸ್:-** ಬಾವಿಯಲ್ಲಿ ಕುಳಿತು ಸದನ ನಡೆಯದಂತೆ ಮಾಡಿದವರು ನಿಮ್ಮವರೆ, ಇಲ್ಲಿ assumption, presumption ಬೇಡ.

**ಶ್ರೀ ವಿ.ಆರ್. ಸುದರ್ಶನ್:-** ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡುವುದೇ ಸರ್ಕಾರ ಜನರಿಗೆ ಕೊಡುವಂತಹ ಸಂದೇಶವೇ? ನಾವು ಎರಡು ದಿನಗಳ ವಿಷಯಗಳನ್ನು ತಮಗೆ ಕಳುಹಿಸಿ ಕೊಟ್ಟಿದ್ದೇವೆ. ಅವುಗಳ ಗತಿ ಏನು? ಕಾರ್ಯಕಲಾಪಗಳನ್ನು ನಡೆಸುವಂತಹ ಜವಾಬ್ದಾರಿ ಎಲ್ಲರಿಗೂ ಇದೆ. ಒಂದು ಸಾರಿ ಸದನ ಪ್ರಾರಂಭವಾದ ಮೇಲೆ ಎಲ್ಲರಿಗೂ ಜವಾಬ್ದಾರಿ ಇರುತ್ತದೆ, ಬರಿ ಸರ್ಕಾರಕ್ಕೆ ಮಾತ್ರ ಜವಾಬ್ದಾರಿ ಇರುವುದಿಲ್ಲ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಗಳೆ, I am on a Point of Order.

**ಶ್ರೀ ವಿ.ಆರ್. ಸುದರ್ಶನ್:-** ಯಾವ ಪಾಯಿಂಟ್ ಆಫ್ ಆರ್ಡರ್ ಇದಕ್ಕೆ. ಎಲ್ಲದಕ್ಕೂ ಪಾಯಿಂಟ್ ಆಫ್ ಆರ್ಡರ್ ಹೇಳುತ್ತ ಹೋದರೆ ಇದಕ್ಕೆ ಏನು ಅರ್ಥ?

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಕೆಳಮನೆಯ ನಿರ್ಣಯವನ್ನು ಇಲ್ಲಿ ಪ್ರಶ್ನೆ ಮಾಡಲು ಆಗುವುದಿಲ್ಲ, ಯಾವುದೇ ಅಧಿಕಾರವಿಲ್ಲ.

**ಶ್ರೀ ವೀರಣ್ಣ ಮತ್ತೀಕಟ್ಟಿ:–** ಮಾನ್ಯ ಸಭಾಪತಿಗಳೆ, ಸದನ ನಡೆಸುವ ಸಲುವಾಗಿ ಚರ್ಚೆ ಮಾಡಲು ಸದನ ಸಲಹಾ ಸಮಿತಿ ಇದೆ. ಇದು ಎಲ್ಲರಿಗೂ ಗೊತ್ತಿದೆ. ತಮ್ಮ ಅಧ್ಯಕ್ಷತೆಯಲ್ಲಿ ನಿನ್ನೆ ಸದನ ಸಲಹಾ ಸಮಿತಿಯಲ್ಲಿ ಚರ್ಚೆ ಮಾಡಿ ಈಗಾಗಲೇ ಕೆಲವು ನಿರ್ಧಾರಗಳನ್ನು ತೆಗೆದುಕೊಂಡಿದ್ದೀರಿ. ಆ ಪ್ರಕಾರ ಸದನ ನಡೆಯಬೇಕು ಅದು ಮುಖ್ಯ. ಬೇರೆ ಪ್ರಶ್ನೆ ಇಲ್ಲಿ ಬರುವುದಿಲ್ಲ. ಅದರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಭಾಗವಹಿಸಿದ್ದರು.

**ಶ್ರೀ ಎ. ರಾಮದಾಸ್:–** ಸರ್ಕಾರಕ್ಕೆ ಸದನವನ್ನು ನಡೆಸಲು ಆಗುತ್ತಿಲ್ಲ ಎಂದು ಅವರು ಹೇಳಿರುವ ಮಾತನ್ನು ಕಡತದಿಂದ ದಯಮಾಡಿ ತೆಗೆದು ಹಾಕಬೇಕು.

(ಗೊಂದಲ)

**ಶ್ರೀ ವಿ.ಆರ್. ಸುದರ್ಶನ್:–** ಮಾನ್ಯ ಸಭಾಪತಿಗಳೆ, ಮಾನ್ಯ ಮುಖ್ಯಮಂತ್ರಿಗಳು ಗೌರವದ ಪ್ರಶ್ನೆ, ಜವಾಬ್ದಾರಿಯ ಪ್ರಶ್ನೆ ಎಂದು ಹೇಳುತ್ತಿದ್ದಾರೆ. ಅದಕ್ಕೆ ನಾವು ಏನು ಹೇಳುತ್ತೇವೆ ಎಂದರೆ, ಈ ಎಲ್ಲ ಪ್ರಶ್ನೆಗಳನ್ನು ಸರ್ಕಾರಕ್ಕೆ ಕೇಳುವಂತಹ ವಾತಾವರಣ ಇವತ್ತು ಇಲ್ಲ. ಸರ್ಕಾರವು ಕೂಡ morality ಕಳೆದುಕೊಂಡಿದೆ. ನೈತಿಕತೆಯನ್ನು ಕಳೆದುಕೊಂಡಿದೆ. ಈ ಸರ್ಕಾರ ರಾಜೀನಾಮೆಯನ್ನು ಕೊಡಬೇಕಾಗುತ್ತದೆ. We demand the resignation of the Government. ಸರ್ಕಾರದ ನೈತಿಕತೆ ಹೋಗಿದೆ, ಸರ್ಕಾರ ತಮ್ಮ ಜವಾಬ್ದಾರಿಯನ್ನು ಕಳೆದುಕೊಂಡಿದೆ, ಈ ಸರ್ಕಾರಕ್ಕೆ ಅಧಿಕಾರದಲ್ಲಿ ಮುಂದುವರೆಯುವಂತಹ ಯಾವ ನೈತಿಕ ಹಕ್ಕು ಇಲ್ಲ. ನೈತಿಕತೆ, ಜವಾಬ್ದಾರಿ, ಗೌರವದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳೇ ಹೇಳಿರುವ ಹಿನ್ನೆಲೆಯಲ್ಲಿ ಸರ್ಕಾರವು ರಾಜೀನಾಮೆಯನ್ನು ಕೊಡಬೇಕೆಂದು ನಾನು ನನ್ನ ಆಗ್ರಹವನ್ನು ಮಾಡುತ್ತೇನೆ.

(ಗೊಂದಲ)

**ಡಾ|| ಎ.ಎಚ್. ಶಿವಯೋಗಿಸ್ವಾಮಿ:–** ಮಾನ್ಯ ಸಬಾಪತಿಗಳೆ, ಇವರು ಈ ರೀತಿ ನೈತಿಕತೆಯ ಬಗ್ಗೆ ಮಾತನಾಡಲು ಇಲ್ಲಿ ಅವಕಾಶವಿಲ್ಲ.

(ಗೊಂದಲ)

**ಸಭಾಪತಿಯವರು:–** ದಯಮಾಡಿ ಎಲ್ಲರೂ ಸ್ವಲ್ಪ ಗಮನಿಸಿ. ಮಾನ್ಯ ಮುಖ್ಯಮಂತ್ರಿಗಳು ಈಗ ಒಂದು ವಿಷಯವನ್ನು ಪ್ರಸ್ತಾಪಿಸಿದರು ಎನ್ನುವುದನ್ನು ನಾನು ಪ್ರಸ್ತಾಪಿಸುತ್ತಾ, ನನ್ನ ಪೂರ್ಣ ತೀರ್ಮಾನವನ್ನು ಹೇಳಿದ್ದೇನೆ. ನಾವು ಹೇಳಿರುವ ಮಿತಿಯಲ್ಲಿ ಚರ್ಚೆ ಮಾಡಿದರೆ ನಾವು ಚರ್ಚೆಗೆ ತಯಾರಿದ್ದೇವೆ, ಆದರೆ ಅದನ್ನು ಬಿಟ್ಟು ಬೇರೆ ಯಾವುದೇ ವಿಚಾರವನ್ನು ಪ್ರಸ್ತಾಪ ಮಾಡುವುದಾದರೆ ಸರಿ ಹೋಗುವುದಿಲ್ಲ ಎಂದು ಹೇಳಿದ್ದಾರೆ. ಆ ಮಾತಿಗೆ ತಾವು ಒಪ್ಪುವುದಾದರೆ, ಅಷ್ಟರಮಟ್ಟಿಗೆ ಪ್ರಸ್ತಾಪ ಮಾಡಲು, ಚರ್ಚೆ ಮಾಡಲು ನಾನು ಅನುಮತಿಯನ್ನು ಕೊಡಬಹುದು. ಆದರೆ ನನ್ನ ಎರಡು ಅಂಶಗಳನ್ನು ಹೇಳುತ್ತೇನೆ, ತಮ್ಮಿಂದ ಯಾವುದೇ ನೋಟಿಸ್ ಇಲ್ಲ, ನಿಯಮ 324ರ ಅಡಿಯಲ್ಲಿ ಚರ್ಚೆ ಮಾಡಲು ಬರುವುದಿಲ್ಲ. ಆದರೆ ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದಕ್ಕೆ ಅವರ ಸ್ಥಾನಕ್ಕೆ ಗೌರವವನ್ನು ನಾನು ಕೊಡಲೇಬೇಕಾಗುತ್ತದೆ. ಒಂದು ಸೀಮಿತವಾಗಿ, ಲಿಮಿಟ್‌ನಲ್ಲಿ ಚರ್ಚೆ ಮಾಡುತ್ತೇವೆ ಎನ್ನುವುದಾದರೆ ಚರ್ಚೆ ಮಾಡಬಹುದು ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಚರ್ಚೆ ಮಧ್ಯದಲ್ಲಿ ಅವರು ಕಾರಣವನ್ನು ಕೇಳಿದ್ದಾರೆ ಅದಕ್ಕೆ ಉತ್ತರ ಕೊಡುವುದು, ಬಿಡುವುದು ಸರ್ಕಾರಕ್ಕೆ ಬಿಟ್ಟ ವಿಚಾರ.

**ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿ:–** ಮಾನ್ಯ ಸಭಾಪತಿಗಳೆ, ಸರ್ಕಾರ ಉತ್ತರವನ್ನು ಕೊಟ್ಟಾಗಿದೆ.

**ಸಭಾಪತಿಯವರು:–** ಸರ್ಕಾರ ಉತ್ತರವನ್ನು ಕೊಟ್ಟಾಗಿದೆ. ಮತ್ತೆ ಇಲ್ಲಿ ಚರ್ಚೆ ಮಾಡುವುದು? ಬೇರೆ ಏನೇ ಚರ್ಚೆ ಮಾಡುವುದು ಅಪ್ರಸ್ತುತ ಇಲ್ಲಿ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಗಳೆ, ಪ್ರಶ್ನೋತ್ತರವನ್ನು ತೆಗೆದುಕೊಳ್ಳಿ.

**ಶ್ರೀಮತಿ ಮೋಟಮ್ಮ:–** ಮಾನ್ಯಸಭಾಪತಿಗಳೆ ನಾವು ತಮಗೆ ಗೌರವ ಕೊಟ್ಟು, ಮಾನ್ಯ ಮುಖ್ಯಮಂತ್ರಿಗಳಿಗೆ ಗೌರವ ಕೊಟ್ಟು ಸರ್ಕಾರದ ಹೇಳಿಕೆಯನ್ನು ನಾವು ಕೇಳಿದ್ದೇವೆ. ನಮ್ಮ ಬೇಡಿಕೆ ಏನು ಎನ್ನುವುದನ್ನು ನಾವು

ಹೇಳಿದ್ದೇವೆ. ಇದರ ಪೂರ್ಣ ಚರ್ಚೆಗೆ ಎಲ್ಲರಿಗೂ ಅವಕಾಶ ಕೊಡಬೇಕು ಎನ್ನುವುದು ನಮ್ಮ ಬೇಡಿಕೆಯಾಗಿತ್ತು. ಬೆಳಗ್ಗಿನಿಂದ ಇದೇ ವಾದವನ್ನು ನಾವು ಮಾಡುತ್ತಿದ್ದೇವೆ.. ನೀವು ಬರುವ ಮೊದಲು ಹುರಳಿಲ್ಲದ ಹೇಳಿಕೆ ಬಂತು ಎನ್ನುವ ಮಾತನ್ನು ನಾವು ಹೇಳಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಬಂದು ಉತ್ತರ ಕೊಡುವಾಗ, ಮೂರು ಜನ ಸಚಿವರು ರಾಜೀನಾಮೆಯನ್ನು ಕೊಟ್ಟಿದ್ದಾರೆ, ಆದರೆ ಅವರು ರಾಜೀನಾಮೆಯನ್ನು ಕೊಡುವಾಗ ನಾವು ಯಾವ ದೊಡ್ಡ ತಪ್ಪನ್ನು ಮಾಡಿಲ್ಲ, ಆದರೂ ನಾವು ನಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇವೆ ಎಂದು ಹೇಳಿದರು ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಅಲ್ಲದೆ ಈ ಘಟನೆಯಿಂದ ನನ್ನ ಮನಸ್ಸಿಗೆ ನೋವಾಗಿದೆ ಎಂದು ಅವರು ಹೇಳಿದರು. ಇಂತಹ ಘಟನೆಗಳು ಮುಂದೆ ನಡೆಯಬಾರದು. ಒಂದು ಸಮಿತಿಯನ್ನು ರಚನೆ ಮಾಡಿದ ತಕ್ಷಣ yardstick ಆಗುವುದಿಲ್ಲ.

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಗಳೆ, ಕೆಳಮನೆಯ ಸಭಾಧ್ಯಕ್ಷರು ಒಂದು ಸಮಿತಿಯನ್ನು ರಚನೆ ಮಾಡಿದ ಮೇಲೆ, ಆ ಸಮಿತಿಯ ಮೇಲೆ ಯಾವುದೇ ಚರ್ಚೆಯನ್ನು ಮಾಡಲು ಅಧಿಕಾರವಿಲ್ಲ ಮತ್ತು ಸರಿಯಲ್ಲ. It is the prerogative power of that House. ಆ ಸಮಿತಿ ಮಾಡಿದ ತಕ್ಷಣ ಎಲ್ಲವು ಸರಿ ಹೋಗುವುದಿಲ್ಲ ಎಂದರೆ, ಇದು ವ್ಯಾಪ್ತಿ ಮೀರಿ ಹೋಗುವಂತಹದ್ದು, ಇದು ಸರಿಯಲ್ಲ.

**ಶ್ರೀಮತಿ ಮೋಟಮ್ಮ:–** ಆ ಸಮಿತಿಯಿಂದ ನ್ಯಾಯ ದೊರೆಯುತ್ತದೆ ಎನ್ನುವ ನಂಬಿಕೆ ನಮಗೆ ಇಲ್ಲ ಎನ್ನುವ ಮಾತನ್ನು ಹೇಳುತ್ತಿದ್ದೇನೆ.

**ಸಭಾಪತಿಯವರು:–** ಹಾಗೆ ಹೇಳಕೂಡದು.

(ಗೊಂದಲ)

**ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿ:–** ಸಭಾಧ್ಯಕ್ಷರು ರಚನೆ ಮಾಡಿರುವ ಸಮಿತಿಯಿಂದ ನ್ಯಾಯ ಸಿಗುತ್ತದೆ ಎನ್ನುವ ನಂಬಿಕೆ ನಮಗೆ ಇಲ್ಲ ಎಂದು ಹೇಳುವುದು ಸರಿಯಲ್ಲ.

**ಶ್ರೀಮತಿ ಮೋಟಮ್ಮ:–** ಇದು ಸದನದ ಒಳಗೆ ನಡೆದಿರುವಂತಹ ಸಂಗತಿ.

**ಶ್ರೀ ಎ. ರಾಮದಾಸ್:–** ಸದನ ಸಮಿತಿಯಲ್ಲಿ ಎಲ್ಲ ಪಕ್ಷದ ಸದಸ್ಯರು ಇರುತ್ತಾರೆ.

(ಗೊಂದಲ)

**ಶ್ರೀಮತಿ ಮೋಟಮ್ಮ:–** ಹಗರಣಗಳ ಮೇಲೆ ಹಗರಣಗಳು ಬೆಳೆಯುತ್ತಾ ಹೋಗುತ್ತಿವೆ. ಆದ್ದರಿಂದ ಮಾನ್ಯ ಸುದರ್ಶನ್‌ರವರು ಏನು ಹೇಳಿದ್ದಾರೆ ನಾನು ಕೂಡ ಅದನ್ನೇ ಹೇಳುತ್ತೇನೆ. ಸರ್ಕಾರಕ್ಕೆ ಮುಂದುವರೆಯುವ ನೈತಿಕತೆ ಇಲ್ಲ. ಸರ್ಕಾರವನ್ನು ವಿಸರ್ಜನೆ ಮಾಡಿ ಹೊಸ ಚುನಾವಣೆ ಹೋಗಬೇಕು.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಸರ್ಕಾರವನ್ನು ವಿಸರ್ಜನೆ ಮಾಡಬೇಕು, ನಾವೆಲ್ಲರೂ ಹೊಸದಾಗಿ ಚುನಾವಣೆಗೆ ಹೋಗೋಣ, ಜನರ ಆದೇಶವನ್ನು ಪಡೆದುಕೊಳ್ಳೋಣ.

(ಗೊಂದಲ)

**ಸಭಾಪತಿಯವರು:–** ಅವರ ಉದ್ದೇಶ ಏನು ಎನ್ನುವುದು ಗೊತ್ತಾಯಿತು.

**ಶ್ರೀಮತಿ ಮೋಟಮ್ಮ:–** ಸನ್ಮಾನ್ಯ ಸಭಾಪತಿಯವರೇ, ಇಡೀ ದೇಶದಲ್ಲಿ ಏನೇನು ನಡೆಯುತ್ತಿದೆ ಅದನ್ನು ಪಟ್ಟಿ ಮಾಡಿಕೊಂಡು ಇಲ್ಲಿ ಓದುತ್ತಾರೆ. ಅದು ಸರಿಯಲ್ಲ. ಎಲ್ಲೋ ಮಾಡಿರುವುದನ್ನು ನಾವು ಇಲ್ಲಿ ಮುಂದುವರಿಸಬೇಕೆನ್ನುವ ಧೋರಣೆಯನ್ನು ವಿರೋಧಿಸಿ ನಾವು ಧರಣಿ ಮಾಡುತ್ತಿದ್ದೇವೆ.

(ಗೊಂದಲ)

**(ಈ ಹಂತದಲ್ಲಿ ಕಾಂಗ್ರೇಸ್ ಪಕ್ಷದ ಸದಸ್ಯರು ಸದನದ ಬಾವಿಯೊಳಗೆ ಬಂದರು.)**

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಅವರ ರಾಜಕೀಯ ಉದ್ದೇಶವನ್ನು ಈಡೇರಿಸಿಕೊಳ್ಳುವುದಕ್ಕಾಗಿ ಅವರುಗಳು ಈ ಸದನವನ್ನು ಬಳಸಿಕೊಳ್ಳುತ್ತಿದ್ದಾರೆ. ಇದು ಅತ್ಯಂತ ದುರಾದೃಷ್ಟಕರವಾಗಿರುವಂತಹ ಸಂಗತಿಯಾಗಿದೆ. ಇದು ಈ ಸದನಕ್ಕೆ ಗೌರವ ತರುವ ವರ್ತನೆಯಲ್ಲ.

(ಗೊಂದಲ)

**ಸಭಾಪತಿಯವರು:–** ಮಾನ್ಯ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ಮರಳಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

(ಗೊಂದಲ)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸನ್ಮಾನ್ಯ ಸಭಾಪತಿಯವರೇ, ಅವರುಗಳ ಈ ರೀತಿಯ ವರ್ತನೆ ಸರಿಯಲ್ಲ. ಬೇಕಾದಾಗ ಬಾವಿಗೆ ಬರುತ್ತಾರೆ. ಮತ್ತೆ ಹೋಗುತ್ತಾರೆ ಮತ್ತೇ ಬಾವಿಗೆ ಬರುತ್ತಾರೆ.

(ಗೊಂದಲ)

**ಸಭಾಪತಿಯವರು:– ಒಬ್ಬರಿಗಿಂತ ಹೆಚ್ಚು ಜನರು ಮಾತನಾಡಿದರೆ ಅದು ದಾಖಲೆಗೆ ಹೋಗತಕ್ಕದ್ದಲ್ಲ.**

(ಗೊಂದಲ)

**ಶ್ರೀ ವೈ.ಎಸ್.ವಿ. ದತ್ತ:–** ಸನ್ಮಾನ್ಯ ಸಭಾಪತಿಯವರೇ, ಮೇಲ್ಮನೆ ಮತ್ತು ಕೆಳಮನೆ ಎಂದು ವಿಂಗಡಣೆ ಮಾಡುವುದು ಬೇಡ. ಇವತ್ತು ಕರ್ನಾಟಕ ರಾಜ್ಯದ ಮಾನ–ಮರ್ಯಾದೆ ಹರಾಜಾಗಿದೆ. ಇದು ರಾಜ್ಯದ ಆರು ಕೋಟಿ ಜನರ ಪ್ರಶ್ನೆಯಾಗಿದೆ.

(ಗೊಂದಲ)

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಯವರೇ, ಘನತೆವೆತ್ತ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಬಗ್ಗೆ ತಾವು ಮಾತನಾಡಬೇಕು.

**ಶ್ರೀ ಡಿ.ವಿ. ಸದಾನಂದಗೌಡ:–** ಸನ್ಮಾನ್ಯ ಸಭಾಪತಿಯವರೇ, ನಾಳೆ ಉತ್ತರವನ್ನು ಕೊಡುತ್ತೇನೆ.

**ಸಭಾಪತಿಯವರು:–** ದಯಮಾಡಿ ನಾನು ಮತ್ತೊಮ್ಮೆ ಎಲ್ಲರಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಮರಳಿ ಸದನವನ್ನು ನಡೆಸುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ.

(ಗೊಂದಲ)

ಮತ್ತೊಮ್ಮೆ ಎಲ್ಲ ಗೌರವಾನ್ವಿತ ಸದಸ್ಯರಲ್ಲಿ ವಿನಂತಿ ಮಾಡುತ್ತಿದ್ದೇನೆ. ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಮರಳಿ ಸದನ ನಡೆಸುವುದಕ್ಕೆ ಅನುವು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 11 ಗಂಟೆಗೆ ಸೇರುವುದು.

**(ಸದನವು ಸಂಜೆ 6 ಗಂಟೆ 13 ನಿಮಿಷಗಳಿಗೆ ಮುಕ್ತಾಯಗೊಂಡು ಪುನಃ ದಿನಾಂಕ: 09ನೇ ಫೆಬ್ರವರಿ ಮಾಹೆ 2012ರ ಗುರುವಾರದಂದು**

**ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು.)**